ಶಾಸನ ರಚನಾ ಕಲಾಪಗಳು

೧೯೮೭ನೇ ಇಸವಿಯ ಕೈಗಾರಿಕಾ ವಿವಾದಗಳ (ಕರ್ನಾಟಕ, ತಿದ್ದುಪಡಿ ವಿಧೇಯಕ)

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಕೆ. ಕಾಂತಾ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕದ ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ಎಸ್.ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* Annexure

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ

ಶ್ರೀ ಎಂ. ಎಸ್. ಕೃಷ್ಣನ್.—ಪರಿಶೀಲನೆಗಾಗಿ ಇರುವ ಬಿಲ್‌ಗಳನ್ನು ಆಮೇಲೆ ತೆಗೆದುಕೊಳ್ಳೋಣ. ನಿನ್ನೆ ದಿನ, ಮೊನ್ನೆ ದಿನದಿಂದ ನಮ್ಮ ವಿಚಾರ ಚರ್ಚೆಗೆ ಬಂದಿಲ್ಲ, ಎರಡು ದಿವಸ ಆಗಿದೆ. ಮಾನ್ಯ ಪಂಪಾಪತಿಯವರು ದಾವಣಗೆರೆಯಲ್ಲಿ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಆಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಮೊದಲು ಒಂದು ಗಂಟೆಕಾಲ ಬಿಲ್ಸ್ ಆಗಲಿ. ಮೂರು ಗಂಟೆಯವರೆಗೆ ಬಿಲ್ಸ್ ತೆಗೆದುಕೊಂಡು ಅದನ್ನು ಮುಗಿಸಿದ ಮೇಲೆ ಬೇರೆ ವಿಚಾರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಹಾಗೇ ಆಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಆಗಲಿ

ಅಧ್ಯಕ್ಷರು.—ನೀವು ಎಲ್ಲಾ ಸಹಕಾರ ಕೊಡುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಸಹಕಾರ ಕೊಡುತ್ತಿದ್ದೇವೆ. ಆದರೆ ನೀವು ನಮ್ಮ ಪಾಯಿಂಟ್ ಅಫ್ ಆರ್ಡರ್‌ಗೆ ಅವಕಾಶ ಕೊಡುವುದಿಲ್ಲವಲ್ಲ.

೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ. ಬಿ. ಇನಾಮದಾರ್ (ಅಬಕಾರಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಗಿದೆ.

SRI D. B. INAMDAR.—The policy of the Government is to supply arrack in sealed bottles. The contractors should be the holders of distillery licence under Section 16. This has been done keeping in view various judgements given by various courts and also the experience of the Government, wherein interim arrangments have been made. The arrangement is holding good. with this view this legislation has been brought.

ಶ್ರೀ ಎಸ್. ಬಂಗಾರಪ್ಪ.—ಅಷ್ಟಕ್ಕೇ ಮುಗಿಸಿಬಿಟ್ಟರಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಮ್ಮ ಬೆಂಬಲ ಕೇಳಲೇ ಇಲ್ಲ. ಅಷ್ಟಕ್ಕೇ ಮುಗಿಸಿಬಿಟ್ಟಿರಿ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅಬಕಾರಿ ಸಚಿವರು ಮಂಡಿಸಿರತಕ್ಕಂಥ ಕರ್ನಾಟಕ ಎಕ್ಸೈಸ್ ಅಮೆಂಡಮೆಂಟ್ ಬಿಲ್ ೧೯೮೭, ಏನಿದೆ ಈ ಒಂದು ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸಿ ಮಾತನಾಡುವುದಕ್ಕೆ ನಿಂತಿದ್ದೇನೆ. ಇಲ್ಲಿರತಕ್ಕಂಥದ್ದು ಅಮೆಂಡಮೆಂಟ್‌ಟು ಸೆಕ್ಷನ್ ೧೬. Insertion of new Section 16A ಎನ್ನತಕ್ಕಂಥದ್ದು ಒಂದೇ ಒಂದು ಇಲ್ಲಿ ಇರುವುದು. ಇನ್ನು ಎರಡನೆ ವಿಚಾರ ಎಂದರೆ, ಈ ಸದನ ನಡೆಯದೇ ಇರತಕ್ಕಂಥ ಸಮಯದಲ್ಲಿ ಈ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿತ್ತು. ಆ ಸುಗ್ರೀವಾಜ್ಞೆಯನ್ನು ರೀಪ್ಲೇಸ್ ಮಾಡಬೇಕೆಂಬುದೇ ಇದರ ಉದ್ದೇಶ. ಸುಗ್ರೀವಾಜ್ಞೆ ಮೂಲಕ ತಂದಿರುವ ಕಾನೂನು ಸದನದಲ್ಲಿ ರೀಪ್ಲೇಸ್‌ಮೆಂಟ್ ಮಾಡುತ್ತಿರುವ ಬಿಲ್‌ಗಳಲ್ಲಿ ಇದೂ ಒಂದಾಗಿದೆ. ಇದನ್ನು ಮೊದಲನೆಯ ತಿದ್ದುಪಡಿ ಮಸೂದೆಯಾಗಿ ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ಸಭಾಧ್ಯಕ್ಷರೇ, Statement of objects and reason ನಲ್ಲಿ ಈ ಒಂದು ತಿದ್ದುಪಡಿ ಮಸೂದೆಯನ್ನು ಏತಕ್ಕೆ ತಂದಿದ್ದಾರೆ ಎನ್ನುವುದನ್ನು ಹೇಳಿದ್ದಾರೆ.

> "It is considered necessary to amend the Karnataka Excise Act, 1965 to provide that no licence to manufacture or to bottle, or to manufacture and bottle arrack for sale shall be granted to persons who are not the holders of distillery licence, under Section 16.
>
> As the Karnataka Legislative Council was not in Session."

ಇದರಲ್ಲಿ ಕೌನ್ಸಿಲ್ ಎಂದು ಹೇಳಿದ್ದಾರೆ. ಬಹುಶಃ ಕೌನ್ಸಿಲ್ ಕಾಪಿ ಕೊಟ್ಟಿದ್ದಾರೆಂದು ಕಾಣುತ್ತದೆ.

PROF. A. LAKSHMISAGAR.—No, no. It is correct. Council was not in Session. It was prorogued...

SRI S. BANGARAPPA.—you are right. "This bill seeks to replace the said Ordinance." ಏತಕ್ಕಾಗಿ ಇದನ್ನು ತಂದಿದ್ದಾರೆ ಎನ್ನತಕ್ಕ ವಿಚಾರದಲ್ಲಿ ಕೌನ್ಸಿಲ್ ಎಂದು ಮೆನ್ಷನ್ ಮಾಡಿರುವುದು ಕಾನೂನು ಪ್ರಕಾರ ಸರಿಯಾಗಿದೆ. ಮಾನ್ಯ ಸಭಾಧ್ಯಕ್ಷರೇ, ಅಬಕಾರಿ ಕಾಯಿದೆಯ ೧೬ನೇ ಸೆಕ್ಷನ್‌ನಲ್ಲಿ ಯಾರು ಯಾರಿಗೆ ಕೊಡಬೇಕು, ಏನು ಮಾಡಬೇಕೆಂದು ಪಟ್ಟಿ ಮಾಡಿ ಹೇಳಲಾಗಿದೆ. ಈ ಹಿಂದೆಯೇ ಸದನದಲ್ಲಿ ಇದರ ಬಗ್ಗೆ ಚರ್ಚೆಗೆ ಬಂದಾಗ ಮಾತನಾಡಿದ್ದೇವೆ. ಡಿಸ್ಟಿಲರಿ ಲೈಸನ್ಸ್ ಇಲ್ಲದೇ ಇರತಕ್ಕಂಥವರಿಗೆ ಕೂಡ ಅರ್ರ್ಯಾಕ್ ಬಾಟ್ಲಿಂಗ್ ಮಾಡುವುದಕ್ಕೆ ಕಂಟ್ರ್ಯಾಕ್ಟನ್ನು ಹೇಗೆ ಕೊಟ್ಟರು ಎನ್ನುವುದು ಇರತಕ್ಕ ವಿಚಾರ. ಈಗ ಅಬಕಾರಿ ಸಚಿವರಾದ ಶ್ರೀ ಇನಾಂದಾರ್‌ರವರು ಹೇಳಿದ ಹಾಗೆ ಕೋರ್ಟಿನಿಂದ ಕೆಲವು ತೀರ್ಪುಗಳು ಬಂದ ಮೇಲೆ ಅಂದರೆ ಹೈಕೋರ್ಟಿನಿಂದ ಮತ್ತು ಸುಪ್ರೀಮ್ ಕೋರ್ಟಿನಿಂದ ತೀರ್ಪುಗಳು ಬಂದ ಮೇಲೆ ನಾವು ಇದನ್ನು ತಂದಿದ್ದೇವೆ ಎಂದರು. ಮಾನ್ಯ ಇನಾಂದಾರರವರು ಇತ್ತೀಚೆಗೆ ನೂತನ ಅಬಕಾರಿ ಸಚಿವರಾಗಿ ಬಂದಿದ್ದಾರೆ. ಈಗ ನಾನು ಹೇಳುವುದನ್ನು ಅವರು ತಪ್ಪು ತಿಳಿದುಕೊಳ್ಳಬಾರದು. ನೀವು ಸಚಿವರಾಗುವ ಮೊದಲು ಹೈಕೋರ್ಟಿನ ತೀರ್ಪುಗಳು ಮತ್ತು ಸುಪ್ರೀಮ್ ಕೋರ್ಟಿನಿಂದ ತೀರ್ಪುಗಳು ಬಂದವು. ಆ ತೀರ್ಪುಗಳು ಬಂದಮೇಲೆ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆಂದು ತಾವು ಹೇಳಿದ್ದೀರಿ. ಇವತ್ತು ನಾನು ಹೇಳುವುದನ್ನು ಕಿವಿ ಮಾತು ಎಂದು ತಾವು ತಿಳಿದುಕೊಳ್ಳಬೇಕು. ಇದು ಎಚ್ಚರಿಕೆಯ ಮಾತು ಎಂದು ತಿಳಿದುಕೊಂಡರೂ ತಪ್ಪಿಲ್ಲ. ಮಾನ್ಯ ಮಂತ್ರಿಯವರು ಬಹಳ ಎಚ್ಚರಿಕೆಯಿಂದ ಇರಬೇಕು. ಏಕೆಂದರೆ ಹಿಂದೆ ಶ್ರೀಮಾನ್ ಜಿಗಜಿಣಗಿಯವರು ಅಬಕಾರಿ ಇಲಾಖೆಯನ್ನು ವಹಿಸಿಕೊಂಡಿದ್ದರು. ಅವರಿಗೂ ನಾನು ಕೆಲವು ಮಾತುಗಳನ್ನು ಹೇಳಿದ್ದೆ. ಸಾರಾಯಿಯನ್ನು ಬಾಟ್ಲಿಗೆ ಹಾಕಿ ಸೀಲ್‌ಮಾಡಿ ಕೊಡತಕ್ಕಂಥ ವಿಚಾರದಲ್ಲಿ ಶ್ರೀಮಾನ್ ಜಿಗಜಿಣಗಿಯವರ ವ್ಯಾಪ್ತಿಯನ್ನು ಮೀರಿ ವಿಚಾರಗಳು ಹೋಗಿದ್ದವು. ಈ ವಿಚಾರಗಳು

೩-೦೦ ಪಿ. ಎಂ.

ಹೈಕೋರ್ಟಿನಲ್ಲಿ ಚರ್ಚೆಗೆ ಬಂದಾಗ, ಸುಪ್ರೀಂ ಕೋರ್ಟಿನಲ್ಲಿ ಚರ್ಚೆಗೆ ಬಂದಾಗ, ಯಾವ ಇಲಾಖಾ ಫೈಲುಗಳು ಓಡಾಡಿದವು, ಅವು ಮುಖ್ಯಮಂತ್ರಿಗಳವರ ರುಜುಗಳನ್ನು ಕೂಡಾ ಪಡೆದಿದ್ದವು. ಇವೊತ್ತು ಮುಖ್ಯಮಂತ್ರಿಗಳ ಮಟ್ಟದಲ್ಲಿ ಫೈಲ್‌ಗಳು ರುಜುವಿಗಾಗಿ ಹೋಗತಕ್ಕಂಥ ಮಟ್ಟಕ್ಕೆ ಹೋದರೆ, ಸಹಜವಾಗಿಯೇ ಇಲಾಖಾ ಮಂತ್ರಿಗಳಿಗೆ ಕಷ್ಟವಾಗುತ್ತದೆ. ಕಾನೂನು ಪರಿಮಿತಿಯಲ್ಲಿ ನೀವು ಕೆಲವು ವಿಚಾರಗಳಲ್ಲಿ ಕಷ್ಟಪಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಹೈಕೋರ್ಟಿಗೆ, ಸುಪ್ರೀಂ ಕೋರ್ಟಿಗೆ ಅಬಕಾರಿ ಮಂತ್ರಿಯವರು, ಕೋರ್ಟಿನ ಮುಂದೆ ಕೊಟ್ಟಿರತಕ್ಕಂಥ ಅಫಿಡವಿಟ್ ನೋಡಿದರೆ, ಮುಖ್ಯಮಂತ್ರಿಗಳು ಒಂದು ಕಂಪನಿಗೆ ಈ ಕೆಲಸವನ್ನು ವಹಿಸಿಕೊಟ್ಟರೆ bottling of arrack ವಿಚಾರದಲ್ಲಿ ಇವರ infrastucture, financial position of each individual to whom this manufacturing licence was granted previously ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ನೋಡಿಕೊಂಡರು ಎಂದು ಹೇಳುತ್ತೇನೆ. The then Home Commissioner's quoting on the file said that no enquiry has been made to ascertain the infrastructure or the financial position of the individual or the company to whom this licence was garnted ಎನ್ನತಕ್ಕಂಥ ವಿಚಾರದಲ್ಲಿ ascertain ಮಾಡಿಲ್ಲ ಎನ್ನತಕ್ಕಂಥ ನೋಟ್ ಹೋಂ ಕಮಿಶನರ್‌ರವರಿಂದ ಬಂತು. ಇದರಲ್ಲಿ Finance Commissioner also said that the financial position of each individual or the compauv was not ascertained. ಈ ವಿಚಾರ ನೋಡಿಲ್ಲ ಎನ್ನತಕ್ಕಂಥ ವಿಚಾರವೂ ಬಂತು. ಇಷ್ಟು ಬಂದರೂ ಕೂಡ over rule ಮಾಡಿ ಇವೊತ್ತು ಬೆಂಗಳೂರು ಏರಿಯಾದಲ್ಲಿ ಸಾರಾಯಿ ಬಾಟ್ಲಿಗೆ ತುಂಬಿ, ಮಾರಾಟ ಮಾಡತಕ್ಕಂಥ ವಿಚಾರ ಮಾಡಿದರು. When I was the Leader of Opposition here I quoted the dates on which the applications were invited by the Excise Commissioner, why the tenders were not called for by the Excise Commissioner or the Government concerned. ಏತಕ್ಕಾಗಿ ಹೀಗೆ ಆಯಿತು ಎನ್ನತಕ್ಕಂಥ ವಿಚಾರ ಮತ್ತು ವಿವರಗಳನ್ನು ನಾನು ಹಿಂದೆ ಬಹಳಷ್ಟು ಕೊಟ್ಟಿದ್ದೇನೆ. ಅದು ಈಗ ಹಳೆಯ ವಿಚಾರವಾಗಿದೆ ಹಾಗೂ ಹಳೆಯ ಚರಿತ್ರೆಯಾಗಿದೆ. ಈ ಚರಿತ್ರೆ ಆದಮೇಲೆ, ಕರ್ನಾಟಕ ಹೈಕೋರ್ಟ್‌ನವರು, ಸುಪ್ರೀಮ್ ಕೋರ್ಟ್‌ನವರು ಕೋರ್ಟ್ ತೀರ್ಪಿಗೆ ಅನುಗುಣವಾಗಿ ಹೇಳತಕ್ಕಂಥ ಮಾತಿನಲ್ಲಿ ಸತ್ಯ ಇದೆ. ಅದಕ್ಕಾಗಿ ಈ ವಿಚಾರವನ್ನು ತಂದಿದ್ದೀರಿ. ಹೈಕೋರ್ಟ್‌ನವರಾಗಲೀ, ಸುಪ್ರೀಮ್ ಕೋರ್ಟ್‌ನವರಾಗಲೀ, ಮತ್ತೆ ತಾವುಗಳು ದಯವಿಟ್ಟು ತಪ್ಪು ಹೆಜ್ಜೆಯನ್ನು ಇಡಬೇಡಿ. ಇವತ್ತು ತಾವುಗಳು ಹೊಸದಾಗಿ ಈ ಅಬಕಾರಿ ಮಂತ್ರಿ ಪದವಿಯನ್ನು ವಹಿಸಿಕೊಂಡಿರುವುದರಿಂದ ಕೆಲವು ವಿಚಾರಗಳು ನಿಮಗೆ ಗೊತ್ತು. ಕೋರ್ಟ್‌ನವರು ತೀರ್ಪುಗಳನ್ನು ಕೊಟ್ಟ ಮೇಲೆ, ಈ ತಿದ್ದುಪಡಿಯನ್ನು ತರಬೇಕಾದರೆ ಕಾರಣವೇನು ಎಂದು ನಾನು ಕೇಳುತ್ತಾ ಇದ್ದೇನೆ. ಕರ್ನಾಟಕ ಹೈಕೋರ್ಟಿನ ತೀರ್ಪುಗಳು ಮತ್ತು ಸುಪ್ರೀಂ ಕೋರ್ಟಿನ ತೀರ್ಪುಗಳ ಕೆಲವು ಭಾಗಗಳನ್ನು ಇಲ್ಲಿ ಓದಿ ಹೇಳಿದ್ದೇನೆ. ಹಾಗೂ ಅದರಲ್ಲಿನ ಕೆಲವು ಪ್ರಮುಖ ಅಂಶಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ಒಬ್ಬ ವ್ಯಕ್ತಿ ಡಿಸ್ಟಿಲರಿ ಇಟ್ಟುಕೊಂಡಿದ್ದರೆ, ಅವನಿಗೆ ಕೊಟ್ಟು ಬಿಡಬೇಕೆಂದು ಯಾವ ಕೋರ್ಟ್ ಹೇಳಲಿಲ್ಲ. ಹಾಗೆ ತಾವುಗಳು ವ್ಯಾಖ್ಯಾನ ಮಾಡಿಕೊಂಡಿದ್ದರೆ ಅದು ತಪ್ಪು. ಡಿಸ್ಟಿಲರಿ ಇಲ್ಲದಿದ್ದವರಿಗೆ ಕೊಡಬೇಕೆಂದು ನಾವು ಹೇಳುವುದಿಲ್ಲ. ಯಾರಿಗೆ ಈ ಕೆಲಸವನ್ನು ಮಾಡುವಂತಹ ಶಕ್ತಿ ಇದೆಯೋ ಅವರಿಗೆ ಕೊಡಬೇಕು. ಅದನ್ನು ತಾವು ಗಮನಿಸಬೇಕು. Suppose a person is having a distillery licence, ಅವನಿಗೆ ಕೊಡಬೇಕೆಂದು ಇದರ ಅರ್ಥ ಅಲ್ಲ. ಹೀಗೆ ಬಾಟ್ಲಿಂಗ್‌ಗೆ ಕೊಡಬೇಕೆನ್ನುವುದು ನಿಮ್ಮ ಪಾಲಿಸಿ. ಈ ಕುರಿತು ಜನರ ಆರೋಗ್ಯದ ಬಗ್ಗೆ ಮುಖ್ಯಮಂತ್ರಿಗಳವರು ವ್ಯಾಖ್ಯಾನ ಮಾಡಿದರು. ಲೂಸ್ ಮಾರಾಟ ಮಾಡುವಾಗ ಸಾರಾಯಿಗೆ ನೀರು ಸೇರಿಸುತ್ತಾರೆ ಕರ್ನಾಟಕ ರಾಜ್ಯದಲ್ಲಿ ಸಾರಾಯಿ ಕುಡಿಯತಕ್ಕಂಥವರ ಆರೋಗ್ಯ ಹಾಳಾಗಿ ಹೋಗುತ್ತಾ ಇದೆ. ಅವರು ಇಂತಹ ಮಲಿನ ಸಾರಾಯಿ ಕುಡಿದು ಒಣಗಿ ಹೋಗುತ್ತಿದ್ದಾರೆ ಎಂಬ ಕಾಳಜಿ ನಿಮ್ಮದು. ಕುಡಿಯುವ ಜನರು ಒಣಗಿಬಿಟ್ಟು ಆಸ್ಪತ್ರೆ ಸೇರಿಬಿಟ್ಟಿದ್ದಾರೆಂದು ಕಳವಳಗೊಂಡು ಮುಖ್ಯಮಂತ್ರಿ ಶ್ರೀ ಹೆಗಡೆಯವರು ಕರ್ನಾಟಕ ರಾಜ್ಯದ ಕುಡಿಯುವ ಜನರ ಆರೋಗ್ಯವನ್ನು ವೃದ್ಧಿ ಮಾಡಬೇಕೆಂದು ಬಾಟಲಿಯಲ್ಲಿ ಸಾರಾಯಿಯನ್ನು ಸೀಲ್ ಮಾಡಿಸಿ ಮಾರಿದರೆ ಅದು ಕಲಬೆರಕೆ ಇರುವುದಿಲ್ಲವಾದ್ದರಿಂದ ಕುಡಿಯುವವರ ಆರೋಗ್ಯ ವೃದ್ಧಿಯಾಗುತ್ತದೆಂದು ಹೆಗಡೆಯವರು ಮಾಡಿದ ವ್ಯಾಖ್ಯಾನ ಈ ಸದನದ ದಾಖಲೆ

ಯಲ್ಲಿ ಸೇರಿಹೋಗಿದೆ. ನಾನು ಕೇಳುತ್ತೇನೆ. ನಿಜವಾಗಿಯೂ ಆರೋಗ್ಯದ ದೃಷ್ಟಿಯಿಂದ ಆರೋಗ್ಯಕರ ಸಾರಾಯಿಯನ್ನು ಒದಗಿಸಬೇಕೆಂದು ಯಾವ ಸರ್ಕಾರ ಚಿಂತನೆ ಮಾಡಿದರೂ ಅದಕ್ಕೆ ನನ್ನ ಬೆಂಬಲ ಇದೆ. ಈ ಕುಡಿತದಿಂದ ಜನರ ಆರೋಗ್ಯ ಹೋಯಿತು. ದುಡ್ಡೂ ಹೋಯಿತು. ಅದನ್ನ ನಿಲ್ಲಿಸುವುದಕಂತೂ ಆಗುವುದಿಲ್ಲ ಬಿಡಿ. ನಮ್ಮ ಪಕ್ಷದ ಸರ್ಕಾರ ಇದ್ದಾಗಲೂ ಸಾರಾಯಿ ಹರಾಜು ಮಾಡುವುದು ಮತ್ತೊಂದು ಇತ್ತು. ಈ ಹೆಗಡೆಯವರ ಸರ್ಕಾರವೂ ಅದನ್ನು ಮುಂದುವರೆಸುತ್ತಿದ್ದಾರೆ. ಕುಡಿತದ ಬಗ್ಗೆ ಹಿಂದಿನ ಸರ್ಕಾರಗಳ ಒಪಿನಿಯನ್ ಬೇರೇನೋ ಇತ್ತು. ಆದರೆ ಹೆಗಡೆಯವರು ಅವರಿಗಿಂತಾ ಹತ್ತಾರು ಹೆಜ್ಜೆ ಮುಂದೆ ಹೋಗಿ ಜನರಿಗೆ ಕುಡಿಸಬೇಕು, ಅದರಲ್ಲೂ ಆರೋಗ್ಯ ಹುಡುಕಬೇಕು ಎಂಬ ವಿಚಾರಧಾರೆ ತಂದರು ಇದಕ್ಕಾಗಿ ಬಾಟಲಿಯಲ್ಲಿ ತುಂಬಿ ಮಾರಾಟ ಮಾಡುವ ವಿಚಾರಕ್ಕೆ ಕೈ ಹಾಕಿದರು. ರೇಟಿನ ಬಗ್ಗೆ ಮೊದಲು ವ್ಯಾಖ್ಯಾನ ಮಾಡಿದರು. ಕಡಿಮೆ ರೇಟ್ ಮತ್ತೆ ಜಾಸ್ತಿ ರೇಟ್ ಎಂದು ಮಾಡಿದರು ಇದು ಬಜೆಟ್ ಸ್ಪೀಚಾಯಿತು, ಹೀಗೆ ಹಣಕಾಸಿನ ಸ್ಥಿತಿ ಎಲ್ಲದರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಇರಲಿ ಆಮೇಲೆ ಹೆಗಡೆಯವರು ಆಯ್ದುಕೆ ಜನರಿಗೆ ಅಂದರೆ ಸೀಸಲ್ ಕಂಪೆನಿ, ಕೆನರಾ ಬಾಟ್ಲಿಂಗ್ ಕಂಪೆನಿ, ಆಮೇಲೆ ಜೀವರಾಜ ಆಳ್ವರ ಸಂಬಂಧಿ ಎಂದು ಹೈಕೋರ್ಟನಲ್ಲಿ ಒಪ್ಪಿಕೊಂಡಿರುವ ಚೈತನ್ಯಕುಮಾರ್ ಮುಂತಾದವರಿಗೆಲ್ಲಾ ಬಾಟ್ಲಿಂಗ್‌ನಲ್ಲಿ ತುಂಬಿ ಸಾರಾಯಿ ಮಾರಾಟ ಮಾಡಲು ಹೇಳಿ ಸುಪ್ರೀಂ ಕೋರ್ಟ್ ಹೈಕೋರ್ಟ್ ಮುಂದೆಲ್ಲ ಹೋದರಲ್ಲ, ಎಷ್ಟು ಪರ್ಸಂಟೇಜ್ ಜನರ ಆರೋಗ್ಯ ಈಗ ಸುಧಾರಿಸಿದೆ ಎಂದು ಸರ್ವೆ ಏನಾದರೂ ಮಾಡಿಸಿದ್ದೀರಿಯೋ ? ಇದುವರೆಗೆ ಕುಡಿಯುವವರ ಪರೀಕ್ಷೆ ಏನಾದರೂ ಮಾಡಿಸಿದ್ದೀರಾ ? ಏನೂ ಇಲ್ಲ. ಅದರ ಬದಲು ಬೇರೆ ಸರ್ವೆ ಮಾಡಿಸಬೇಕಾಗಿದೆ. ಈ ಸರ್ಕಾರ ಬಂದ ಮೇಲೆ ಬಾರ್‌ಗಳಿಗೆ ಎಷ್ಟೊಂದು ಲೈಸೆನ್ಸ್ ಕೊಟ್ಟಿದ್ದಾರೆ ? ಕೋಲಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡ ಕಂಡಲ್ಲಿ ಲೈಸೆನ್ಸ್ ಕೊಟ್ಟಿದ್ದಾರೆ. ಈಗೆಲ್ಲಾ ನ್ಯಾಷನಲ್ ಹೈವೇ ಸ್ಟೇಟ್ ಹೈವೇಗಳನ್ನೂ ಹಿಡಿದು ಬಿಟ್ಟಿದ್ದಾರೆ. ಜನರ ಆರೋಗ್ಯ ಎಷ್ಟು ವೃದ್ಧಿಯಾಗಿದೆ, ಈಗ ಹೇಳಿ ಸ್ವಾಮಿ? ಹೊರಗಡೆಯಿಂದ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದ ಜನರೇನಾದರೂ ಕರ್ನಾಟಕ ಯಾವುದರಲ್ಲಿ ಪ್ರಗತಿ ಸಾಧಿಸಿದೆ ಎಂದು ನೋಡಿದರೆ ಈ ಬೀರ್ ಬಾರ್‌ಗಳ ಲೈಸೆನ್ಸ್ ನೀಡಿಕೆಯಲ್ಲಿ ಎಂಬುದು ಗೊತ್ತಾಗುತ್ತದೆ. ಅಷ್ಟು ಭದ್ರ ಬುನಾದಿ ಇವರು ಹಾಕಿಬಿಟ್ಟಿದ್ದಾರೆ. ನಿಜವಾಗಲೂ ಭಾರತ ಏನು ಪ್ರಗತಿ ಸಾಧಿಸಿದೆ ಎಂದು ಹೇಳುವಂತಹ ಸಂದರ್ಭದಲ್ಲಿ ಕರ್ನಾಟಕವನ್ನು ಉದಾಹರಣೆಯಾಗಿ ಕೊಡಬೇಕು. ಸಹಕಾರ ಸಂಘಗಳಿಗೆ ಕೊಡುತ್ತೇವೆ ಎನ್ನುವುದೂ ಕೂಡ ಒಂದು ಸಾರಿ ಬಂತು. ಆಗ ಕೆ.ಹೆಚ್. ಪಾಟೀಲ್‌ರವರು ಇರುವ ಎರಡೂ ಕೈಗಳಿಂದ ನಮಸ್ಕಾರ ಮಾಡಿ ಸಹಕಾರೀ ಕ್ಷೇತ್ರಗಳನ್ನು ನಡೆಸಿಕೊಂಡು ಹೋಗುತ್ತಿದ್ದೇವೆ ಅದನ್ನು ಹಾಳು ಮಾಡಬೇಡಿ ಎಂದು ಹೇಳಿದರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಇಲಾಖೆಗೆ ಯಾರು ಯಾರನ್ನೋ ಕೂಡಿಸಿ ಏನೇನೋ ಮಾಡಿ ಒಳ್ಳೆಯ ಜನರನ್ನು ಕೂಡಿಸಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ತಕರಾರು ಇಲ್ಲ, ಹೇಳಿದ್ದನ್ನು ಕೇಳಿಕೊಂಡು ಹೋಗುತ್ತಾರೆ, ನಡೆದುಕೊಂಡು ಹೋಗಲಿ ಎಂದು ಅವರನ್ನು ಕೂಡಿಸಿರುವುದು.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿರತಕ್ಕಂತಹ ಮಂತ್ರಿಗಳು ಬಹಳ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕಂತಹ ಮಂತ್ರಿಗಳ ಎಕ್ಸ್‌ಟ್ರಾ ಬೇಕೆಂಬ ಆಸೆ ಇಲ್ಲ. ಚೆನ್ನಾಗಿ ಕೊಟಿದ್ದಾರೆ. ಅಂಥವರು ೫-೬ ಜನ ಇದ್ದಾರೆ. ನೀವು ಮಂತ್ರಿಯಾದಿರಿ ಸಂತೋಷ. ೩೪ ಜನರ ಮಂತ್ರಿಮಂಡಲದಲ್ಲಿ ೫-೬ ಜನ ಆ ರೀತಿ ಕೂತಿದ್ದಾರೆ. ಶೇಕಡವಾರು ಲೆಕ್ಕ ಹಾಕಿದರೆ ಕಡಿಮೆ ಪ್ರಮಾಣದಲ್ಲಿ ಕೂತಿದ್ದಾರೆಂದು ಹೇಳಿದರೂ ಕೂಡ ಜವಾಬ್ದಾರಿಯಿಂದ ಕೂತಿದ್ದಾರೆಂದು ಭಾವಿಸೋಣ. ಕಡಿಮೆಯಾದರೂ ಕೂಡ ಜವಾಬ್ದಾರಿಯುತ ಜನರಿದ್ದಾರೆಂದು ನಾವು ಇಟ್ಟುಕೊಳ್ಳೋಣ. ನಾನು ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆರೋಗ್ಯದ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಾಟಲ್‌ನಲ್ಲಿರುವುದನ್ನು ಕುಡಿಯತಕ್ಕಂತಹ ಜನರು ಯಾರಿದ್ದಾರೆ ಅವರ ಆರೋಗ್ಯ ವೃದ್ಧಿಯಾಗಿದೆ ಎಂದು ಹೇಳುವುದಕ್ಕೆ ಏನಾದರೂ ಸ್ಯಾಂಪಲ್ ಸರ್ವೆ ಮಾಡಿಸಿದ್ದೀರಾ ? ನಮ್ಮ ಸರಕಾರದ ನೀತಿಯಾಗಿದೆ ಈ ಬಾಟಲಿಯಲ್ಲಿ ಸಾರಾಯಿಯನ್ನು ತುಂಬಿ ಮಾರಾಟಮಾಡಿಸಲೇಬೇಕು ಅನ್ನತಕ್ಕಂಥಾದ್ದು. ತನ್ಮೂಲಕ ಜನರ ಆರೋಗ್ಯ ವೃದ್ಧಿಯಾಗಿದೆಯೆಂದು ಏನು ಹೇಳುತ್ತೀರಿ ಅದು ಆಗುತ್ತದೆಯೋ ಬಿಡುತ್ತದೆಯೋ ಅಂತೂ ನೀವು ಕೆಲವು ಜನರಿಗೆ ಕಾಂಟ್ರಾಕ್ಟ್ ಕೊಡಬೇಕೆಂಬ ತೀರ್ಮಾನವನ್ನು ಮುಂದುವರಿಸಿದ್ದೀರಿ. ಹೈಕೋರ್ಟ್, ಸುಪ್ರೀಂ ಕೋರ್ಟ್ ಆರ್ಡರ್ ಬಂದ ಮೇಲೂ ಕೂಡ ನೀವು ಈ ವಿಚಾರವನ್ನು ಕೈಬಿಟ್ಟಿಲ್ಲವೆಂದು ಸ್ಪಷ್ಟವಾಗಿ ವೇದ್ಯವಾಗುತ್ತದೆ.

ಸಾರಾಯಿಯನ್ನು ಬಾಟಲಿಯೊಳಗೆ ತುಂಬತಕ್ಕಂತಹ ನೀತಿಯನ್ನು ನೀವು ಪಟ್ಟಾಗಿ ಹಿಡಿದಿದ್ದರಿಂದ ಅದನ್ನೇ ಮುಂದುವರಿಸುತ್ತಿದ್ದೀರಿ ನಿಮಗೆ ಹಿಂದಿನ ಚರಿತ್ರೆ ಬೇಕಾಗಿಲ್ಲ ಹಿಂದಿನ ವಿವರಗಳು ಬೇಡ. You are trying to cover under the judgment passed by the Karnataka High Court and the Suupreme Court to see that again this arrack bottling contracts are given to certain persons. ಇವತ್ತು ಡಿಸ್ಟಿಲರಿ ಲೈಸನ್ಸ್ ಇದ್ದ ತಕ್ಷಣ ಅವನಿಗೇ ಕೊಡಬೇಕೆನ್ನತಕ್ಕಂತಹ ಮಾತನ್ನು ಹೈಕೋರ್ಟ್ ಆಗಲಿ, ಸುಪ್ರೀಂ ಕೋರ್ಟ್ ಆಗಲಿ ಎಲ್ಲಿ ಹೇಳಿದೆ? ನೀವು ಕೊಡಬಹುದು ಎಂದು ಹೇಳಿದ್ದಾರೆ. ಆದರೆ ಅವನಿಗೆ ಇನ್‌ಫ್ರಾಸ್ಟ್ರಕ್ಚರ್ ಇರಬೇಕು, ಅವನಿಗೆ ಲೈಸೆನ್ಸ್ ಇದ್ದ ತಕ್ಷಣ ಏನೂ ಆಗುವುದಿಲ್ಲ. ಅದನ್ನು ಹಣೆಗೆ ಹಚ್ಚಿಕೊಳ್ಳಬೇಕು ಅಷ್ಟೆ. ಹಿಂದೆ ನಾವು ಏನು ಹೇಳಿದ್ದೇವೆ ಸ್ವಾಮಿ? ನೀವು ಚೈತನ್ಯಕುಮಾರ್, ಬಿ. ವಿ. ಕೆ. ಐಯ್ಯಂಗಾರ್ ರಸ್ತೆ, ರಂಗಪ್ಪ, ಶಿವಮೊಗ್ಗ, ಸಿಸ್ಟೈಲ್ ಬಾಟ್ಲಿಂಗ್ ಕಂಪನಿ, ಕೆನರಾ ಬಾಟ್ಲಿಂಗ್ ಕಂಪೆನಿ, ಕೋಲಾರ ವೈನರೀಸ್ ಅಂಡ್ ಡಿಸ್ಟಿಲರೀಸ್, ಜಯನಗರ, ಬೆಂಗಳೂರು ಇವರಿಗೆ ಕೊಟ್ಟಿದ್ದೀರಿ. ಕೋಲಾರದಲ್ಲಿ ಇದ್ದುಕೊಂಡು ಜಯನಗರದ ವಿಳಾಸವನ್ನು ಕೊಟ್ಟಿದ್ದಾರೆ. ಇವೆಲ್ಲಾ ಅಗ್ರಿಮೆಂಟ್‌ನಲ್ಲಿ ಆಗಿದೆ. ಹಳೆಯ ಫೈಲ್ ಬಗ್ಗೆ ಗಮನವನ್ನು ಕೊಡಲಿಲ್ಲ. ಅಗ್ರಿಮೆಂಟ್‌ನಲ್ಲೂ ಕೂಡಾ ಅವರ ಹೆಸರಿಗೆಕೊಟ್ಟಿಲ್ಲ. ಅಂಥ ಬುದ್ಧಿಶಕ್ತಿಯಿಂದ ಅಗ್ರಿಮೆಂಟನ್ನು ಸರ್ಕಾರದವರು ಮಾಡಿದ್ದಾರೆ. ಈ ಅಮೆಂಡ್‌ಮೆಂಟ್‌ನಲ್ಲಿ ಏನು ಇದೆ ಎಂದರೆ: Insertion of new section 16A, which reads as follows :

"16A. Licence to manufacture, bot le or manufacture and bottle arrack for sale – (1) Notwithstanding anything contained in this Act, no licence.—

(a) to manufacture; or

(b) to bottle; or

(c) to manufacture and bottle,

arrack for sale shall be granted to any person who is not the holder of distillery licencegranted under section 16". ಏನು ಮಾಡುವುದಕ್ಕಾಗುತ್ತದೆ ಸ್ವಾಮಿ? ನಿಮಗೆ ಏನಾದರೂ ನಿಜವಾಗಲೂ ಬಾಟ್ಲಿಂಗನ್ನು ತುಂಬತಕ್ಕಂಥ ವಿಚಾರದಲ್ಲಿ ನೀತಿ ನ್ಯಾಯದ ವಿಚಾರದಲ್ಲಿ, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಸರ್ಕಾರಕ್ಕೆ ಛೀಮಾರಿ ಹಾಕಿದಮೇಲೂ ನಿಮಗೆ ನಿಜವಾಗಲೂ ಆಸೆ ಇದ್ದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಒಳ್ಳೆಯ ನೀತಿಯಿಂದ ಮಾಡಬೇಕು, ಅನ್ಯಾಯದ ಆಪಾದನೆ ಬರುವುದು ಬೇಡ, ಅನ್ಯಾಯದ ವಿಚಾರವನ್ನು ಮಾಡುವುದು ಬೇಡ ಎಂದು ತಿಳಿದುಕೊಂಡು ಏನು ಮಾಡಬೇಕಾಗಿತ್ತು ಎಂದರೆ "A Person who is having a distillery licence should prove to the satisfaction of the Excise Commissioner about the infrastructure and the financial position of that distilery". ಎಕ್ಸೈಜ್ ಕಮಿಷನರ್‌ಗೆ ಪವರ್ಸ್ ಕೊಡುವಾಗ ಈ ರೀತಿ ಅಮೆಂಡ್ ಮಾಡಿ ಕೊಟ್ಟಿದ್ದರೆ ಸರಿಹೋಗುತ್ತಿತ್ತು. ಏತಕ್ಕೆಂದರೆ ಒಂದು ಜಿಲ್ಲೆಯಲ್ಲಿ, ಎರಡು ಜಿಲ್ಲೆಯಲ್ಲಿ ಮೂರು ಜಿಲ್ಲೆಯಲ್ಲಿ, ನಾಲ್ಕು ಜಿಲ್ಲೆಯತನಕ ಒಬ್ಬೊಬ್ಬರಿಗೆ ವಹಿಸಿದ್ದೀರಿ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ತಮ್ಮ ತೀರ್ಮಾನವನ್ನು ರದ್ದುಮಾಡಿದಾಗಲೂ ಸಹಾ ಮೂರು ನಾಲ್ಕು ಜಿಲ್ಲೆಗಳನ್ನು ವಹಿಸಿದರೆ ಏನಾಗುತ್ತದೆ? ಇನ್‌ಫ್ರಾಸ್ಟ್ರಕ್ಚರ್ ಸರಿಯಾಗಿ ಇರಬೇಕು, ಬಾಟ್ಲಿಂಗ್ ಪ್ಲಾಂಟ್ಸ್ ಕರೆಕ್ಟ್ ಇರಬೇಕು ಕೆಪಾಸಿಟಿ ಇರಬೇಕು ಯಾರು ಯಾರಿಗೋ ಕೊಡುವುದು ಸರಿಯಲ್ಲ. ಆ ರೀತಿ ಕೊಟ್ಟರೆ ಬಹಳ ತೊಂದರೆಯಾಗುತ್ತದೆ. ಅವನು ಮ್ಯಾನುಫ್ಯಾಕ್ಚರ್ ಮಾಡುತ್ತಾನೆಂದರೆ ಅವನಿಗೆ ನೀವು ರೆಕ್ಟಿಫೈಡ್ ಸ್ಪಿರಿಟ್‌ನ್ನು ಸಪ್ಲೈ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ ೧೪ ಷುಗರ್ ಫ್ಯಾಕ್ಟರಿಗಳು ಇವೆ. ಸ್ಪಿರಿಟ್ ವಿಚಾರ ಬಂದಾಗ ಸ್ಪಿರಿಟನ್ನು ತಯಾರುಮಾಡಿ ಅಲಾಟ್‌ಮೆಂಟ್ ಮಾಡಬೇಕು. ಬ್ರಾಂದಿ ವಿಸ್ಕಿ, ಅರ್ರಾಕ್ ತಯಾರು ಮಾಡುವವರಿಗೂ ನೀವು ಅಲಾಟ್ ಮಾಡಬೇಕು. ಕೆಮಿಕಲ್ ಇಂಡಸ್ಟ್ರೀಸ್‌ಗೂ ಕೊಡಬೇಕು ಔಷಧಿ ಗುಳಿಗೆಯನ್ನು ತಯಾರು ಮಾಡುವುದಕ್ಕೂ ಕೊಡಬೇಕು. ವೇರಿಯಸ್ ಪರ್‌ಪಸಸ್‌ಗೆ ಅಲಾಟ್ ಮಾಡುತ್ತೀರಿ. ಅಲಾಟ್‌ಮೆಂಟ್ ಮಾಡತಕ್ಕಂಥದ್ದಕ್ಕೂ ಕಾನೂನು ಇದೆ. ಎಕ್ಸೈಜ್ ಕಮಿಷನರ್ ಅದನ್ನು ಹೇಗೆ ಕೊಡಬೇಕು ಎಂದು ಸೆಟ್ ಆಫ್ ರೂಲ್ಸ್‌ನಲ್ಲಿದೆ. ಈ ರೆಕ್ಟಿಫೈಡ್

ಸ್ಪಿರಿಟ್‌ನ್ನು ಮ್ಯಾಕ್ಡೊವೆಲ್, ಸಾವರೆಸ್‌ಗೂ ಸಹ ಕೊಟ್ಟಿದ್ದೀರಿ. ಇವೆಲ್ಲಕ್ಕೂ ಕೂಡ ಈ ರೀತಿಯಾಗಿ ಕೊಟ್ಟಿದ್ದೀರಿ ಅದರ ವಿವರ ನನಗೆ ಬೇಕಾಗಿಲ್ಲ. ಇದರ ಬಗ್ಗೆ ನನಗೆ ಆಸಕ್ತಿ ಇಲ್ಲ. ಮಾನ್ಯ ಸಭಾಧ್ಯಕ್ಷರೇ, ನೆಕ್ಸ್ಟ್ ಇನ್ನೊಂದು ಅಮೆಂಡ್‌ಮೆಂಟ್ ಇಡಬೇಕಾಗುತ್ತದೆ. ಇನ್ಫ್ರಾಸ್ಟ್ರಕ್ಚರ್ ಹಾಗೂ ಫೈನಾನ್ಶಿಯಲ್ ಪೊಸಿಷನ್ ನೋಡಿಕೊಂಡು ಕಂಟ್ರಾಕ್ಟ್ ಕೊಡಬೇಕಾಗುತ್ತದೆ. ೨-೩ ಜಿಲ್ಲೆಗಳಲ್ಲಿ ೫ ಕಂಟ್ರಾಕ್ಟ್ ಡಿಸ್ಟಿಲರಿ ಕೊಟ್ಟರೆ ನಿಮಗೆ ಬೇಕಾದಷ್ಟು ದುಡ್ಡು ಬರುತ್ತದೆ. ಆ ದೃಷ್ಟಿಯಿಂದ ನೀವು ಕೊಟ್ಟಿದ್ದೀರಿ. ನೀವು ಸಾರಾಯಿ ಯಾರು ಯಾರಿಗೆ ಕೊಟ್ಟಿದ್ದೀರಿ, ಅವರು ಅದನ್ನು ಡಿಸ್ಟಿಲರಿಗೆ ಕೊಡಬೇಕು. ಮ್ಯಾನುಫ್ಯಾಕ್ಚರ್ ಮಾಡುವುದು ಅವರ ಕೆಲಸ ಅಲ್ಲ. ಸಾರಾಯಿ ಬಾಟ್ಲಿಂಗ್ ಕೊಟ್ಟರೆ ಎಕ್ಸೈಜ್ ಇಲಾಖೆಯವರು ತುಂಬಿಸಿ, ಮುಚ್ಚಳ ಹಾಕುವುದು ಡಿಸ್ಟಿಲರಿ ಕೆಲಸ. ನಿಮ್ಮ ಕಡೆ ಬೂಚು ಅನ್ನುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೂಚ್ ಎನ್ನುವುದು ಹಳೆಯ ಕಾಲದ್ದು ಚೆನ್ನಾಗಿ ಇಲ್ಲ,

ಶ್ರೀ ಎಸ್. ಬಂಗಾರಪ್ಪ.—ಇಂಗ್ಲೀಷ್‌ನಲ್ಲಿ ಕಾರ್ಕ್ ಎನ್ನುತ್ತಾರೆ, ಕನ್ನಡದಲ್ಲಿ ಮುಚ್ಚಳಿ ಅಥವಾ ಬೂಚ್ ಎನ್ನುತ್ತಾರೆ ನಮ್ಮ ಕಡೆ. ಬಯಲು ಸೀಮೆ ಕಡೆ ಬೂಚು ಎಂತಲೇ ಅನ್ನುತ್ತಾರೆ. ಕ್ವಾರ್ಟರ್ ಭಾಟಲ್, ಮುಕ್ಕಾಲು ಬಾಟಲ್, ಫುಲ್ ಬಾಟಲ್ ಇವೆಲ್ಲಾ ಬಾಟಲ್ಸ್‌ಗಳಲ್ಲೂ ಸಾರಾಯಿ ತುಂಬುವ ಕೆಲಸ ಡಿಸ್ಟಿಲರಿ ಅವರದು. ಅವನಿಗೆ ಇದನ್ನು ವಹಿಸಿದರೆ ಬಾಟ್ಲಿಂಗ್ ಕೆಲಸ ಮಾತ್ರ ಅವನದ್ದು, ಮ್ಯಾನಫ್ಯಾಕ್ಚರ್ ಮಾಡುವುದುಅವನ ಕೆಲಸವಲ್ಲ. ಸಾರಾಯಿಯನ್ನು ಬ್ಯಾರೆಲ್‌ಗಟ್ಟಲೆ ತೆಗೆದುಕೊಂಡು ಹೋಗಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ಈ ಸಾರಾಯಿಯನ್ನು ಕಟ್ರೋಲ್‌ಗೆ ಕೊಡುತ್ತಾರೆ. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸಾರಾಯಿಯನ್ನು ಅಬಕಾರಿ ಇಲಾಖೆಯವರು ಡಿಸ್ಟಿಲರಿಗೆ ಕೊಡುತ್ತಾರೆ. ಅದನ್ನು ಅವರು ೩-೪ ಜಿಲ್ಲೆಗಳಿಗೆ ಬಾಟಲ್‌ಗಳಲ್ಲಿ ತುಂಬಿ ಸಪ್ಲೈ ಮಾಡುತ್ತಾರೆ. ಹಿಂದೆ ಕಂಟ್ರಾಕ್ಟರ್‌ಗಳಿಂದ ಸೆಕ್ಯುರಿಟಿ ಡಿಪಾಸಿಟ್ ಅನ್ನು ನನಗೆ ತಿಳಿದಂತ ಸುಮಾರು ೫೦ ಸಾವಿರ ಅಥವಾ ಒಂದು ಲಕ್ಷ ರೂಪಾಯಿವರೆಗೆ ತೆಗೆದುಕೊಂಡಿರುತ್ತಾರೆ. ೭-೮ ಲಕ್ಷ ರೂಪಾಯಿಯ ಸಾರಾಯಿಯನ್ನು ಒಬ್ಬೊಬ್ಬ ಕಂಟ್ರಾಕ್ಟರ್ ೩-೪ ಜಿಲ್ಲೆಗಳಿಗೆ ಸಪ್ಲೈ ಮಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ದಿನ ಒಂದಕ್ಕೆ ೨೦ರಿಂದ ೩೦ ಲಕ್ಷ ಸಾರಾಯಿ ವ್ಯಾಪಾರ ಆಗುತ್ತದೆ. ಇದು ಬೇರೆ ಕಡೆ ಸ್ವಲ್ಪ ಏರಿ ಆಗಬಹುದು. ಆದ್ದರಿಂದ ನೀವು infrastructure and financial position of that particulary distillery ನೋಡಿಕೊಂಡು ಇಲ್ಲಿ ಅಮೆಂಡ್‌ಮೆಂಟ್ ತರಬೇಕು. ತರದಿದ್ದರೆ ಹೋಮ್ ಕಮಿಷನರ್ ಏನು ಅಬ್ಜೆಕ್ಷನ್ ಹಾಕಿದರೋ ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರೂ ಹಾಕುತ್ತಾರೆ. The objection were over looked bv the Hon. Chief Minister in his note. Again repeat ಮಾಡುತ್ತಿದ್ದೀರಿ. Please do't commit the same mistake. ನೀವು ಈಗಾಗಲೇ ಸಿಕ್ಕಿ ಹಾಕಿಕೊಂಡಿದ್ದೀರಿ. ಆದರೂ ಉಳಿದುಕೊಂಡಿದ್ದೇವೆಂದು ತಿಳಿದುಕೊಂಡಿದ್ದೀರಿ. The entire Government headed by Sri. Ramakrishna Hedge was Inducted by the Karnataka High Court and Supreme Court. The entire country noticed it, the world is it noticed it. ಹೀಗೆ ಇಂಥ ಲೂಪ್ ಹೋಲ್ಸ್ ಇಟ್ಟುಕೊಂಡು ತಿದ್ದುಪಡಿ ತರುವುದಕ್ಕೆ ಪ್ರಯತ್ನ ಪಟ್ಟರೆ ಒಳ್ಳೆಯದಲ್ಲ. please don't do this again you are trying to mislead this House, hoodwink the entire House and you trying to hood wink the entire people of Karnataka. ಮತ್ತೆ ದುಂಡಾವೆಚ್ಚ ಮಾಡತಕ್ಕ ಕೆಲಸಕ್ಕೆ ಕೈ ಹಾಕಬೇಡಿ. ಈ ವಿಚಾರದಲ್ಲಿ ಅನ್ಯಾಯ ಮಾಡಿದ್ದೀರಿ ಎಂದು ಹೇಳುತ್ತೇನೆ. ಕರಿಯಪ್ಪನ ಹೆಸರಿನಲ್ಲೋ ಮರಿಯಪ್ಪನ ಹೆಸರಿನಲ್ಲೋ ಕಂಟ್ರಾಕ್ಟ್ ಮಾಡಿ, ಮೋಸ ಮಾಡಬೇಡಿ. ಕಣ್ಣಿಗೆ ಮಣ್ಣೆರಚುವ ಪ್ರಯತ್ನ ಮಾಡಿದ್ದೀರಿ, ಇದು ಮಾಡಬೇಡಿ. ಈ ಹಿಂದೆ ನೀವು ಯಾರು ಯಾರಿಗೆ ಈ ಒಂದು ಕಂಟ್ರಾಕ್ಟನ್ನು ಕೊಟ್ಟಿದ್ದಿರೋ, ಆ ಒಂದು ವ್ಯವಹಾರದಲ್ಲಿ ಸಾಕಷ್ಟು ದುರ್ವ್ಯವಹಾರ ನಡೆದಿದೆ ಮತ್ತು ಲಂಚದ ವ್ಯವಹಾರ ನಡೆದಿದೆಯೆಂದು ನಾವು ಏನು ಒಂದು ಆಪಾದನೆಯನ್ನು ಮಾಡಿದ್ದೆವೋ ಆ ಒಂದು ವ್ಯವಹಾರವನ್ನೇ ಈಗ ಮತ್ತೆ ಊರ್ಜಿತಗೊಳಿಸುವುದಕ್ಕಾಗಿ ಮತ್ತು ತಮಗೆ ಬೇಕಾದ ಕೆಲವರಿಗೆ ಒಂದು ಕಂಟ್ರಾಕ್ಟನ್ನು ಕೊಡುವುದಕ್ಕೋಸ್ಕರ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ ಎಂದು ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಹೇಳಬೇಕಾಗಿದೆ. ಸರ್ಕಾರದವರು ಈ ಮೊದಲು ಮಾಡಿದ ತಪ್ಪನ್ನೇ ಮತ್ತೆ ಮಾಡಲು ಹೊರಟಿದ್ದಾರೆ. ಈ ಹಿಂದೆ ಇವರು ಯಾರುಯಾರಿಗೆ ಅನ್ಯಾಯದಿಂದ ಕಂಟ್ರಾಕ್ಟ್ ಕೊಟ್ಟಿದ್ದರೋ ಈಗ ಮತ್ತೆ ಅವರಿಗೇ ಕೊಡಲು ಹೊರಟಿದ್ದಾರೆಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಮೊದಲಿನ ಕಂಟ್ರಾಕ್ಟ್ ವ್ಯವಹಾರವನ್ನೇ ಮತ್ತೆ

ಊರ್ಜಿತಗೊಳಿಸುವುದಕ್ಕೆ ಇವರು ಕೈಹಾಕಿದ್ದಾರೆ. ಇಲ್ಲದಿದ್ದರೆ infrastructure of each distillery and its financial position ಏನು ಎಂಬುದನ್ನು ತಿಳಿದುಕೊಳ್ಳ ಬೇಕಾಗಿತ್ತು. ಆದರೆ ನೀವು ಈ ಕೆಲಸ ಮಾಡಲಿಲ್ಲ. ಯಾವುದರ ಬಗ್ಗೆ ನಿಮ್ಮ ಅಧಿಕಾರಿಗಳು ಕ್ವೈರಿ ಹಾಕಿದರೋ ಮತ್ತು ಕರ್ನಾಟಕ ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ಯಾವುದನ್ನು ಎತ್ತಿ ಹಿಡಿದರೋ ಅದನ್ನೇ ನಾವು ಇಲ್ಲಿ ಹೇಳಿದಾಗ ನೀವು ಅದನ್ನು ಒಪ್ಪಿಕೊಳ್ಳಲಿಲ್ಲ. ಆದರೆ ನಾವು ಹೇಳಿದ ಮಾತನ್ನು ರಾಜ್ಯದ ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ಎತ್ತಿಹಿಡಿದರು. ಆದ್ದರಿಂದ ಈಗಲಾದರೂ ನೀವು ನಿಮ್ಮ ಅಧಿಕಾರಿಗಳು ಹೇಳಿದ ಮಾತನ್ನು ಒಪ್ಪಿಕೊಂಡು ಸೂಕ್ತವಾದ ತಿದ್ದುಪಡಿಯನ್ನು ತರಬಹುದಾಗಿತ್ತು. ಆದರೆ ನೀವು ಆ ಕೆಲಸ ಮಾಡಲಿಲ್ಲ. ಈಗಲಾದರೂ ನೀವು ಸೂಕ್ತ. ವಾದ ತಿದ್ದುಪಡಿಗಳನ್ನು ತೆಗೆದುಕೊಂಡು ಬನ್ನಿ. ಏಕೆಂದರೆ there are many distilleries in Karnataka State, not one or two but I think more than 100 distilieries, are there.

Sri D. B. Inamdar..—in Karnataka 13 distiller are there.

ಶ್ರೀ ಎಸ್. ಬಂಗಾರಪ್ಪ.—ಆದರೆ ಈ ಬಾಟ್ಲಿಂಗ್ ಕಂಟ್ರಾಕ್ಟನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದಲೇ ಅನೇಕ ಡಿಸ್ಟಲರಿಗಳು ನಾಯಿಕೊಡೆಗಳ ತರಹ ಹುಟ್ಟಿಕೊಳ್ಳುತ್ತವೆ. ಬರಗಾಲ ಬಂದಾಗ ಬರಗಾಲದ ಕೆಲಸಗಳ ಕಂಟ್ರಾಕ್ಟನ್ನು ಪಡೆದುಕೊಳ್ಳಬೇಕೆಂದು ಹೇಗೆ ಕೆಲವರು ಕಾಂಟ್ರಾಕ್ಟರ್ ಲೈಸನ್ಸನ್ನು ತೆಗೆದುಕೊಳ್ಳುತ್ತಾರೊ ಅದೇರೀತಿ ಈ ಬಾಟ್ಲಿಂಗ್ ಕಂಟ್ರಾಕ್ಟನ್ನು ಪಡೆದುಕೊಳ್ಳುವ ಸಲುವಾಗಿಯೇ ಕೆಲವರು ಡಿಸ್ಟಲರಿಗಳನ್ನು ಪ್ರಾರಂಭ ಮಾಡಲು ಲೈಸನ್ಸ್ ಪಡೆದುಕೊಳ್ಳುತ್ತಾರೆ. ಈ ಕಾರಣದಿಂದ ಈಗ ಹಾಲಿ ಇರುವಂತಹ ಡಿಸ್ಟಲರಿಗಳಿಗೆ ಮಾತ್ರ ಬಾಟ್ಲಿಂಗ್ ಕಂಟ್ರಾಕ್ಟ್‌ನ್ನು ಕೊಡಲಾಗುತ್ತದೆ. ಇನ್ನು ಮುಂದೆ ಹೊಸದಾಗಿ ಪ್ರಾರಂಭಗೊಳ್ಳುವಂತಹ ಡಿಸ್ಟಿಲರಿಗಳಿಗೆ ಈ ಬಾಟ್ಲಿಂಗ್ ಕಂಟ್ರಾಕ್ಟ್‌ನ್ನು ಕೊಡುವುದಿಲ್ಲ ಎಂದು ತಾವು ಇದರಲ್ಲಿ ಹೇಳಬೇಕಾಗುತ್ತದೆ. ಈ ಬಾಟ್ಲಿಂಗ್ ಕಂಟ್ರಾಕ್ಟ್‌ನ್ನು persons who own distillery licence or company which is having distilley licence ಇದ್ದವರಿಗೆ ಮಾತ್ರ ಕೊಡಲಾಗುತ್ತದೆ ತಾವು ಇಲ್ಲಿ ಖಚಿತವಾಗಿ ಹೇಳಬೇಕಾಗುತ್ತದೆ. ಬಾಟ್ಲಿಂಗ್ ಕಂಟ್ರಾಕ್ಟ್ ಪಡೆದುಕೊಳ್ಳಲು ಮುಂದೆ ಅಂದರೆ ಇನ್ನು ಆರುತಿಂಗಳ ನಂತರ ಎಕ್ಸೈಜ್ ಕಮಿಷನರ್ ಅವರು ಟೆಂಡರ್ ಇಲ್ಲವೇ ಅಪ್ಲಿಕೇಷನ್‌ಗಳನ್ನು ಕರೆಯುವುದಕ್ಕೆ ಮೊದಲು ಕೆಲವರು ಹೊಸದಾಗಿ ಲೈಸನ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಇವರು ಈ ಒಂದು ಕಂಟ್ರಾಕ್ಟ್ ಕೊಡಲು ಟೆಂಡರ್ ಕರೆಯುತ್ತಾರೋ ಅಥವಾ ಅಪ್ಲಿಕೇಶನ್ಸ್ ಕರೆಯುತ್ತಾರೋ ಗೊತ್ತಿಲ್ಲ ಈ ಬಗ್ಗೆ ನಾನು ನಂತರ ಬರುತ್ತೇನೆ. ಇವರು ಅರ್ಜಿ ಇಲ್ಲವೇ ಟೆಂಡರ್ ಕರೆಯುವ ಹೊತ್ತಿಗೆ ಡಿಸ್ಟಿಲರಿ ಲೈಸನ್ಸ್ ಇದ್ದರೆ ಸಾಕು, ಯಾರು ಬೇಕಾದರೂ ಅರ್ಜಿ ಇಲ್ಲವೇ ಟೆಂಡರ್‌ಗಳನ್ನು ಹಾಕಿಕೊಳ್ಳಬಹುದು. ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ತಾವು ಹೇಳುವುದಾದರೆ, ಈಗ ಹಾಲಿ ಯಾರ ಯಾರ ಬಳಿ ಲೈಸೆನ್ಸ್ ಇದೆಯೋ ಅಂತಹವರಿಗೆ ಮಾತ್ರ ಅವಕಾಶ ಮಾಡಿ ಕೊಡಲಾಗುತ್ತದೆಂದು ತಾವು ಇದರಲ್ಲಿ ಹೇಳಬೇಕಾಗಿತ್ತು. ಡಿಸ್ಟಿಲರಿ ಲೈಸನ್ಸ್ ಇದ್ದವರಿಗೆ ಬಾಟ್ಲಿಂಗ್ ಕಂಟ್ರಾಕ್ಟ್ ಕೊಡಲಾಗುವುದೆಂದು ಇಲ್ಲಿ ಹೇಳಿದ್ದೀರಿ. ಆದ್ದರಿಂದ ಯಾರು ಯಾವಾಗ ಬೇಕಾದರೂ ಲೈಸನ್ಸ್ ಪಡೆದುಕೊಳ್ಳಬಹುದು. ಇದರಿಂದ ಏನಾಗುತ್ತದೆಂದರೆ, ತಾವು ತಮಗೆ ಬೇಕಾದವರಿಗೆ ಡಿಸ್ಟಿಲರಿ ಲೈಸನ್ಸ್ ಕೊಡಿಸಿ ಈ ಒಂದು ಬಾಟ್ಲಿಂಗ್ ಕಂಟ್ರಾಕ್ಟ್ ಕೊಡಲು ಇದರಿಂದ ಅವಕಾಶವಾಗುತ್ತದೆ. ತಾವು ಮನಸ್ಸು ಮಾಡಿದರೆ ತಮಿಳುನಾಡಿನವರಿಗೆ ಇಲ್ಲವೇ ಕೇರಳದವರಿಗೆ ಬೇಕಾದರೂ ಈ ಕಂಟ್ರಾಕ್ಟ್ ಕೊಡಿಸಲು ಅವಕಾಶವಿದೆ. ಈ ಹಿಂದೆ ನಾವು ಇಲ್ಲಿ ಯಾರು ಯಾರಿಗೆ ಬಾಟ್ಲಿಂಗ್ ಕಂಟ್ರಾಕ್ಟ್ ಕೊಟ್ಟಿದ್ದು ತಪ್ಪು ಎಂದು ಹೇಳಿದ್ದೆವೋ, ಅದೇ ಜನರಿಗೆ ಇಲ್ಲವೇ ಅದೇ ಕಂಪನಿಯವರಿಗೆ ಮತ್ತೆ ಕೊಡಲು ಹೊರಟಿದ್ದೀರಿ. ಈ ಹಿಂದೆ ಮಾಡಿದ ತಪ್ಪನ್ನೇ ಈಗಲೂ ಮಾಡಲು ಹೊರಟಿದ್ದೀರಿ. ಇದು ಸರಿಯಲ್ಲ. ಈ ಮೊದಲಿನ ತಪ್ಪನ್ನೇ ಮತ್ತೆ ಮಾಡುವುದಿಲ್ಲವೆಂದು ತಾವು ಹೇಳುವುದಾದರೆ ನಾನು ಸಲಹೆ ಮಾಡಿದ ಕ್ಲಾಸ್‌ನ್ನು ಇಲ್ಲಿ ಏತಕ್ಕೆ ಸೇರಿಸಬಾರದು ? ಇಲ್ಲಿ ಏನು ಒಂದು ವಿಚಾರಧಾರೆ ಮೂಡಿ ಬರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಕಾನೂನನ್ನು ಮಾಡಬೇಕಾಗುತ್ತದೆ. ನಮ್ಮ ಪುಸ್ತಕದಲ್ಲಿ ಯಾವ ಒಂದು ವಿಚಾರಧಾರೆ ಮೂಡಿಬರುತ್ತದೋ ಅದನ್ನು ಪುಸ್ತಕದಲ್ಲಿ ತರಬೇಕು. ಇದಕ್ಕೆ ಸಂಬಂಧಪಟ್ಟಂತೆ ಸೂಕ್ತವಾದ ಕಾನೂನನ್ನು ಮಾಡದಿದ್ದರೆ ಮತ್ತು ಅದನ್ನು ಜಾರಿಗೆ ಕೊಡದಿದ್ದರೆ, ಪುಸ್ತಕದ ವಿಚಾರ ಹೊರಗೆ ಬರದಿದ್ದರೆ ಇದು ಯಾವುದಕ್ಕೂ ಉಪಯೋಗವಾಗುವುದಿಲ್ಲವೆಂದು ನಾನು ಇಲ್ಲಿ ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಬಾಟ್ಲಿಂಗ್ ಕಂಟ್ರಾಕ್ಟ್ ಬಗ್ಗೆ ನೀವು ಕಳೆದ ಏಪ್ರಿಲ್ ತಿಂಗಳಲ್ಲಿ ಅಪ್ಲಿಕೇಷನ್‌ಗಾಗಿ

೨-೩೦ ಪಿ.ಎಂ.

ಕರೆದಿದ್ದೇ ತಪ್ಪು. ಟೆಂಡರ್ ಕರೆಯಬೇಕಾಗಿತ್ತು. ಟೆಂಡರ್ ಏಕೆ ಕರೆಯಲಿಲ್ಲ ಎಂದು ಪದೇ ಪದೇ ಕೇಳಿದೆವು. ನೂರಾರು ಕೋಟಿ ರೂಪಾಯಿಗಳ ವ್ಯವಹಾರ ಇದು. ಉದಾಹರಣೆಗೆ ಹೇಳುವುದಾದರೆ, ಕೆಲವೇ ಜನರು ಮಾತ್ರ ಬಂದು ಅರ್ಜಿ ಕೊಟ್ಟರು ಎಂದು ಇಟ್ಟುಕೊಳ್ಳಿ. ಹೆಚ್ಚಿನ ರೇಟ್‌ಗೆ ಕಾಂಟ್ರಾಕ್ಟ್ ಕೊಟ್ಟರೆ ಖರ್ಚು ಜಾಸ್ತಿ ಬರುತ್ತದೆ, ಅದು ಕನ್‌ಸ್ಯೂಮರ್ ಮೇಲೆ ಬೀಳುತ್ತದೆ. ನಮ್ಮ ಟ್ರೆಜರಿ ಮೇಲೂ ಜವಾಬ್ದಾರಿ ಬರುತ್ತದೆ. ಆ ಹಣ ಉಳಿದರೆ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬಹುದಲ್ಲ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಅನುಕೂಲವಾಗುತ್ತದಲ್ಲ. ಹಿಂದೆ ನಾವು ಏನು ಚರ್ಚೆ ಮಾಡಿದೆವು. ಕರ್ನಾಟಕ ಹೈಕೋರ್ಟ್‌ನವರು ಏನು ಹೇಳಿದರು, ಸುಪ್ರೀಂ ಕೋರ್ಟ್‌ನವರು ಏನು ಹೇಳಿದರು ಎಂದರೆ without calling for tenders giving such contracts to selected or elected 8 persons ಎಂದು. ಆಯ್ದ ೮ ಜನರಿಗೆ ಕೊಟ್ಟಿರುವುದು ತಪ್ಪು ಎನ್ನತಕ್ಕಂಥ ಮಾತನ್ನು ಅವರು ಬರೆದರು. Clause 3, clause 4, clause 2ನಲ್ಲಿ ಏನು ಸೇರಿಸಬೇಕಾಗಿತ್ತು ಅಂದರೆ, ಡಿಸ್ಟಲರಿ ಲೈಸೆನ್ಸ್ ಯಾರು ಇಟ್ಟುಕೊಂಡಿದ್ದಾರೆ, ಅಂದರೆ Government excise commissioner will call for tenders from the distillary owners who are having licences of distillary grantee by the excise commissioner, they can compete in tenders in sealed covers ಎಂದು ಹಾಕಿ, ಇದು ನಿಜವಾಗಲೂ ನೀತಿ, ನ್ಯಾಯ ಇರತಕ್ಕಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರಬೇಕಾಗಿತ್ತು, ಅವರು ಡೆಲ್ಲಿಗೆ ಹೋದರು ಎಂದು ಕಾಣುತ್ತದೆ. ಇವತ್ತು ಯಾವ ನೀತಿಯಿಂದ ಮಾನ್ಯ ಮುಖ್ಯಮಂತ್ರಿಗಳು ಪ್ರತಿಪಾದನೆ ಮಾಡಿದರು? ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು, ನೀತಿ, ನ್ಯಾಯ, ಮೌಲ್ಯ ಇವೆಲ್ಲಾ ಹಳೆಯ ಪದಗಳು. ಇವತ್ತು ಜೀವ ಕಳೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಪ್ರೇತಕಳೆಯನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡು ಇರತಕ್ಕಂಥ ಮೌಲ್ಯಾಧಾರಿತ ರಾಜಕಾರಣ ಮುಖ್ಯಮಂತ್ರಿಗಳಿಂದ ಬಂದಿರತಕ್ಕ ಪದ. ಪ್ರೇತಕಳೆಯನ್ನು ಮೈಗೂಡಿಸಿಕೊಂಡಿರುವ ಆ ಪದವನ್ನು ಪುನಃ ಉಚ್ಚಾರ ಮಾಡತಕ್ಕಂಥ ಆಸಕ್ತಿ ನನಗೆ ಇಲ್ಲ. ಒಂದು ಕ್ಲಾಸನ್ನು ಇದರಲ್ಲಿ ಹಾಕಿ. ಟೆಂಡರ್ಸ್ ಇನ್ ಸೀಲ್ಡ್ ಕವರ್ಸ್ ಎನ್ನತಕ್ಕಂಥ ಮಾತನ್ನು ಹಾಕಿದರೆ ಎಕ್ಸೈಸ್ ಕಮಿಷನರ್ ಅಧಿಕಾರಕ್ಕೆ ಬಿಟ್ಟುಬಿಟ್ಟರೆ ನಮ್ಮದು ಯಾರದೂ ತಕರಾರು ಇದರಲ್ಲಿ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಐ ಫರ್ಮ್ಲಿ ಬಿಲೀವ್. ಇನಾಂದಾರ್‌ರವರು ಹೊಸ ಮಂತ್ರಿಗಳು. ನಿಜವಾಗಲೂ ನಾನು ಹೇಳತಕ್ಕಂಥ ಮಾತು ನಿಮ್ಮ ಮನಸ್ಸಿಗೆ ಹಿಡಿಸುತ್ತದೆ ಎಂದು ನನ್ನ ಆಸೆ. ಆದ್ದರಿಂದ ಈ ಬಿಲ್ಲನ್ನು ಪ್ರೆಸ್ ಮಾಡುವುದಕ್ಕೆ ಹೋಗಬೇಡಿ. ನಾಳೆ ನಿಮ್ಮ ಸರ್ಕಾರ ಮತ್ತೆ ಸಿಕ್ಕಿಹಾಕಿಕೊಳ್ಳುತ್ತದೆ. ಕರ್ನಾಟಕ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ಸ್ ಬಹಳ ಬಿದ್ದಿವೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆದಮೇಲೆ ಕಾನೂನು ಇಲ್ಲದೇ ಇದ್ದರೂ ಮುಂದುವರಿಸಿದರು. ಆದ್ದರಿಂದ ಪುನಃ ಮತ್ತೊಂದು ಹಗರಣಕ್ಕೆ ಆಸ್ಪದ ಆಗುವುದು ಬೇಡ. ಈ ಮಾತು ರಿಕಾರ್ಡ್‌ಗೆ ಬರಲಿ ಎನ್ನುವ ದೃಷ್ಟಿಯಿಂದ ನಾನು ಕೇಳುತ್ತಾ ಇದ್ದೇನೆ. ನಮ್ಮ ಪಕ್ಷದ ಪರವಾಗಿ ವಿರೋಧಪಕ್ಷದ ಪರವಾಗಿ ಈ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತಾ ಇದ್ದೇನೆ. ಮತ್ತೊಂದು ಹಗರಣದಲ್ಲಿ ಸಿಕ್ಕಿಹಾಕಿಕೊಳ್ಳತಕ್ಕ ವಿಚಾರದಾರೆ ಇದು. ಆದ್ದರಿಂದ ಇದನ್ನು ಕೈಬಿಡುವುದು ಬಹಳ ಒಳ್ಳೆಯದು. ನೀವು ಮಾಡುವುದಾದರೆ ನಾನು ಹೇಳತಕ್ಕಂಥ ಅಮೆಂಡ್‌ಮೆಂಟನ್ನು ನೀವು ತೆಗೆದುಕೊಂಡು ಬನ್ನಿ. ಇಲ್ಲ, ನೀವು ಮೂವ್ ಮಾಡಬೇಕು ಎಂದು ಹೇಳುತ್ತೀರೋ? With the permission of the Chair, if the minister agree I will move the amendment. ಆದರೆ ನಾನು ಮೂವ್ ಮಾಡುವುದಿಲ್ಲ. ಏತಕ್ಕೆಂದರೆ you are having the brute majority and I know the fate our amendment. ಇದು ನಿಮಗೆ ಗೊತ್ತಿದೆ. ಅದಕ್ಕೋಸ್ಕರ ನಾವು ಮೂವ್ ಮಾಡುವುದಕ್ಕೆ ತಯಾರಿಲ್ಲ. ಹಿಂದೆ ಮೆಜಾರಿಟಿ ಇದೆ ಎನ್ನತಕ್ಕಂಥ ದೃಷ್ಟಿಯಿಂದ ಇದೇ ವಿಚಾರಕ್ಕೆ ಕೈಹಾಕಿದಾಗ ನಡೆದಿಲ್ಲ. ಇವತ್ತಿನ ದಿವಸ ಸರ್ಕಾರ ನಡೆಸುವುದಕ್ಕೆ ಬಹುಮತ ಬೇಕು. ಆಡಳಿತ ನಡೆಸುವುದಕ್ಕೆ ಬಹುಮತ ಬೇಕು. ಆದರೆ ಕೆಲವೊಮ್ಮೆ ಬಹುಮತ ಇರತಕ್ಕಂಥಾದ್ದು ಜನರ ನ್ಯಾಯದ ಕಣ್ಣಿನಲ್ಲಿ ನುಚ್ಚುನೂರು ಆಗತಕ್ಕಂಥ ಸಂದರ್ಭ ಬಂದುಬಿಡುತ್ತದೆ. ಉದಾಹರಣೆಗೆ ಹೇಳುವುದಾದರೆ, ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ಜಡ್ಜ್‌ಮೆಂಟೇ ಸಾಕ್ಷಿ ಎನ್ನತಕ್ಕಂಥಾದ್ದನ್ನು ಪುನಃ ಪುನಃ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ ಈಗ ಮತ್ತೊಂದು ಕ್ಲಾಸನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

"The Excise Commissioner, may subject to, sub-section (1) and to such rules as may be prescribed and with the prior approval of the State Government, grant licence for any specified area or areas to any person-

(a) to manufacture: or

(b) to bottle: or

(c) to manufacture and bottle

arrack for sale".

ನೋಡಿ ಇದರಲ್ಲಿ ಮತ್ತೆ ಫೈಲುಗಳು ಎಕ್ಸೈಜ್ ಕಮಿಷನರಿಂದ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಬರುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಏತಕ್ಕೆ ಹೀಗೆ ಮಾಡಿದ್ದೀರಿ? ಎಕ್ಸೈಜ್ ಕಮಿಷನರ್‌ಗೆ ಫ್ರೀಡಂ ಕೊಡಿ. ಅವರನ್ನು ಫ್ರೀಹ್ಯಾಂಡಾಗಿ ಬಿಡಿ. ಕಾನೂನು ಪ್ರಕಾರ ಅವರು ಕ್ರಮ ತೆಗೆದುಕೊಂಡು, ಆ ಮೂಲಕ ಸರ್ಕಾರಕ್ಕೆ ಇನ್‌ಕಂ ಬರಲಿ. ಎಕ್ಸೈಜ್ ಕಾಂಟ್ರಾಕ್ಟ್ ಇರಬಹುದು, ಬಾಟ್ಲಿಂಗ್ ಕಂಟ್ರಾಕ್ಟ್ ಇರಬಹುದು ಟೆಂಡರ್ ಕರೆಯುವುದಕ್ಕೆ ಮತ್ತೊಂದು ಮಾಡು ವುದಕ್ಕೆ ಅವರಿಗೆ ಸಂಪೂರ್ಣವಾದ ಅಧಿಕಾರ ಕೊಡಿ. ನೀವು ಇದರಲ್ಲಿ ಸೇರಿಕೊಳ್ಳುವುದು ಬೇಡ. ಇವತ್ತು ರಾಜ್ಯದ ಆದಾಯದಲ್ಲಿ ಸೇಲ್ಸ್ ಟ್ಯಾಕ್ಸ್ ಬಿಟ್ಟರೆ, ಎಕ್ಸೈಜಿನಿಂದ ಮಾತ್ರ ಆದಾಯ ಬರುತ್ತದೆ. ನಾವು ಎಲ್ಲವನ್ನೂ ಕಳೆದುಕೊಳ್ಳುತ್ತಾ ಹೋದರೆ, ಹಣ ಎಲ್ಲಿಂದ ಬರುತ್ತದೆ? ಹಣಕಾಸಿನ ತೊಂದರೆ ಇದೆಯೆಂದು ಈಗಾಗಲೇ ಹೇಳಿದ್ದೀರಿ. ಜಿಲ್ಲಾ ಪರಿಷತ್ತುಗಳಿಗೆ ೬೦೦ ಚಿಲ್ಲರೆ ಕೋಟಿ ಕೊಡುತ್ತೇವೆಂದು ಹೇಳಿದಿರಿ. ಎಷ್ಟು ಕೊಟ್ಟಿದ್ದೀರಿ? ಇವತ್ತು ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್‌ನಿಂದ ಕೋಟಿಗಟ್ಟಲೆ ಹಣ ಬರಬೇಕಾಗಿದೆ. ಬರಬೇಕಾದ ಬಾಕಿಯಲ್ಲಿ ಎಷ್ಟು ವಸೂಲು ಮಾಡಿದ್ದೀರಿ. ಹಣ ಕಳೆದುಕೊಳ್ಳುವುದು ಬೇಡ. ಇವತ್ತು ಸರ್ಕಾರ what they say is:

"The excise commissioner may grant licence for any specified area or areas to any person subject to sub-section (i)...

ಯಾರು ಮ್ಯಾನ್ಯುಫ್ಯಾಕ್ಚರ್ ಮಾಡುತ್ತಾರೆ. ಯಾರು ಬಾಟ್ಲಿಂಗ್ ಮಾಡುತ್ತಾರೆ. ಇದಕ್ಕೆ ಸಂಬಂಧ ಪಟ್ಟ ರೂಲ್ಸ್ ಮಾಡುವವರು ಯಾರು ? ಎಕ್ಸೈಜ್ ಕಮೀಷನರ್ ಅವರು ಮಾಡುತ್ತಾರೆ. ಮುಂದೆ ಏನಿದೆ ಎಂದರೆ

"... and to such rule as may be prescribed by the Excise Commissioner and with the prior approval of the State Government."

ಹಿಂದೆ ಕೂಡ ಇದು ಬಂದಿತ್ತು. ಚೈತನ್ಯಕುಮಾರ್‌ಗೆ ೩ ಜಿಲ್ಲೆ. ಶ್ರೀಶೈಲ ಬಾಟ್ಲಿಂಗ್ ಕಂಪನಿಗೆ ೪ ಜಿಲ್ಲೆ. ಕೆನರಾ ಬಾಟ್ಲಿಂಗ್ ಕಂಪನಿಗೆ ೪ಜಿಲ್ಲೆ. ರಂಗಪ್ಪನಿಗೆ ಮೂರು ಜಿಲ್ಲೆ. ಇವನು ಯಾವುದೋ ಬಟ್ಟೆ ಅಂಗಡಿಯಲ್ಲಿ ಶಿವಮೊಗ್ಗದಲ್ಲಿ ಕೂಲಿ ಮಾಡಿ ಕೊಂಡಿದ್ದವನು. ಅನೇಕ ಸಾರಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಅವರಿಂದ ೫೦,೦೦೦ ರೂಪಾಯಿ ಡಿಪಾಸಿಟ್ ತೆಗೆದು ಕೊಂಡು ಕೋಟಿಗಟ್ಟಲೆ ಸಾರಾಯಿ ಬಾಟ್ಲಿಂಗ್ ಮಾಡುವುದನ್ನು ಕೊಡುವುದು ಬೇಡ ಎಂದು ಗಿಳಿ ಪಾಠ ಹೇಳಿದ ಹಾಗೆ ಹೇಳಿದರೂ ಗಮನಕೊಡಲಿಲ್ಲ. It is also said 'with the prior permission of the State Government' ಸರ್ಕಾರಕ್ಕೆ ರಿವ್ಯೂ ಮಾಡುವಂಥ ಪವರ್ಸ್ ಇದ್ದರೂ ಕೂಡ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಕೆಟ್ಟ ಎಕ್ಸೈಜ್ ಕಮೀಷನರ್ ಇದ್ದು, ತಪ್ಪು ಮಾಡಿದ್ದಾನೆಂದು ಅಂದು ಕೊಂಡರೂ. ರಿವಿಜನಲ್ ಪವರ್ಸ್ ಸರ್ಕಾರ ಇಟ್ಟುಕೊಂಡರೂ ಕೆಲವು ಸಾರಿ ಕಾಮೆಂಟ್ ಮಾಡುವುದಕ್ಕೆ ಬರುತ್ತದೆ. ಕಾನೂನಿನ ವ್ಯಾಖ್ಯಾನ ಯಾವ ಮಟ್ಟಕ್ಕೆ ಹೋಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. What do you mean by the 'prior approval of the State Government'? Here, the Excise Commissioner is duty bound to get the prior approval of the State Government to grant licence to any one of the licence

holder either to manufacture or to bottle and then to sell. Sale also included here. manufacture or to botling of Arrack and for Sale ಎಂದು ಹೇಳಿದ್ದೀರಿ. ಆದ್ದರಿಂದ ನಾನು ಇಲ್ಲಿ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನೀವು ಇಲ್ಲಿ ಸರ್ಕಾರದವರು ಅಂತಿಮವಾದ ಅಧಿಕಾರವನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ಅಂದರೆ ಎರಡು ಪರಪಸ್ ಇದೆ. ಒಂದು, ಹಿಂದೆ ಏನೇನು ವ್ಯವಹಾರ ಮಾಡಿದ್ದರು. ಯಾರ ಯಾರ ಜೊತೆಯಲ್ಲಿ ಏನೇನು ಮಾಡಿದ್ದರು ಅದನ್ನು ಪುನಃ ಸರಿಪಡಿಸಿ ಕೊಳ್ಳಲಿಕ್ಕೆ ವ್ಯವಹಾರಗಳು ನಡೆದಿವೆ ಎಂದು ಅನುಮಾನ ಸ್ಪಷ್ಟವಾಗಿ ಆಗುತ್ತದೆ. ನಾನು ಆ ವಿವರಕ್ಕೆಲ್ಲಾ ಹೋಗುವುದಿಲ್ಲ, ಅದು ಬೇಡ. ಮತ್ತೊಂದು ಅಂದರೆ ಮುಂದೆ ಹೊಸದಾಗಿ ಕಂಟ್ರಾಕ್ಟರ್ ಬರಬಹುದು. ಡಿಸ್ಟಿಲರಿ ಲೈಸೆನ್ಸ್ ಹೋಲ್ಡರ್, ಅರೇಕ್ ಬಾಟ್ಲಿಂಗ್ ಕಂಟ್ರಾಕ್ಟರ್ ಯಾರು ಇದ್ದರು ಅವರಿಗೆ ಲೈಸೆನ್ಸ್ ಇರಲಿ, ಅಥವಾ ಇಲ್ಲದೇ ಇರಲಿ, ಚೈತನ್ಯಕುಮಾರ್, ರಂಗಪ್ಪ, ಕೆನರಾ ಬಾಟ್ಲಿಂಗ್, ಕೋಲಾರ್ ಡಿಸ್ಟಿಲರೀಸ್ ಇವರೆಲ್ಲಾ ತೆಗೆದು ಕೊಳ್ಳುತ್ತಾರೆ. ಮಂಡ್ಯದವರು ಒಬ್ಬರು ಕಂಟ್ರಾಕ್ಟ್ ಮಾಡುತ್ತಾರೆ, ಅವರು ಎಂಟು ಜನ ಕಂಟ್ರಾಕ್ಟರುಗಳಲ್ಲಿ ಒಬ್ಬರು. ಕೇರಳದ ದೊಡ್ಡ ಕಂಟ್ರಾಕ್ಟರ್ ಒಬ್ಬರು ಇದ್ದಾರೆ. ಅವರ ಹೆಸರನ್ನು ಹಿಂದೆ ಒಂದುಸಾರಿ ಪ್ರಸ್ತಾಪ ಮಾಡಿದ್ದೇನೆ. ಅವರಷ್ಟು ರಿಲೇಟೀವ್ಸ್. ಅವರು ಕಂಪನಿಯ ಪಾರ್ಟ್‌ನರ್ಸ್ ಸಹ ಇದ್ದಾರೆ. ಇವರು ಇಲ್ಲಿ ಅವರ ಹಿಂದಿನ ವ್ಯವಹಾರಗಳನ್ನು ಸರಿಪಡಿಸಿಕೊಳ್ಳಬೇಕು. ಹೊಸದಾಗಿ ಅವರ ಮನಸ್ಸಿಗೆ ಬಂದವರಿಗೆ ಕೊಡಬಹುದು. ಇಲ್ಲಿ ಏನು ಮಾಡಿದ್ದಾರೆ ಎಕ್ಸೈಜ್ ಕಮಿಷನರ್ ಹೆಸರು ಇಟ್ಟು ಅವರು ಇಲ್ಲಿ ಬಲೆಗೆ ಬೀಳುತ್ತಾರೆ. ಹಿಂದೆ ಕೂಡ ಬಲಿ ತೆಗೆದು ಕೊಳ್ಳತಕ್ಕ ಕೆಲಸವನ್ನು ಮಾಡಿದ್ದಾರೆ. ಪುಣ್ಯಕ್ಕೆ ಅವರು ಒಳ್ಳೆಯವರು, ಅವರು ಫೇರ್ ಡೀಲ್ ಮಾಡಿದ್ದರು, ಮುಂದೆ ಫೇರ್ ಡೀಲ್ ಮಾಡತಕ್ಕ ಅಧಿಕಾರಿಗಳು ಬಂದರೆ ಒಳ್ಳೆಯದು. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಜನತೆ ಸರ್ಕಾರ ಯಾವುದರಲ್ಲಿಯೇ ತಪ್ಪು ಮಾಡಿದರು ಕಣ್ಣಿನಲ್ಲಿ ಎಣ್ಣೆ ಹಾಕಿ ನೋಡತಕ್ಕದು ಬಂದಿದೆ. Again, in case you Start dealing with these matters of repeat the whole thing that has already gone on in the past, the matter will again see the Court. ಹೈಕೋರ್ಟ್, ಸುಪ್ರೀಂ ಕೋರ್ಟಿಗೆ ಹೊರಟು ಹೋಗುತ್ತದೆ. ಜಡ್ಜ್‌ಮೆಂಟ್ ಬಗ್ಗೆ ಸೆಕೆಂಡ್ ಟ್ರೈವಲ್ ಕೋರ್ಟಿಗೆ ಹೋದರೆ ಏನೇನು ಬರುತ್ತದೆ ಎಂದು ನಾನು ಹೇಳಲಾರೆ. ನನಗೆ ಗೊತ್ತಿದೆ ಗೌರ್ನ್‌ಮೆಂಟ್ ಇನ್‌ಫ್ಲೈಟ್ ಮಾಡತಕ್ಕ ಜಡ್ಜ್‌ಮೆಂಟ್ ಬರುತ್ತದೆ. ಹೈಕೋರ್ಟ್ ಜಡ್ಜ್‌ಮೆಂಟ್ ಬಂದಮೇಲೆ ಡೇರ್ ಅಂಡ್ ಡೆವಿಲ್ ಆಗಿ ಅಮೆಂಡ್‌ಮೆಂಟ್ ತರತಕ್ಕ ಎದೆಗಾರಿಕೆ ಇದೆ ಅಂದರೆ ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಇದನ್ನು ಮಾನ್ಯ ಸದಸ್ಯರಿಗೆ ಬಿಡುತ್ತೇನೆ.

MR. SPEAKER.—you have taken maximum time, please conclude.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾನು ಹಿಂದೆ ಹೇಳಿದ್ದೆ, ಮಂಡ್ಯ ಶುಗರ್ ಫ್ಯಾಕ್ಟರಿ ಇದೆ, ಇದು ಸರ್ಕಾರದ ಸ್ವಾಮ್ಯದಲ್ಲಿರತಕ್ಕ ಕಂಪನಿ. ೧೯ ಜಿಲ್ಲೆಗಳಿಗೆ ಬೇಕಾದಂಥ ಸಾರಾಯಿಯನ್ನು ಬಾಟಲಿಗೆ ತುಂಬಿಕೊಡತಕ್ಕ ಶಕ್ತಿಯನ್ನು ಅದು ಪಡೆದಿದೆ. They are also one of the applicants when applications were called for.

ಅಧ್ಯಕ್ಷರು.—ನೀವು ಸಾಕಷ್ಟು ಗಿಳಿ ಪಾಠ ಹೇಳಿದಂತೆ ಹೇಳಿದ್ದೀರಿ. ಇನ್ನು be brief.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಮ್ಮ ಗೈಡ್‌ಲೈನ್ಸ್ ನಮಗೆ ಬೇಕು. ಗಿಳಿ ಪಾಠ ಹೇಳಿದಂತೆ ಹೇಳುವುದು, ಮಾಡುವುದು ನಮ್ಮ ಕರ್ತವ್ಯ. ನಮ್ಮ ಕರ್ತವ್ಯವನ್ನು ನಾವು ಮಾಡಿದೆವು ಅಷ್ಟಾದರೂ ಕೂಡ ಸರ್ಕಾರದವರು ಇಷ್ಟೊಂದು ಮುಂದುವರೆಯುತ್ತಿದ್ದಾರೆ. ಇವರಿಗೆ ಏನು ಮಾಡಬೇಕು. ತಾವು ಸ್ವಲ್ಪ ಹೇಳಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳವನು ನಾನು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳವರಿಂದಲೇ ನನಗೆ ಸಲಹೆ ಬೇಕಾಗಿದೆ. ಕಳೆದ ಸಾರಿ ಅಪ್ಲಿಕೇಶನ್ ಹಾಕಿದವರಿಗೆ ಕೊಡಲಿಲ್ಲ. ಈ ಸಾರಿ ನಾನು ಕೇಳುತ್ತಿದ್ದೇನೆ what prohibited this Government to entrust the whole matter to this Government-owned Company of Mandya I am just posting this question to this Government. what is the difficulty for the Government to accept this ? Even now, ಆಂಧ್ರ ಪ್ರದೇಶದಲ್ಲಿ ನನಗೆ

ಗೊತ್ತಿರುವ ಹಾಗೆ, ಅಲ್ಲಿ ಸರ್ಕಾರ ಸಂಪೂರ್ಣವಾಗಿ ಇದನ್ನು ವಹಿಸಿಕೊಂಡು ಯಾರಿಗೂ ಟೆಂಡರ್ ಕರೆದಿಲ್ಲ, ಅರ್ಜಿ ಕರೆದಿಲ್ಲ. ಚರ್ಚೆಯೂ ಬೇಡ ಯಾರನ್ನು ಬೈಯ್ಯುವುದು ಬೇಡವೆಂದು ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ನಮಗೆ ಭಾಷಣ ಮಾಡುವುದು ಬೇಡ. ನಮಗೆ ಭಾಷಣ ಮಾಡ ಬೇಕೆಂದು ಆಸೆ ಇದೆಯೇನು ? ನಾವು ಇಲ್ಲಿಯೇ ಕುಳಿತುಕೊಳ್ಳುತ್ತೇವೆ. Sri Inamdar is the Minister incharge now. If he makes a statement ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ವಿತ್‌ಡ್ರಾ ಮಾಡುತ್ತೇನೆಂದು ಹೇಳಿದರೆ, ನಾವು ಮಾತನಾಡುವುದು ಬೇಡ. ಇದನ್ನು ನಮ್ಮ ಫ್ಯಾಕ್ಟರಿಗಳಿಗೆ ವಹಿಸಿಕೊಡುತ್ತೇವೆಂದು ಹೇಳಿದರೆ ಸಾಕು. ಮಂಡ್ಯ ಷುಗರ್ ಫ್ಯಾಕ್ಟರಿ ಡಿಸ್ಟಿಲರಿ ವಹಿಸಿಕೊಂಡರೆ, ಅದರ ವಿಚಾರವೇ ಬೇಡ, ಟೆಂಡರ್ ಅಪ್ಲಿಕೇಶನ್ ಕರೆಯುವುದು ಬೇಡ. ಅವರಿಗೆ ವಹಿಸಿಕೊಡುತ್ತೇವೆನ್ನುವ ಮಾತನ್ನು ಹೇಳುತ್ತಾರೆಯೇ ? ಆ ರೀತಿ ಹೇಳಿದರೆ ಈ ತಿದ್ದುಪಡಿ ಮಸೂದೆಯನ್ನು ಒಪ್ಪಿಕೊಳ್ಳುತ್ತೇವೆ ನಾವು ಮುಂಧಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಕೇಳತಕ್ಕದ್ದು ಒಂದು ವಿಚಾರ. ನಾನು ಮತ್ತೊಂದು ಪ್ರಶ್ನೆಯನ್ನು ಕೇಳಬೇಕು. ನಾನು ತಮ್ಮ ಉತ್ತರದಲ್ಲಿ ಒಂದನ್ನು ಡಿಮ್ಯಾಂಡ್ ಮಾಡುತ್ತೇನೆ. ೧೯೮೨-೮೩ರಲ್ಲಿ ನಿಮ್ಮ ಸರ್ಕಾರ ಅಸ್ತಿತ್ವಕ್ಕೆ ಕರ್ನಾಟಕದಲ್ಲಿ ಬರುವುದಕ್ಕೆ ಮುಂಚೆ ಎಷ್ಟು ಡಿಸ್ಟಿಲರಿಗಳು ಇದ್ದವು ? ಯಾರ್ಯಾರು ಇದ್ದರು ? ಈಗ ಎಷ್ಟಿವೆ ? ೧೯೮೩ಕ್ಕೆ ಮುಂದೆ ಇದ್ದವುಗಳನ್ನು ಬಿಡಿ. ಮುಂದೆ ಯಾರಿಗೆ ಕೊಡುತ್ತೀರಿ ಅದೆಲ್ಲ ಅಮೆಂಡ್‌ಮೆಂಟ್ ಬಿಲ್‌ನಲ್ಲಿ ಏನೇನು ಇಲ್ಲ, ನಿಮಗೆ ಬ್ಲಾಂಕ್ ಬೇಕಾಗಿದೆ. ಬ್ಲಾಂಕ್ ಚೆಕ್ ಇದ್ದ ಹಾಗೆ. ಮುಂದೆ ಎಷ್ಟು ಲೈಸೆನ್ಸ್ ಕೊಡುತ್ತೀರಿ ? ಫೈನಲೈಸ್ ಮಾಡುವಾಗ ಯಾರಿಗೆ ಕೊಡುತ್ತೀರಿ ? ಇಲ್ಲಿಯವರೆಗೆ ಎಷ್ಟು ಇವೆ ? you please place the entire list containing all these details on the table of this Hon' ble House. I am demanding this, so that the Hon'ble members sitting either on this side or that side, let them come to know. ಈಗ ನೀವೇನು ಅಮೆಂಡ್‌ಮೆಂಟ್ ತಂದಿದ್ದೀರಿ ಅದು ಆದ ತಕ್ಷಣ ಡಿಸ್ಟಿಲರಿ ಲೈಸೆನ್ಸ್‌ಗೆ ಪಟಪಟ ಅಂತ ಅಪ್ಲಿಕೇಶನ್ಸ್ ಬೀಳುತ್ತವೆ. ನೂರಾರು ಅಪ್ಲಿಕೇಶನ್ಸ್‌ಗಳು ಎಕ್ಸೈಜ್ ಕಮಿಷನರ್ ಆಫೀಸ್‌ಗೆ ಬಂದು ಬೀಳುತ್ತವೆ. Everybody wants to take the contract of bottling of either manufacturing or bottling. they know the mind, i. e., the entire mental set-up of the Government headed by Sri Rama krishna Hegde. They know it is very easy to deal with this Government ಅವರಿಗೆ ಗೊತ್ತು infrastracture and financial position of each distillery ಅದಕೋಸ್ಕರ ಅಪ್ಲಿಕೇಶನ್ ಹೋಗುತ್ತವೆ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ತಿಳಿಸಿ ನಾನು ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡುತ್ತೇನೆ. ದಯಮಾಡಿ ನಾವು ಹೇಳು ವುದನ್ನು ಪೂರ್ತಿ ಕೇಳಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ದಯಮಾಡಿ ಈ ಬಿಲ್ಲನ್ನು ಪರ್ಸ್ಯೂ ಮಾಡಬೇಡಿ. ಈ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದನ್ನು ಸರಿಯಾದ ರೀತಿಯಲ್ಲಿ ತಂದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇಲ್ಲದಿದ್ದರೆ ವಿರೋಧ ಮಾಡುತ್ತೇನೆಂದು ಈಗಲೂ ಕೂಡ ಹೇಳುತ್ತೇನೆ. ಕೊನೆಯ ಒಂದು ಮಾತನ್ನು ಸರ್ಕಾರಕ್ಕೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಪುನಃ ಏನಾದರೂ ಕೂಡ ಇದೇ ರೀತಿಯಲ್ಲಿ ಮುಂದುವರಿಸು ತ್ತೇವೆಂದು ಸರ್ಕಾರದವರು ಮುಂದೆ ಹೋದರೆ, ಇನಾಂದಾರ್‌ರವರು ಬಹಳ ಎಚ್ಚರಿಕೆಯಿಂದ ಇರ ಬೇಕೆಂಬ ಒಂದು ಕಿವಿ ಮಾತನ್ನು ಅವರು ಹೊಸದಾಗಿ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಮ್ಮಲ್ಲಿ ಒಂದು ಗಾದೆ ಇದೆ '' ಕೋತಿ ತಿಂದು ಮೇಕೆ ಬಾಯಿಗೆ ಒರಿಸಿಬಿಟ್ಟಿತು '' ಎಂದು. ನಿಮ್ಮ ಬಗ್ಗೆ ನಾನು ಅಪಾದನೆ ಮಾಡುತ್ತಾ ಇಲ್ಲ. ಗಾದೆಯ ದೃಷ್ಟಿ ಯಿಂದ ಹೇಳಿದೆ. ಇದು ಆಗತಕ್ಕಂಥ ಸಂದರ್ಭ ಬರಬಾರದು. ಏತಕ್ಕೆಂದರೆ ಹಿಂದೆ ಮಾನ್ಯ ಸಚಿವರಾದ ಜಿಗಜಿಣಗಿಯವರು ಸಿಕ್ಕಿಹಾಕಿಕೊಂಡು, ಪಾಪ ನಾನು ಇದರಲ್ಲಿ ಏನು ಇಲ್ಲ ಎಂದು ಈ ಸದನದಲ್ಲಿಯೇ ಹೇಳಿಬಿಟ್ಟರು. ಹಿಂದಿನ ಜಡ್ಜ್‌ಮೆಂಟ್ ಇರುತ್ತದೆ. ಬಹಳ ಎತ್ತರಕ್ಕೆ ವಿಚಾರ ಹೋಗುತ್ತದೆ. ಆದ್ದರಿಂದ ಈಗಲೇ ಈ ಮಾತನ್ನು ಹೇಳಿದ್ದೇನೆ. ಕೊನೆಯದಾಗಿ ಸರ್ಕಾರ ನಾವು ಅಧಿಕಾರದಲ್ಲಿದ್ದೇವೆ. ಏನಾದರೂ ಮಾಡಿ ತಪ್ಪಿಸಿಕೊಳ್ಳಬಹುದು ಎನ್ನುವ ವಿಚಾರ ಇದೆ. ಆ ಒಂದು ಎದೆಗಾರಿಕೆಯನ್ನು ಸಂಪೂರ್ಣವಾಗಿ ಧೂಳೀಪಟ ಮಾಡಲಿಕ್ಕೆ ಪರಿಸರ ಸೃಷ್ಟಿ ಈಗಾಗಲೇ ಆಗಿದೆ. ಆದ್ದರಿಂದ ಮುಂದೆ ಎಚ್ಚರಿಕೆಯಿಂದ ಇರಲಿ ಎಂದು ಇಷ್ಟು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಎಕ್ಸೈಸ್ ಇಲಾಖೆ ಎಂದರೆ ನನಗೆ ಬಹಳ ಅನುಮಾನ ಬರುತ್ತಿಲ್ಲದೆ, ಬಹಳವಾಗಿ ಕನ್‌ಫ್ಯೂಸ್ ಆಗುತ್ತದೆ ಏತಕ್ಕೆಂದರೆ ಬ್ರಾಂದಿಬಾಟಲ್ಸ್‌ನಲ್ಲಿ ಸೆಕೆಂಡ್ಸ್ ನೋಡಿದ್ದೇನೆ. ಈಗ ಸಾರಾಯಿಯನ್ನು ಡಿಸ್ಟಿಲರೀಸ್‌ಗೆ ಕೊಟ್ಟರೆ ಸೆಕೆಂಡ್ಸ್ ಬರುತ್ತದೆಂದು ನನಗನಿಸುತ್ತದೆ. ಇಷ್ಟು ದಿವಸಗಳು ಬ್ರಾಂದಿ ಬಾಟಲ್‌ಗಳಲ್ಲಿ ಮಾತ್ರ ಸೆಕೆಂಡ್ಸ್ ಎಂದು ಕೊಂಡುಕೊಳ್ಳುತ್ತಿದ್ದರು. ಪೇಪರ್‌ನಲ್ಲಿ ಓದಿದ್ದೇನೆ, ಲಂಕೇಶ್ ಪತ್ರಿಕೆಯಲ್ಲಿ ಸರ್ಕಾರ ಏತಕ್ಕೆ ದಿವಾಳಿಯಾಗುತ್ತಿದೆ ಎನ್ನುವುದರ ಬಗ್ಗೆ ಹೆಡ್‌ಲೈನ್‌ನಲ್ಲಿ ಹಾಕಿ ಬರೆದಿದ್ದಾರೆ. ಇಷ್ಟು ದಿವಸ ಬ್ರಾಂದಿ, ವಿಸ್ಕಿ ಇಷ್ಟರಲ್ಲಿ ಸೆಕೆಂಡ್ಸ್ ಇದ್ದು ಇದರಿಂದ ಒಂದು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗುತ್ತಿತ್ತು. ಈಗ ಸಾರಾಯಿಯನ್ನು ಮಿಲಿಯನರ್ಸ್‌ಗೆ ಕೊಡುತ್ತಿದ್ದಾರೆ. ಇದಕ್ಕೆ ಅಮೆಂಡ್‌ಮೆಂಟ್ ತಂದು ಸಾರಾಯಿಯನ್ನು ಡಿಸ್ಟಿಲರೀಸ್‌ಗೆ ಕೊಟ್ಟರೆ ೧೦ ಸಾವಿರ ಬಾಟಲನ್ನು ಪಬ್ಲಿಕ್‌ಗೆ ಕೊಟ್ಟು ೯೦ ಸಾವಿರ ಸೆಕೆಂಡ್ಸ್ ಮಾಡಿ ಇನ್ನೂ ಒಂದು ಕೋಟಿ ರೂಪಾಯಿ ಮಾಡುತ್ತೇವೆಂದು ನಿಮ್ಮವರು ಬಹಳ ದೊಡ್ಡದಾಗಿ ಪ್ಲಾನ್ ಮಾಡಿದ್ದಾರೆ. ಇದು ಬಹಳ ಒಳ್ಳೆಯ ಉಪಾಯ. ತಮಗೆ ಇದು ಅರ್ಥವಾಗುವುದಿಲ್ಲ. ಏತಕ್ಕೆಂದರೆ ಇದನ್ನು ಯಾರೋ ಮಾಡುತ್ತಿರುವುದು. ತಮ್ಮನ್ನು ಹೊಸದಾಗಿ ಹಾಕಿದ್ದಾರೆ. ತಾವು ಸಾರಾಯಿಯನ್ನು ಕುಡಿಯುವುದಿಲ್ಲ. ಬ್ರಾಂದಿಯನ್ನು ಕುಡಿದಿರ ಬಹುದು. ತಮಗೆ ಸಾರಾಯಿ ವಿಚಾರ ಗೊತ್ತಿರುವುದಿಲ್ಲ. ಸಾರಾಯಿ ಎಂದರೆ ಸರ್ವರೋಗ ನಿವಾರಿ ಎಂದು. ದೆಹಲಿಯಲ್ಲಿ ಎಷ್ಟಿದೆ ಅದರ ಅರ್ಧ ಭಾಗಕ್ಕಿಂತ ಜಾಸ್ತಿ ನಮ್ಮಲ್ಲಿ ಇದೆ. ಈ ಸಾರಾಯಿ ಅಂಗಡಿಗಳ ಹಾವಳಿ ಹೇಳುವುದಕ್ಕೆ ಆಗುವುದಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಡಿಸ್ಟಿಲರಿಗಳಿಗೆ ಕೊಡುತ್ತಿದ್ದಾರೆ. ಖೋಡೆ ಕಂಪೆನಿಯವರು ಕೊಳ್ಳೆಗಾಲದ ಸಾರಾಯಿ ಅಂಗಡಿಗಳನ್ನು ಕೊಂಡು ಕೊಂಡರು. ಗೌರೀಬಿದನೂರು ಶುಗರ್ ಫ್ಯಾಕ್ಟರಿ ೨೫ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರ ತಕ್ಕಂಥ ಫ್ಯಾಕ್ಟರಿ. ಇದನ್ನು ನಿಮ್ಮ ಸರ್ಕಾರದವರು ಮೂರುವರೆ ಕೋಟಿ ರೂಪಾಯಿಗಳಿಗೆ ಅವರಿಗೆ ದಾನವಾಗಿ ಕೊಟ್ಟುಬಿಟ್ಟರು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಸರಿಯಾದ ಮಾಹಿತಿಯನ್ನು ಕೊಟ್ಟು ಮಾತನಾಡಬೇಕು. ಎಲ್ಲದಕ್ಕೂ ಟೆಂಡರ್‌ನ್ನು ಕರೆದು ಕೊಟ್ಟಿದ್ದೇವೆ. ತಾವು ೫ ಕೋಟಿ ರೂಪಾಯಿ ಗಳನ್ನು ಕೊಡಿ ಇವತ್ತಿನ ದಿವಸವೇ ನಿಮಗೆ ಕೊಡಿಸಿ ಬಿಡುತ್ತೇನೆ. ಅವರು ಓಪನ್ ಟೆಂಡರ್‌ನಲ್ಲಿ ಕೊಂಡಿರುತ್ತಾರೆ. ಕೊಳ್ಳೆಗಾಲದ ಶುಗರ್ ಫ್ಯಾಕ್ಟರಿಯಲ್ಲಿ ಡಿಸ್ಟಿಲರಿ ಇಲ್ಲವೇ ಇಲ್ಲ. ನಾವು ಹೇಳಿದರೆ ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಹೇಳುವುದು ಅರ್ಥವಾಗುವುದಿಲ್ಲ. ಏತಕ್ಕೆಂದರೆ ಮಾನ್ಯ ಜಾಲಪ್ಪ ನವರೂ ಕೂಡ ಕಂಟ್ರಾಕ್ಟರ್ ಆಗಿದ್ದವರು.

ಶ್ರೀ ಆರ್.ಎಲ್. ಜಾಲಪ್ಪ.—ಅವರು ಹೇಳುವುದು ನಿಜ. ಇದು ನನಗೆ ೧೩ನೇ ಅವತಾರ. ನಾನು ಸಾರಾಯಿ ಮಾರಿದ್ದೇನೆ, ಹೆಂಡ ಮಾರಿದ್ದೇನೆ, ಹಾಲು ಮಾರಿದ್ದೇನೆ, ಎಲ್ಲಾ ಮಾರಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಮಾರುವವರಿಗೆ ತಲೆ ಕೆಡುವುದಿಲ್ಲ. ಅದನ್ನು ಸೇವಿಸುವವರಿಗೆ ಕೆಡುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಹೆಂಡ ತಯಾರಿಸಿ ಪೂಜೆ ಮಾಡುತ್ತಾರೆಯೇ? ನೀವು ಕುಡಿಯುತ್ತಾ ಇರಿ ಎಂದು ಜನರಿಗೆ ಕೊಡುತ್ತಾರೆ.

ಅಧ್ಯಕ್ಷರು.—ತಿದ್ದುಪಡಿ ಬಗ್ಗೆ ಮಾತನಾಡಿ. ವಿಷಯಕ್ಕೆ ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ಆದ್ದರಿಂದ ಡಿಸ್ಟಿಲರೀಸ್ ಎಂಬುದು ಏನು ಇದೆ ಆ ಡೆಫನಿಷನ್ ಅನ್ನು...

ಅಧ್ಯಕ್ಷರು.—ಅಮೆಂಡ್‌ಮೆಂಟ್ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಅಮೆಂಡ್‌ಮೆಂಟ್ ಕೊಟ್ಟಿದ್ದೇನೆ. ಗೌರೀಬಿದನೂರು ಸಕ್ಕರೆ ಕಾರ್ಖಾನೆಯಲ್ಲಿ ಡಿಸ್ಟಿಲರೀಸ್ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.—ಸಕ್ಕರೆ ಕಾರ್ಖಾನೆ ಹಾಳಾಗಿ ಹೋಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಹೊಸಪೇಟೆಯಲ್ಲಿ ಇದೆ ಎಂದು ಕಾಣುತ್ತದೆ. ಕೋ–ಆಪರೇಟೀವ್ ಷುಗರ್ ಫ್ಯಾಕ್ಟರಿಗಳಲ್ಲಿರತಕ್ಕ ಎಲ್ಲಾ ಡಿಸ್ಟಿಲರೀಸ್ ಸಿಂಕ್ ಆಗುತ್ತಿದೆ. ಇನ್ನೊಂದು ಸ್ಕ್ಯಾಂಡಲ್ ತಯಾರಾಗುವುದು ಬೇಡ. ಇನ್ನೊಂದು ಸೆಕೆಂಡ್ಸ್ ತಯಾರಾಗುವುದು ಬೇಡ ಎಂದು ಹೇಳುತ್ತೇನೆ. ಡಿಸ್ಟಿಲರೀಸ್ ಅನ್ನು ಗವರ್ನಮೆಂಟ್ ಓನ್ಡ್ ಷುಗರ್ ಫ್ಯಾಕ್ಟರಿಗಳಿಗೆ ಕೊಡಿ. ಮಂಡ್ಯ ಷುಗರ್ ಫ್ಯಾಕ್ಟರಿಯಲ್ಲಿ ಪೂರ್ತಿ ಮ್ಯಾನ್ಯುಫ್ಯಾಕ್ಚರ್ ಮಾಡಿ. ಅಲ್ಲಿ ಮೋಸ ಇರುವುದಿಲ್ಲ. ನೀರು ಸೇರಿಸುವ ಭಯ ಇರುವುದಿಲ್ಲ. ನೀವು ಅವರಿಗೆ ವರ್ಷಕ್ಕೆ ಲಕ್ಷ ರೂಪಾಯಿ ಕೊಟ್ಟರೆ ಕುಡಿದು ಮಜವಾಗಿ ಇರುತ್ತಾರೆ. ಪೂರ್ತಿ ನೀರು ಹಾಕಿ ಕೊಟ್ಟರೂ ನಮ್ಮವರು ಕುಡಿಯುತ್ತಾರೆ.

ಅಧ್ಯಕ್ಷರು.—ನೀವು ಮಸೂದೆಯನ್ನು ಅಪೋಸ್ ಮಾಡುತ್ತೀರೋ ಅಥವಾ ಸಪೋರ್ಟ್ ಮಾಡುತ್ತೀರೋ?

ಶ್ರೀ ಆರ್. ವೆಂಕಟರಾಮಯ್ಯ.—ಪೂರ್ತಿಯಾಗಿ ಗವರ್ನಮೆಂಟ್ ಓನ್ಡ್ ಷುಗರ್ ಫ್ಯಾಕ್ಟರಿಗಳಿಗೆ, ಮಂಡ್ಯ ಷುಗರ್ ಫ್ಯಾಕ್ಟರಿಗೆ, ಕೋ–ಆಪರೇಟಿವ್ ಫ್ಯಾಕ್ಟರಿಗಳಿಗೆ ಮಾತ್ರ ಕೊಟ್ಟರೆ ಸರ್ಕಾರಕ್ಕೆ ವರ್ಷಕ್ಕೆ ೨೦೦-೩೦೦ ಕೋಟಿ ರೂಪಾಯಿ ಲಾಭ ಬರುತ್ತದೆ. ಇಲ್ಲದಿದ್ದರೆ ಬೇರೆಯವರು ನಿಮಗೆ ಟೋಪಿ ಹಾಕುತ್ತಾರೆ. ದಯವಿಟ್ಟು ಈ ಪ್ರವೃತ್ತಿ ಏನಿದೆ ಅದನ್ನು ಕೈಬಿಡಿ, ಸರ್ಕಾರದ ಫ್ಯಾಕ್ಟರಿಗಳಿಗೆ ಮಾತ್ರ ಕೊಡುವುದು ಆಗಬೇಕು.

"Licence to manufacture, bottle or manufacture and bottle arrack for sale".

ಎಂದು ನಾನು ಅಮೆಂಡ್‌ಮೆಂಟ್ ತಂದಿದ್ದೇವೆ. ಈ ಅಮೆಂಡ್‌ಮೆಂಟ್ ತಂದಿರುವ ಉದ್ದೇಶವನ್ನು ನಾನು ಆಗಲೇ ಹೇಳಿದೆ. It is a very big conspiracy by some big circles. ಬೇರೆ ೮ ಜನರಿಗೆ ಕೊಟ್ಟಿದ್ದೀರಿ. ಇಬ್ಬರಿಗೆ ಕೊಡುತ್ತೇವೆಂದರೆ ಕೊಡಿ. ೩–೪ ಜನರಿಗೆ ಕನ್‌ಫೈನ್ ಆಗಿ ಎಲ್ಲರನ್ನೂ ಕೂಡಿಕೊಂಡು ಗೊಂಬೆ ಆಟ ಆಡಿಸಿದ ಹಾಗೆ ಅಧಿಕಾರಿಗಳನ್ನು ತಮ್ಮ ಜೇಬಿಗೆ ಹಾಕಿಕೊಂಡು ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಬೇಡಿ. ಇದರಿಂದ ಕುಡಿಯುವವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ನಾನು ಕೊಟ್ಟಿರುವ ಅಮೆಂಡ್‌ಮೆಂಟ್ ಚರ್ಚೆಗೆ ಬಂದಾಗ ವಿವರವಾಗಿ ಹೇಳುತ್ತೇನೆ. ಈ ರೀತಿ ನೀವು ತಿದ್ದುಪಡಿ ತಂದಿರುವುದರಿಂದ ಸರ್ಕಾರಕ್ಕಾಗಲಿ, ಜನರಿಗಾಗಲಿ ಸಹಾಯ ಮಾಡಿದಂತಾಗುವುದಿಲ್ಲ. ಇದನ್ನು ಸರಿಯಾಗಿ ತಿದ್ದುಪಡಿ ಮಾಡಿ ಗವರ್ನಮೆಂಟ್ ಓನ್ಡ್ ಮ್ಯಾನ್ಯುಫ್ಯಾಕ್ಚರರ್ಸ್‌ಗೆ (ಫ್ಯಾಕ್ಟರಿಗಳಿಗೆ) ಮಾತ್ರ ಕೊಡುವುದು ಆಗಬೇಕು, ಇಲ್ಲದಿದ್ದರೆ ಕೊ–ಆಪರೇಟೀವ್ ಷುಗರ್ ಫ್ಯಾಕ್ಟರಿಗಳಿಗೆ ಕೊಡುವುದು ಆಗಬೇಕು. ಇದು ಎಲ್ಲಾ ಡಿಸ್ಟಿಲರಿಗಳಿಗೂ ಅಪ್ಲೈ ಆಗುತ್ತದೆಂದು ಮಾಡಬೇಕು. ಇಲ್ಲದಿದ್ದರೆ ಇದರಿಂದ ಜನತೆಗೆ ಸಹಾಯ ಮಾಡಿದಂತಾಗುವುದಿಲ್ಲ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಈ ಸಾರಾಯಿ ವಿಚಾರ ಜನರಿಗೆ ಒಂದು ಕಡೆ ಆರೋಗ್ಯವೋ ಅನಾರೋಗ್ಯವೋ ಆಗಿದ್ದರೆ ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳಿಗೆ ಹೆಚ್ಚಿನ ರೂಪದಲ್ಲಿ ಹಣಕಾಸಿನ ನೆರವು ನೀಡತಕ್ಕ ವ್ಯವಸ್ಥೆ ಎಂದರೆ ತಪ್ಪಾಗಲಾರದು. ಏಕೆಂದರೆ ಅದು ತಮಗೂ ಗೊತ್ತಿದೆ. ತಾವೂ ಒಪ್ಪಿಕೊಳ್ಳುತ್ತೀರಿ, ನಾನು ಪತ್ರಿಕೆಯಲ್ಲೂ ಓದಿದ್ದೇನೆ. ಸೆಕೆಂಡ್ಸ್ ವಿಚಾರವನ್ನು ಎಲ್ಲರೂ ಮಾತನಾಡಿರುವುದರಿಂದ ಮತ್ತೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ಬರಬೇಕಾದ ತೆರಿಗೆಯನ್ನು ಮೋಸ ಮಾಡಿ ಸೆಕೆಂಡ್ಸ್‌ನ್ನು ಇಂಥಿಂಥ ಕಂಪನಿಯವರು ಬೇರೆ ಕಡೆ ಸಾಗಿಸುತ್ತಿದ್ದಾರೆಂದು ಜನತಾ ಪಕ್ಷದ ಸಭೆಯಲ್ಲಿ

೩–೦೦ ಪಿ.ಎಂ.

ಗಲಾಟೆಯಾಗಿದೆ. ಇದು ಬ್ರಾಂದಿ ವಿಸ್ಕಿಗೆ ಸಂಬಂಧಪಟ್ಟಿದ್ದಾಯಿತು. ಇದರಲ್ಲಿ ಏನೇನು ನಡೆಯುತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ.

(ಶ್ರೀಮತಿ ಪುಷ್ಪಾವತಿ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಯು. ಭೂಪತಿ.—ಒಂದು ಕಡೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ತೆರಿಗೆ ರೂಪದಲ್ಲಿ ಬಂದರೂ ಕೂಡ ಇದರಿಂದ ಪಕ್ಷಗಳ ನಿಧಿಗೂ ಲಕ್ಷಾಂತರ ರೂಪಾಯಿ ಬರುತ್ತಾ ಇರಬೇಕು ಎಂದು ನನಗನ್ನಿಸುತ್ತದೆ. ಇಲ್ಲ ಎಂದರೆ ಇಂಥ ಆಪಾದನೆಗಳು ಕೇಳಿಬರುವುದಕ್ಕೆ ಸಾಧ್ಯವಿಲ್ಲ. ಆದಾದಮೇಲೆ ಅಬ್ಕಾರಿ ಇಲಾಖೆಯಲ್ಲಿ ಬರತಕ್ಕ ಲಿಕ್ಕರ್ಸ್ ಏನಿದೆ, ಜನರಿಗೆ ಕುಡಿಸತಕ್ಕ ಲಿಕ್ಕರ್ಸ್

ಏನಿದೆ ಅದು ಬರೀ ಸರ್ಕಾರದ ಬೊಕ್ಕಸಕ್ಕೆ ಮಾತ್ರ ಆದಾಯ ಕೊಡುವುದಿಲ್ಲ ರಾಜಕೀಯ ಭ್ರಷ್ಟಾಚಾರವನ್ನು ಜಾಸ್ತಿ ಮಾಡುವುದಕ್ಕೆ ಕೂಡ ಅನುಕೂಲ ಮಾಡಿಕೊಡುತ್ತದೆ ಎಂದು ನನಗನ್ನಿಸುತ್ತದೆ. ಅದಾದನಂತರ ಅರಾಕ್ ಬಾಟ್ಲಿಂಗ್ ಲೈಸೆನ್ಸ್ ಎಂಥವರಿಗೆ ಕೊಡಬೇಕೆಂಬ ಬಗ್ಗೆ ತಿದ್ದುಪಡಿ ತಂದಿದ್ದಾರೆ. ಡಿಸ್ಟಿಲರಿ ಯಾರಿಗೆ ಇಲ್ಲ ಅಂಥವರಿಗೆ ಬಾಟ್ಲಿಂಗ್ ಲೈಸೆನ್ಸ್ ಕೊಡಕೂಡದು ಎಂದು ತಂದಿದ್ದಾರೆ. ಆದರೆ Short Title and Commencement, clause-2 ನಲ್ಲಿ It shall be deemed to have come into force on the 1st day of August 1987 ಎಂದು ಹೇಳಿದ್ದಾರೆ. ಅಂದರೆ ಇದಕ್ಕೆ ಮುಂಚೆ ಡಿಸ್ಟಿಲರಿ ಇಲ್ಲದವರಿಗೆ ಬಾಟ್ಲಿಂಗ್ ಮಾಡುವಂಥ ಪರ್ಮಿಷನ್ ಕೊಟ್ಟಿದ್ದರೆ ಅಂಥವರಿಗೆ ಲೈಸೆನ್ಸ್‌ನ್ನೂ ಕ್ಯಾನ್ಸಲ್ ಮಾಡುತ್ತೀರಾ ? ಅಥವಾ ಹೊಸದಾಗಿ ಡಿಸ್ಟಿಲರೀಸ್‌ಗೆ ಲೈಸೆನ್ಸ್ ಕೊಡುವುದಕ್ಕೆ ಅರ್ಜಿ ಆಹ್ವಾನ ಮಾಡುತ್ತೀರಾ? ಹಿಂದೆ ಇಡೀ ಸರ್ಕಾರ ರಾಜೀನಾಮೆ ಕೊಡತಕ್ಕ ಬಾಟ್ಲಿಂಗ್ ಪ್ರಕರಣ ನಡೆದಿದೆ. ಅಂಥ ಬಾಟ್ಲಿಂಗ್ ಪ್ರಕರಣದ ನಂತರ ಮತ್ತೊಮ್ಮೆ ಅಂಥದ್ದೇ ಪ್ರಕರಣವನ್ನು ಮಾಡುವುದಕ್ಕೆ ಸರ್ಕಾರ ಹೊರಟಿದೆ ಎಂಬ ಅನುಮಾನ ನನಗೆ ಕಾಣುತ್ತಿದೆ. ಮೊದಲು ಜನ ಏನು ಕಡಿಮೆ ಹಣ ತೆತ್ತು ಸಾರಾಯಿ ಕುಡಿಯುತ್ತಿದ್ದರು ಅದರಲ್ಲೂ ಹಳ್ಳಿಗಾಡಿನ ಜನ ಕೂಲಿ ಮಾಡತಕ್ಕ ಜನ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಯಾರಿದ್ದಾರೆ ಅವರು ನಾಲ್ಕು ರೂಪಾಯಿ ಐದು ರೂಪಾಯಿ ಕೊಟ್ಟು ಸಾರಾಯಿ ಕುಡಿಯುತ್ತಿದ್ದರು. ಈ ಬಾಟ್ಲಿಂಗ್ ಪದ್ಧತಿ ಬಂದಮೇಲೆ ಶುದ್ಧವಾದ ಸಾರಾಯಿ ಕೊಡುತ್ತೇವೆ ಎಂದರೆ ನನಗಂತೂ ನಂಬಿಕೆ ಇಲ್ಲ. ಏಕೆಂದರೆ ಇದರಲ್ಲಿ ಎರಡು ವಿಧ ಇಲ್ಲವೇ ಇಲ್ಲ. ಸರ್ಕಾರಿ ಸಾರಾಯಿ ಶುದ್ಧವಾಗಿರುತ್ತದೆ, ಭಟ್ಟಿ ಸಾರಾಯಿ ಶುದ್ಧ ಇಲ್ಲ ಎಂಬ ಅಭಿಪ್ರಾಯ ಏನಿದೆ ಅದರ ಬಗ್ಗೆ ಸಾರಾಯಿ ಕುಡಿಯುವವರನ್ನು ಕೇಳಿದರೆ ಗೊತ್ತಾಗುತ್ತದೆ. ಕೆಲವು ಜನ ಶ್ರೀಮಂತರಿಗೆ ಲಾಭ ಮಾಡಿಕೊಡುವುದಕ್ಕೆ ಸಾರಾಯಿ ಕುಡಿಯುವ ಬಡವರನ್ನು ಸುಲಿಗೆ ಮಾಡುವುದಕ್ಕೆ ಬಾಟ್ಲಿಂಗ್ ಸಿಸ್ಟಂ ಇಂಟ್ರೊಡ್ಯೂಸ್ ಮಾಡಿದ್ದು ತಪ್ಪು. ದಾರಿಯಲ್ಲಿ ಹೋಗುವಾಗ ನಾಲ್ಕು ರೂಪಾಯಿ ಕೊಟ್ಟು ಸಾರಾಯಿ ಕುಡಿಯುತ್ತಿದ್ದರು. ಅದಕ್ಕೆ ಈಗ ೮ ರೂಪಾಯಿ ೧೦ ರೂಪಾಯಿ ಕೊಡಬೇಕಾಗಿದೆ. ಬಾಟ್ಲಿಂಗ್ ಕಾಸ್ಟ್ ಕೂಡ ಕುಡಿಯುವವರ ಮೇಲೆ ಹಾಕುವುದರಿಂದ ಸಾಮಾನ್ಯ ಪ್ರಜೆಗೆ ಸಾರಾಯಿ ಕುಡಿಯುವವರಿಗೆ ಹೆಚ್ಚಿಗೆ ಭಾರ ಹಾಕಿದಂತಾಗಿದೆ. ಇನ್ನೊಂದು ಕಡೆ ದೊಡ್ಡ ಸಾಧನೆ ಮಾಡುತ್ತಿದ್ದೇವೆ ಎಂದು ತೋರಿಸಿಕೊಳ್ಳುತ್ತಿದ್ದಾರೆ. ಹಿಂದೆ ಇದರ ಬಗ್ಗೆ ರೆಸಲ್ಯೂಷನ್ ಬಂದಿದ್ದಾಗ ಚರ್ಚೆಯಾಗಿದೆ. ಜೋಳ, ಅಕ್ಕಿ, ಸಕ್ಕರೆ ಇವುಗಳನ್ನು ತಿಂಗಳಿಗೆ ಇಷ್ಟೇ ಕೊಡಬೇಕೆಂದು ಪಬ್ಲಿಕ್ ಡಿಸ್ಟ್ರಬ್ಯೂಷನ್ ಸಿಸ್ಟಂನಲ್ಲಿ ಮಿತಿಯನ್ನು ಹಾಕಿದ್ದಾರೆ. ಆದರೆ ಸಾರಾಯಿಗೆ ಇಷ್ಟೇ ಎಂದು ಮಿತಿ ಇಲ್ಲ. ದುಡ್ಡಿದ್ದರೆ ಎಷ್ಟು ಬೇಕಾದರೂ ಎಷ್ಟು ಲೀಟರ್ ಬೇಕಾದರೂ ಕುಡಿಯಬಹುದು. ಈ ಸರ್ಕಾರವಂತೂ ಮಿತಿ ಹಾಕುವುದಿಲ್ಲ. ರಾಷ್ಟ್ರ ಮಟ್ಟದಲ್ಲಿ ಈ ಬಗ್ಗೆ ಏಕ ರೂಪದ ನೀತಿ ಇರಬೇಕೆಂಬ ಬಗ್ಗೆ ಚರ್ಚೆಯಾಗಿದೆ. ಈಗ ತಮಗೆ ಬೇಕಾದ ಜನರಿಗೆ ಡಿಸ್ಟಿಲರೀಸ್‌ಗೆ ಲೈಸೆನ್ಸ್ ಕೊಟ್ಟು ಅಥವಾ ಈಗ ಕೊಟ್ಟಿರತಕ್ಕವರಿಗೆ ಡಿಸ್ಟಿಲರಿ ಮಾಡಿದ ರೀತಿಯಲ್ಲಿ ಕೊಟ್ಟು ಬಾಟ್ಲಿಂಗ್ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಅಥವಾ ಅದನ್ನು ಲೀಗಲೈಸ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೆಂದು ಕಾಣುತ್ತಿದೆ. ಮಾನ್ಯ ಬಂಗಾರಪ್ಪನವರು ಹೇಳಿದ ರೀತಿಯಲ್ಲಿ ಎಕ್ಸೈಜ್ ಕಮಿಷನರ್ ಅವರಿಗೆ ಕೊಟ್ಟಿರತಕ್ಕ ಅಧಿಕಾರದಲ್ಲಿ ಕಂಡೀಷನ್ಸ್ ಹಾಕಿದ್ದಾರೆ. ಬಿಲ್‌ನಲ್ಲಿ ಹೀಗಿದೆ.

"With the prior approval of the State Government, grant licence for any specified area to any person"

ಕಾನೂನಿನಲ್ಲಿ ನ್ಯಾಯಯುತವಾಗಿ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಇದ್ದು ಅವರ ಹಣಕಾಸಿನ ಸ್ಥಿತಿಗತಿ ನೋಡಿ ಡಿಸ್ಟಿಲರೀಸ್ ಲೈಸೆನ್ಸ್ ಪಡೆಯುವುದಕ್ಕೆ ಅಥವಾ ಡಿಸ್ಟಿಲರೀಸ್ ಇದ್ದಂಥವರು ಬಾಟ್ಲಿಂಗ್ ಮಾಡುವುದಕ್ಕೆ ಲೈಸೆನ್ಸ್ ಪಡೆಯುವುದಕ್ಕೆ ಎಕ್ಸೈಜ್ ಕಮಿಷನರ್‌ಗೆ ಅಧಿಕಾರ ಕೊಟ್ಟಿದ್ದಾಗ ಸರ್ಕಾರದ ಪರ್ಮಿಷನ್ ಏತಕ್ಕೆ ಬೇಕೋ ಗೊತ್ತಾಗುತ್ತಿಲ್ಲ. ಇದರ ಅರ್ಥ ಏನು ತೋರಿಸುತ್ತದೆಂದರೆ ಮೇಲ್ಮಟ್ಟದಲ್ಲಿ ಈ ವಿಚಾರದಲ್ಲಿ ಲಕ್ಷಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆಯುವುದಕ್ಕೆ ಈ ಕಾಯಿದೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಕಾಣುತ್ತದೆ ಈಗಾಗಲೇ ಹಿಂದೆ ನಡೆದಿರುವಂತಹ ವ್ಯವಹಾರವನ್ನು ನೋಡಿದರೆ ಇದು ಸಹಜವಾಗಿ ಬಂದೇ ಬರುತ್ತದೆ. ಆದಕಾರಣ ಈ ಒಂದು ಅಧಿಕಾರವನ್ನು ಸರ್ಕಾರದ ಹತ್ತಿರ ಇಟ್ಟುಕೊಳ್ಳಬಾರದು. ಸರ್ಕಾರದ ಹತ್ತಿರ ಇಟ್ಟುಕೊಳ್ಳದೆ ಹಿಂದೆ ಇದ್ದಂತೆ ಅಬಕಾರಿ ಆಯುಕ್ತರಿಗೆ ಕೊಡಬೇಕು. ಅಲ್ಲದೆ ಹಿಂದೆ ಬಾಟ್ಲಿಂಗ್ ಮ್ಯಾನುಫ್ಯಾಕ್ಚರ್ ಮಾಡುವುದಕ್ಕಾಗಿ ಡಿಸ್ಟಲರೀಸ್ ಇಲ್ಲದವರಿಗೆ ಏನು ಪರ್ಮಿಷನ್‌ನ್ನು ಕೊಟ್ಟಿದ್ದೀರಿ ಅದನ್ನು ಕ್ಯಾನ್ಸಲ್ ಮಾಡತಕ್ಕಂತಹದ್ದು. ಇನ್ನು ಮುಂದೆ

ಖಾಸಗಿಯವರಿಗೆ ಕೊಡದೆ ಯಾವ ಸಂಸ್ಥೆ ಸರ್ಕಾರಿ ಸ್ವಾಮ್ಯದಲ್ಲಿದೆಯೋ ಯಾರು ಡಿಸ್ಟಲರೀಸ್‌ನ್ನು ಉತ್ಪಾದನೆ ಮಾಡತಕ್ಕ ಸಾಮರ್ಥ್ಯವನ್ನು ಹೊಂದಿದ್ದಾರೋ ಅಂತಹ ಅರಾಕ್ ಬಾಟ್ಲಿಂಗ್‌ನ್ನು ಮಾಡತಕ್ಕಂತಹ ಕೆಲಸವನ್ನು ಸರ್ಕಾರ ಮಾಡಿದರೆ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಕೈಗಾರಿಕೆಗಳು ಬದುಕುವುದಕ್ಕೆ ಅನುಕೂಲವಾಗುತ್ತದೆ. ಇದರಿಂದಾಗಿ ಸಾರ್ವಜನಿಕ ಉದ್ದಿಮೆಗಳ ಮೇಲೂ ಜನರಿಗೆ ನಂಬಿಕೆ ಬರುತ್ತದೆ. ಆಪರೆ ಯಾರಿಗೋ ಕೆಲವರಿಗೆ ಅನುಕೂಲವನ್ನು ಮಾಡಿಕೊಡುವುದಕ್ಕಾಗಿಯೋ ಈ ಬಿಲ್ಲನ್ನು ತಂದು ಡಿಸ್ಟಿಲರೀಸ್ ಮ್ಯಾನುಫ್ಯಾಕ್ಚರ್ ಮಾಡುವುವಕ್ಕೆ ಹಾಗೂ ಬಾಟ್ಲಿಂಗ್ ಮಾಡುವುದಕ್ಕೆ ಡಿಸ್ಟಲರೀಸ್ ಲೈಸನ್ಸ್ ಇಲ್ಲದವರಿಗೆ ಕೊಡುವುದು ತಪ್ಪು ಕೂಡ ಹೌದು.

ಶ್ರೀ ರಮೇಶ್ ಕುಮಾರ್.—ನಿಮಗೆ ಸಹಾಯ ಮಾಡೋಣ ಎಂಬುದಾಗಿ ಹೇಳುತ್ತಿದ್ದೇನೆ. ನಮ್ಮ ಸರ್ಕಾರದವರೇ ಕೊಟ್ಟಿರುವ ಸೂಚನೆಯ ಪ್ರಕಾರ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳು ಯಾರು ಡಿಸ್ಟಲರೀಸನ್ನು ಇಟ್ಟುಕೊಂಡಿದ್ದಾರೋ ಅವರು ಮಾಡಬಹುದು. ಅದರ ನಂತರ ಸಹಕಾರಿ ಇಲಾಖೆಯ ನೇತೃತ್ವದಲ್ಲಿ ನಡೆಯುತ್ತಿರತಕ್ಕಂತಹ ಸಕ್ಕರೆ ಕಾರ್ಖಾನೆಗಳು ಏನು ಇವೆ, ಅವುಗಳನ್ನೂ ಹೊರತುಪಡಿಸಿದಾಗ ಖಾಸಗಿಯವರ ಪ್ರಶ್ನೆ ಬರುತ್ತದೆ. ಹೊಸದಾಗಿ ಬೇರೆಯವರಿಗೆ ಕೊಡುವುದನ್ನು ತಪ್ಪಿಸುವುದು ಒಂದು ಮತ್ತೆ ಇರತಕ್ಕ ಸಹಕಾರಿ ಸಕ್ಕರೆ ಕಾರ್ಖಾನೆಗಳು ಮುಂದೆ ಬಂದು ಡಿಸ್ಟಲರೀಸ್‌ನ್ನು ಎಸ್ಟಾಬ್ಲಿಷ್ ಮಾಡಿದರೆ, ಖಾಸಗಿಯವರು ಈ ರಂಗವನ್ನು ಪ್ರವೇಶಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಸೂಚನೆಯನ್ನು ಕೊಟ್ಟರೆ ಒಳ್ಳೆಯದಾಗುವುದಿಲ್ಲವೆ ?

ಶ್ರೀ ಯು. ಭೂಪತಿ.—ಸಹಕಾರಿ ಕ್ಷೇತ್ರದಲ್ಲಿರತಕ್ಕಂತಹ ಸಕ್ಕರೆ ಕಾರ್ಖಾನೆಗಳ ಬಗ್ಗೆ ಜನರಿಗೆ ನಂಬಿಕೆ ಹೋಗಿದೆ. ಇದಕ್ಕೆ ಸರ್ಕಾರದ ಹಲವಾರು ತಪ್ಪುಗಳೇ ಕಾರಣ. ಅದನ್ನು ಸರ್ಕಾರ ಕೂಡ ಒಪ್ಪಿಕೊಳ್ಳುತ್ತದೆ. ಎಲ್ಲಿ ಕಬ್ಬಿನ ಪ್ರಮಾಣ ಇರುವುದಿಲ್ಲವೋ ಅಂತಹ ಕಡೆ ಮತ್ತೊಂದು ಸಕ್ಕರೆ ಕಾರ್ಖಾನೆಯನ್ನು ಹೊಸದಾಗಿ ತೆರೆಯಲು ಲೈಸನ್ಸ್ ಕೊಡುವುದು ಹಾಗೂ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳಲ್ಲಿ ಅವ್ಯವಹಾರ ನಡೆದಿದ್ದು ಅಂತಹ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಮಾಡಿ ವರದಿಯನ್ನು ಕೊಟ್ಟಾಗ ಅದರ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುವುದಿಲ್ಲ. ಇದರಿಂದಾಗಿ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಹಾಗೂ ಸರ್ಕಾರದ ಮತಿಯಿಂದ ನಡೆಯುತ್ತಿರತಕ್ಕ ಸಕ್ಕರೆ ಕಾರ್ಖಾನೆಗಳ ಮೇಲೆ ಜನರಿಗೆ ನಂಬಿಕೆ ಹೊರಟುಹೋಗುತ್ತಿದೆ. ಒಂದು ಸಕ್ಕರೆ ಕಾರ್ಖಾನೆ ಲಾಭ ಮಾಡುತ್ತಿದ್ದರೆ, ಇನ್ನೊಂದು ಸಕ್ಕರೆ ಕಾರ್ಖಾನೆ ದೀವಾಳಿಯಾಗಿದೆ. ಅದಕ್ಕೆ ಇದೇ ಕಾರಣ.

ಶ್ರೀ ರಮೇಶ್ ಕುಮಾರ್.—ಇದೇ ಸ್ಥಿತಿ ಸಾರ್ವಜನಿಕ ಉದ್ದಿಮೆಗಳಲ್ಲೂ ಇದೆ. ಒಂದು ಉದ್ದಿಮೆ ಲಾಭ ಮಾಡುತ್ತಿದ್ದರೆ, ಇನ್ನೊಂದು ಉದ್ದಿಮೆ ಪಾತಾಳಕ್ಕೆ ಹೋಗುತ್ತಿದೆ. ಇವೆರಡರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಯು. ಭೂಪತಿ.—ಅಲ್ಲಿರತಕ್ಕ ದುರಾಡಳಿತವನ್ನು ಸರಿಪಡಿಸತಕ್ಕ ವಿಲ್ ಪವರ್ ಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸಹಕಾರಿ ಸ್ವಾಮ್ಯದಲ್ಲಿರತಕ್ಕ ಸಾರ್ವಜನಿಕ ಉದ್ದಿಮೆಗಳು ಮ್ಯಾನುಫ್ಯಾಕ್ಚರ್ ಮಾಡುವಂಥ ಸಾಮರ್ಥ್ಯವನ್ನು ಹೊಂದಿರತಕ್ಕವರಿಗೆ ಕೊಡಬೇಕೆಂದು ಮಾನ್ಯ ಸದಸ್ಯರಾದ ಶ್ರೀ ರಮೇಶ್ ಕುಮಾರ್‌ರವರು ಹೇಳಿದ್ದಾರೆ. ಈಗಾಗಲೇ ಶ್ರೀಮಾನ್ಯ ವೆಂಕಟರಾಮಯ್ಯನವರು ಅದರ ಬಗ್ಗೆ ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಡಿಸ್ಟಿಲರೀಸ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಬಹುಶಃ ಅದನ್ನು ನಿಮ್ಮ ಪಾರ್ಟಿಯವರಿಗೆ ಹೇಳಿ ಒಪ್ಪಿಸಿದರೆ ನಿಮ್ಮ ಉದ್ದೇಶ ಪೂರ್ತಿಯಾಗುತ್ತದೆ,

ಶ್ರೀ ರಮೇಶ್‌ಕುಮಾರ್.—ಯಾರು ಏನೇ ಹೇಳಲಿ ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಾ ಹೋಗುತ್ತೇನೆ ಎಂಬುದುತವಾಗಿ ಗೊತ್ತಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ನಾಯಕತ್ವದಲ್ಲಿ ಡಿಸ್ಟಿಲರೀಸ್‌ನ್ನು ಮಾಡುವುದು ಮತ್ತು ಸರ್ಕಾರಿ ಸ್ವಾಮ್ಯದಲ್ಲಿರುತಕ್ಕ ಉದ್ದಿಮೆಗಳು ಡಿಸ್ಟಲರೀಸ್‌ನ್ನು ಮಾಡುವುದು. ಇವೆರಡನ್ನೂ ಬಿಟ್ಟು ಇನ್ನೂ ಕೂಡ ಅವಕಾಶ ಇದ್ದರೆ ಖಾಸಗಿಯವರಿಗೆ ಕೊಡತಕ್ಕಂತಹ ತೀರ್ಮಾನವಾದರೆ ಅದನ್ನು ತಪ್ಪಿಸುವುದಕ್ಕೆ ಯಾರಿಗಾದರೂ ಇನ್‌ಫ್ರಾಸ್ಟ್ರಕ್ಚರ್ ಇರತಕ್ಕ ಸಹಕಾರೀ ಸಕ್ಕರೆ ಕಾರ್ಖಾನೆಗಳಲ್ಲಿ we can suggest to them that they can go in for distilleries so that we can completely prevent the private participants.

SRI M. MALLIKARJUNA KHARGE.—That is the amendment we have brought.

ಶ್ರೀ ರಮೇಶ್ ಕುಮಾರ್.—ಮಾನ್ಯ ಸದಸ್ಯರಾದ ಶ್ರೀ ಭೂಪತಿಯವರು ಸಹಕಾರಿ ಕ್ಷೇತ್ರದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳ ಬಗ್ಗೆಯೂ ಜನರಿಗೆ ನಂಬಿಕೆ ಇಲ್ಲ. ಪಬ್ಲಿಕ್ ಸೆಕ್ಟಾರ್‌ನಲ್ಲೂ ಜನರಿಗೆ ನಂಬಿಕೆ ಇಲ್ಲ. ಎಂದು ಹೇಳಿದರೆ What is the alternative? You must stick to something.

ಶ್ರೀ ಯು. ಭೂಪತಿ.—ಪಬ್ಲಿಕ್ ಸೆಕ್ಟರ್‌ನಲ್ಲಿ ನಂಬಿಕೆ ಇಲ್ಲ ಎಂದು ನಾನು ಹೇಳಲೇ ಇಲ್ಲ. ನಂಬಿಕೆ ಇಲ್ಲದ ಮಾತನ್ನು ಹೇಳುತ್ತಿರುವುದೇ ಸರ್ಕಾರ. ಸಾರ್ವಜನಿಕ ಕ್ಷೇತ್ರದಲ್ಲಿ ನಂಬಿಕೆಯನ್ನು ಕಳೆದುಕೊಂಡಿರತಕ್ಕ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಹಲವಾರು ಭಾರಿ ಇದೇ ಮನೆಯಲ್ಲಿ ಹೇಳಿದ್ದನ್ನು ನಾವು ಕೇಳಿದ್ದೇವೆ, ಆ ಒಂದು ದೃಷ್ಟಿಕೋನ ಹೋಗಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ಯಾರೋ ಒಬ್ಬ ಎಂ. ಡಿ. ಆಗಲೀ, ಒಬ್ಬ ಜನರಲ್ ಮೇನೆಜರ್ ಆಗಲೀ ಕೆಟ್ಟದಾಗಿ ನಡೆದುಕೊಂಡರೆ, ಅವರ ಒಂದು ಬ್ಯಾಡ್ ಅಡ್ಮಿನಿಸ್ಟ್ರೇಷನ್ ಮೇಲೆ ನಷ್ಟ ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು, ಪಬ್ಲಿಕ್ ಸೆಕ್ಟರೇ ಇರುವುದು ಸರಿಯಲ್ಲವೆಂದು ಹೇಳುವುದು ಸರಿಯಲ್ಲ. ಇವತ್ತು ಈ ಬಿಲ್‌ಗೆ ಸೀಮಿತವಾಗಿ ಹೇಳುವುದಾದರೆ, ಹೊಸಪೇಟೆಯಲ್ಲಿ ಒಂದು ಡಿಸ್ಟಿಲರಿ ಇತ್ತು. ಅಲ್ಲಿ ಹಿಂದೆ ಬಾಟ್ಲಿಂಗ್ ಮಾಡುತ್ತಿದ್ದರು. ಆದರೆ ಬಾಟ್ಲಿಂಗ್ ಬಾಟ್ಲಿಂಗ್ ಹಗರಣ ಇಲ್ಲಿ ಬಂದ ಸಂದರ್ಭದಲ್ಲಿ ಆ ಬಾಟ್ಲಿಂಗ್ ಯೂನಿಟ್‌ನ್ನು ಅವರು ಬಂದ್ ಮಾಡಿದರು. ಏಕೆ ಮಾಡಿದರು? ಅಲ್ಲಿ ೫೦-೬೦ ಜನ ಕೆಲಸ ಮಾಡುತ್ತಿದ್ದರು. ಅವರಿಗೆ ಇವತ್ತು ಕೆಲಸವಿಲ್ಲ, ನಾನು ತಿಳಿದುಕೊಳ್ಳುವುದು ಏನೆಂದರೆ, ರಾಜಕೀಯದ ಹಿನ್ನೆಲೆ ಈ ಬಾಟ್ಲಿಂಗ್‌ನಲ್ಲಿ, ಸಾರಾಯಿಯಲ್ಲಿ ಇರತಕ್ಕದ್ದು ಬೇರೆ ಇನ್ಯಾವುದರಲ್ಲೂ ಇಲ್ಲ ಎನಿಸುತ್ತದೆ. ಇವತ್ತು ಬಾಟ್ಲಿಂಗ್ ಕಂಪನಿಯವರು ಆಗಲೀ, ಎಕ್ಸೈಸ್ ಕಂಟ್ರಾಕ್ಟರ್ಸ್ ಆಗಲಿ ಲಕ್ಷಾಂತರ ರೂಪಾಯಿ ಮಾಡಿದ್ದಾರೆ. ಜೊತೆಗೆ ರಾಜಕೀಯ ಪಕ್ಷಕ್ಕೆ ಬಹಳ ದಾನ ಎಂದರೆ ಲೆಕ್ಕ ಇಲ್ಲದಷ್ಟು ಕೊಡುತ್ತಾರೆ. ಇದು ನಡೆದುಬಂದ ಹಾದಿ. ಈ ಎಕ್ಸೈಸ್ ಲಾಭ ಎಷ್ಟು ಪವರ್ ಫುಲ್ ಎಂದರೆ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು ಎಂದು ಮಾಲೀಕರಿಗೆ ಡಿಸ್ಟಿಲರಿ ಲೈಸೆನ್ಸ್ ಕೊಡುತ್ತೇವೆಂದು ಹೇಳುವುದು, ಅಮೆಂಡ್‌ಮೆಂಟ್ ತಂದು ಪ್ರೋಗ್ರೇಸೀವ್ ಸ್ಟೆಪ್ ಎಂದರೆ ತಪ್ಪಾಗುತ್ತದೆ. ನಿಮ್ಮ ಪ್ರಿನಿಪಲ್ ಸರಿ ಇದೆ. ಆದರೆ ನೀವು ಮೊದಲು ಖಾಸಗೀ ಮಾಲೀಕರಿಗೆ ಕೊಡದೆ ಸರ್ಕಾರಿ ಸ್ವಾಮ್ಯದ ಸಹಕಾರಿ ಕ್ಷೇತ್ರದ ಕೈಗಾರಿಕೆಗಳಿಗೆ ಮೊದಲು ಆದ್ಯತೆಯನ್ನು ಕೊಡಿ. ಅಲ್ಲಿ ನ್ಯೂನತೆ ಇದ್ದರೆ ಅದನ್ನು ಸರಿಮಾಡಿ. ಮೊದಲು ಅವುಗಳಿಗೆ ಕೊಟ್ಟು ಅಲ್ಲಿಂದ ಸರಕಾರಕ್ಕೆ ಬರತಕ್ಕ ಆದಾಯವನ್ನು ಸರಿಯಾದ ರೀತಿಯಲ್ಲಿ ಪಡೆಯುವುದಕ್ಕೆ ಪ್ರಯತ್ನಪಡುತ್ತೀರೆಂದು ಹೇಳಿ, ಈ ಬಿಲ್‌ನಲ್ಲಿ ಇರತಕ್ಕ ನ್ಯೂನತೆಗಳು ಏನಿವೆ ಅವುಗಳನ್ನು ನೋಡಬೇಕಾಗುತ್ತದೆ. ಇವತ್ತು ಡಿಸ್ಟಿಲರಿ ಇಲ್ಲದೇ ಇರುವವರೂ ಕೂಡ ಲಕ್ಷಾಂತರ ರೂಪಾಯಿಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಕೆಲವು ಕಡೆ ಸಿನಿಮಾ ಮಂದಿರಗಳನ್ನು ಬಂದ್ ಮಾಡಿ, ಬಾಟ್ಲಿಂಗ್ ಯೂನಿಟ್‌ಗಳನ್ನು ತೆರೆದಿದ್ದಾರೆಂದರೆ ನಾವು ಇದನ್ನು ಅರ್ಥಮಾಡಿಕೊಳ್ಳಬಹುದು. ನಾನು ಈ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ ಆ ಬಗ್ಗೆ ಹೇಳಿದರೆ ಕೆಲವರಿಗೆ ಸಿಟ್ಟು ಬರುತ್ತದೆ.

ಶ್ರೀ ರಮೇಶ್ ಕುಮಾರ್.—ಏತಕ್ಕೆ ಸಿಟ್ಟು ಹೇಳಿಬಿಡಿ ಸ್ವಾಮಿ,

ಶ್ರೀ ಯು. ಭೂಪತಿ.—ಈ ಬಿಲ್ಲಿನಲ್ಲಿ ಕೆಲವು ನ್ಯೂನತೆಗಳನ್ನು ಬಿಟ್ಟರೆ ಉಳಿದ ಭಾಗವನ್ನು ಬೆಂಬಲಿಸುತ್ತಾ ಸರ್ಕಾರಿ ಸ್ವಾಮ್ಯದ ಸಹಕಾರಿ ಕ್ಷೇತ್ರಕ್ಕೆ ಮೊದಲು ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಪ್ರೈವೇಟ್‌ನವರಿಗೆ ಕೊಟ್ಟರೆ ಇದರಿಂದ ಲಾಭ ಆಗುವುದಿಲ್ಲ. ಮತ್ತೆ ಈ ಬಿಲ್ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅದು ಸೂಕ್ತ ಇದೆ. ಅದನ್ನೂ ಕೂಡ ಸರ್ಕಾರ ಒಪ್ಪಿಕೊಳ್ಳಬೇಕೆಂದು ಹೇಳಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ ೧೯೮೭- ಇದಕ್ಕೆ ಏನು ಅಮೆಂಡ್‌ಮೆಂಟ್ ತರುತ್ತಾ ಇದ್ದಾರೆ, ಇದರ ಬಗ್ಗೆ ನಾನು ಅಂದುಕೊಂಡೆ, ಆಗಸ್ಟ್ ೧೬ನೇ ತಾರೀಖಿನಂದು ಜನತಾ ಪಕ್ಷದ ಶಾಸಕಾಂಗ ಸಭೆಯಲ್ಲಿ ಗಲಾಟೆ ಆದಮೇಲೆ ಏನಾಯಿತು ಆ ವಿಚಾರಕ್ಕಾಗಿ ನಾನು ಮಾನ್ಯ ಬೈರೆಗೌಡರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಅವರು ಧೈರ್ಯ ಮಾಡಿ ಮುಖ್ಯಮಂತ್ರಿಗಳ ಗಮನವನ್ನು

ಸೆಳೆಯುವಂತಹ ಒಂದು ಕೆಲಸವನ್ನು ಮಾಡಿದರು. ಅಧಿಕಾರ ರೂಢ ಪಕ್ಷದಲ್ಲಿ ಆದ ಅನ್ಯಾಯಗಳನ್ನು ಅನ್ಯಾಯ ಎಂದು ಹೇಳತಕ್ಕಂಥ ಶಾಸಕರು ಜನತಾ ಪಕ್ಷದಲ್ಲಿ ಇದ್ದಾರಲ್ಲ ಎಂಬ ಬಗ್ಗೆ ನನಗಂತೂ ಮೆಚ್ಚುಗೆ ಆಯಿತು. ಬಹುಶಃ ಈ ಅಮೆಂಡ್‌ಮೆಂಟ್‌ನಲ್ಲಿ ಸರಕಾರದ ಸ್ವಾಮ್ಯದಲ್ಲಿರತಕ್ಕಂಥ ಕೋ ಆಪರೇಟಿವ್ ಶುಗರ್ ಫ್ಯಾಕ್ಟರಿಗಳಿಗೆ ಮತ್ತು ಕಂಪನಿಗಳಿಗೆ ಸಂಬಂಧಪಟ್ಟ ಡಿಸ್ಟಿಲರಿಗಳು ಏನಿವೆ ಅವುಗಳಿಗೆ ಮಾತ್ರ ಈ ಅವಕಾಶವನ್ನು ಕೊಡುತ್ತೇವೆ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಇದ್ದರೆ, ಇಷ್ಟು ದಿವಸ ಆದಮೇಲೆ ಅವ್ಯವಹಾರದ ಬಗ್ಗೆ ಸರಕಾರಕ್ಕೆ ಇದ್ದ ಕೆಟ್ಟ ಹೆಸರು ತೆಗೆದು ಹಾಕುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರಕಾರ ಮಾಡಿದೆ ಎಂದು ನಾನು ಅಂದುಕೊಂಡಿದ್ದೇನೆ. ಕೆಲವಷ್ಟು ಜನಕ್ಕೆ ಮಾತ್ರ ಈ ವ್ಯವಹಾರ ಕೊಟ್ಟರೂ, ಇದರಿಂದ ಜನಗಳಿಗೆ ಬಹಳಷ್ಟು ಅನ್ಯಾಯವಾಗುತ್ತದೆ. ಈ ಅಬಕಾರಿಗೆ ಇನ್ನೊಂದು ಹೆಸರು ಅಪಾಯಕಾರಿ ಎಂದು ಇದೆ. ಇದರ ವ್ಯವಹಾರ ಮಾಡುವವರಿಗೆ ಇದು ಉಪಕಾರಿ ಆದರೆ, ಇದನ್ನು ಕುಡಿಯುವವರಿಗೆ ಇದು ಅಪಾಯಕಾರಿಯಾಗಿದೆ. ನಮ್ಮ ಕಾಂಗ್ರೆಸ್ ಮಿತ್ರರು ಕೂಡ ನೇರವಾಗಿ ಈ ಸಂಗತಿಯ ಕುರಿತು ಮಾತನಾಡುವುದಿಲ್ಲ. ಇದರ ಬಗ್ಗೆ ಸಾಕಷ್ಟು ಅನುಭವ ನಮಗೆ ಇದೆ. ಎಲ್ಲಿ ತಪ್ಪು ಆಗುತ್ತದೆ ಅದಕ್ಕೆ ಅಮೆಂಡ್‌ಮೆಂಟ್‌ನ್ನು ತರುತ್ತಾರೆ. ಈ ವಿಚಾರ ಹೈಕೋರ್ಟ್‌ಗೆ ಪತ್ರಕ್ಕಾಗಿ ಹೋಗಿತ್ತು ಎಂಬುದು ನಮ್ಮ ಮಿತ್ರರಿಗೆ ಗೊತ್ತಿದೆ. ಆದರೆ ಅವರು ಅದರ ಮೇಲೆ ಹೆಚ್ಚಿಗೆ ಬೆಳಕನ್ನು ಚೆಲ್ಲುತ್ತಾ ಇಲ್ಲ. ಅದು ಏಕೆಂದು ನಮಗೆ ಗೊತ್ತಿದೆ. ಹಿಂದೆ ಮಾನ್ಯ ಗುಂಡೂರಾಯರ ಕಾಲದಲ್ಲಿ ಗೌರಿಬಿದನೂರು ಕೋಆಪರೇಟಿವ್ ಶುಗರ್ ಫ್ಯಾಕ್ಟರಿ, ಹಿರಿಯೂರು ಕೋಆಪರೇಟಿವ್ ಶುಗರ್ ಫ್ಯಾಕ್ಟರಿಗಳನ್ನು ಅವತ್ತಿನ ಕಾಲದಲ್ಲಿ ಅವರು ಬೇರೆಯವರಿಗೆ ಲೀಸ್ ಮೇಲೆ ಕೊಟ್ಟಿದ್ದರು. ಈ ರೀತಿಯಾಗಿ ಬಹಳ ವರ್ಷಗಳಿಂದಲೂ ಈ ಇಲಾಖೆಯಲ್ಲಿ ಬೇರೆ ಬೇರೆ ತರಹವಲ್ಲಿ ಅನೇಕ ಜನರ ಕೈವಾಡ ನಡೆಯುತ್ತಿದೆ. ರಾಜಕಾರಣಿಗಳನ್ನು ಸಾಕುವಂಥದ್ದು, ಕುತಂತ್ರ, ತಂತ್ರ, ಇತ್ಯಾದಿಯಾಗಿ ನಡೆಯುತ್ತಾ ಇದೆ. ಅದಕ್ಕೆ ನಾವೆಲ್ಲರೂ ಕೂಡ ಬಲಿಯಾಗುತ್ತಾ ಇದ್ದೇವೆ. ಈಗಲಾದರೂ ಅದು ಹಾಗೆ ಆಗುವುದಕ್ಕೆ ಬಿಡುವಿಲ್ಲ ಎಂಬ ಒಂದು ನಂಬಿಕೆಯನ್ನು ನಾನು ಹೊಂದಿದ್ದೇನೆ. ಇದರ ಬಗ್ಗೆ ನಮಗಂತೂ ಅನುಭವವಿಲ್ಲ. ಈ ದಿಸೆಯಲ್ಲಿ ನಾನು ಸರಕಾರದವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಜನರಿಗೆ ಏನಾದರೂ ನ್ಯಾಯವನ್ನು ದೊರಕಿಸಿಕೊಡಬೇಕೆನ್ನುವ ಉದ್ದೇಶ ನಿಮ್ಮಲ್ಲಿ ಇದ್ದರೆ, ಕುಡಿಯುವ ಜನರಿಗೆ ಒಳ್ಳೆಯ ಸಾರಾಯಿ ಕೊಡುತ್ತೇವೆ ಎನ್ನುವಂತಹ ಕಾಲದಲ್ಲಿ ಅದೇ ರೀತಿಯಾಗಿ ಪ್ರೈವೈಟ್ ಡಿಸ್ಟಿಲರಿಗಳಿಗೆ ಅವಕಾಶವನ್ನು ಕೊಡುವುದಿಲ್ಲ, ಸರಕಾರಿ ಡಿಸ್ಟಿಲರಿಗಳಿಗೆ ಮಾತ್ರ ಅವಕಾಶವನ್ನು ಕೊಡುತ್ತೀರಿ. ಇರುವ ಡಿಸ್ಟಿಲರಿಗಳ ಸಾಮರ್ಥ್ಯವನ್ನು ಜಾಸ್ತಿ ಮಾಡುತ್ತೇವೆ, ಪಾಂಡವಪುರ ಶುಗರ್ ಫ್ಯಾಕ್ಟರಿ ಮುಂತಾದ ಕೋಆಪರೇಟಿವ್‌ಗೆ ಸಂಬಂಧಪಟ್ಟಂತಹ ಡಿಸ್ಟಿಲರಿಗಳಿಗೆ ಬೇಕಾದಂತಹ ಸವಲತ್ತುಗಳನ್ನು ದೊರಕಿಸಿಕೊಟ್ಟು ಅದರ ಮೂಲಕ ಈ ಕೆಲಸವನ್ನು ಮಾಡುತ್ತೇವೆ ಎಂಬುದು ಸ್ಪಷ್ಟವಾಗಿ ಇದ್ದರೆ ಮಾತ್ರ ಇದರಿಂದ ಜನರಿಗೆ ಉಪಕಾರ ಆಗುತ್ತದೆ. ಮಾನ್ಯ ಆರ್. ವೆಂಕಟರಾಮಯ್ಯನವರು ಇದಕ್ಕೆ ತಮ್ಮ ಅಮೆಂಡ್‌ಮೆಂಟ್‌ನ್ನು ತರುತ್ತಾ ಇದ್ದಾರೆ. ಕೇವಲ ಸರಕಾರಕ್ಕೆ ಸಂಬಂಧಪಟ್ಟಂತಹ ಡಿಸ್ಟಿಲರಿಗಳಿಗೆ ಮತ್ತು ಕೋ ಆಪರೇಟಿವ್‌ನಲ್ಲಿಯವುಗಳಿಗೆ ಮಾತ್ರ ಅವಕಾಶ ಸಿಗಬೇಕೆಂಬ ಅವರ ತಿದ್ದುಪಡಿ ಇದೆ. ಅದನ್ನು ಒಪ್ಪಿಕೊಂಡರೆ ಮಾತ್ರ ನಿಮ್ಮ ಪ್ರಾಮಾಣಿಕತೆಯ ಬಗ್ಗೆ ನಮಗೆ ಅರ್ಥವಾಗುತ್ತದೆ ಎಂಬ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊಡೇಸ್‌ನವರು ಕೊಳ್ಳೇಗಾಲ ಶುಗರ್ ಫ್ಯಾಕ್ಟರಿಯನ್ನು ತೆಗೆದುಕೊಂಡಿದ್ದಾರೆ. ನನಗೆ ಈ ವಿಚಾರದಲ್ಲಿ ಆಶ್ಚರ್ಯವಾಗುತ್ತಿದೆ. ಮಾನ್ಯ ಜೆ. ಹೆಚ್. ಪಟೇಲ್‌ರವರೂ ಕೂಡ ಇಲ್ಲಿಯೇ ಇದ್ದಾರೆ. ಆ ಕಾರ್ಖಾನೆಯನ್ನು ಮಾರುವಂತಹ ಸಂದರ್ಭದಲ್ಲಿ ಅನೇಕ ಜನರು ಅರ್ಜಿ ಹಾಕಿದ್ದರು. ಯಾರು ಕಡಿಮೆ ಕೊಟೇಶನ್ ಹಾಕಿದ್ದರು ಅವರನ್ನು ಕರೆದು ಬೇರೆ ರೀತಿಯಲ್ಲಿ ಅವರಿಗೆ ಕೊಡುವ ಪ್ರಯತ್ನವನ್ನು ಮಾಡಿದರೇ ವಿನಹ ಯಾರ್ಯಾರು ಅರ್ಜಿಗಳನ್ನು ಹಾಕಿದ್ದರು ಅವರೆಲ್ಲರನ್ನೂ ಕರೆದು ಮಾತುಕತೆ ನಡೆಸಿ ಸೂಕ್ತವಾದವರಿಗೆ ಕೊಡುವ ಪ್ರಯತ್ನವನ್ನು ಇವರು ಮಾಡಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಅರ್ಜಿ ಸಲ್ಲಿಸಿದ್ದ ಎಲ್ಲರನ್ನೂ ಕರೆದು ಹೈಯೆಸ್ಟ್ ಟೆಂಡರ್ ಯಾರದ್ದು ಇತ್ತೋ ಅವರಿಗೆ ಕೊಟ್ಟಿದ್ದಾರೆ. ಸದಸ್ಯರು ಈ ರೀತಿಯಲ್ಲಿ ಆರೋಪ ಮಾಡುವುದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಹೇಳಿದ್ದು ಸತ್ಯಕ್ಕೆ ದೂರವಾಗಿದ್ದರೆ ನೀವು ರಾಜೀನಾಮೆ ಕೊಡುತ್ತೀರಾ ? ನಾನು ಈಗಲೇ ಫೈಲನ್ನು ತರಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಖಂಡಿತ. ತಾವು ಫೈಲನ್ನು ತರಿಸುವುದಕ್ಕೆ ಮುಂಚೆ ನನ್ನ ಮಾತನ್ನು ಅರ್ಥಮಾಡಿಕೊಂಡು ಹೋಗಿ. ನಾನು ಖಂಡಿತವಾಗಿ ನನ್ನ ರಾಜಿನಾಮೆ ಕೊಟ್ಟು ಹೋಗುತ್ತೇನೆ. ನನ್ನ ಪಾಯಿಂಟ್ ಇಷ್ಟೆ. ಅವರು ಯಾವತ್ತು ಟೆಂಡರ್ ಹಾಕಿದ್ದರು ಖೋಡೇಸ್‌ನವರು ಮತ್ತು ಬೇರೆ ಎಲ್ಲ. ಅಲ್ಲಿ ನೀವು ಮಾತುಕತೆ ಆಡಿರುವಂಥಾದ್ದು ಜಾಸ್ತಿ ಮಾಡಿರುವಂಥದ್ದು ಖೋಡೇಸ್‌ನವರ ಜೊತೆಗೆ ಮಾತ್ರ. ಯಾರು ಲೊಯೆಸ್ಟ್ ಹೈಯೆಸ್ಟ್ ಟೆಂಡರ್ ಅವರನ್ನು ಕರೆಯುವ ಪ್ರಯತ್ನ ಮಾಡಲಿಲ್ಲ. ಇದು ನನಗೆ ಬಂದಿರುವ ಮಾಹಿತಿ.

ಶ್ರೀ ಆರ್, ಎಲ್. ಜಾಲಪ್ಪ.—ನಾನು ಇನ್ನೂ ಐದು ನಿಮಿಷ ನಿಮಗೆ ಟೈಮ್ ಕೊಡುತ್ತೇನೆ, ಯೋಚನೆ ಮಾಡಿ. You accept this challenge. ಸುಮ್ಮನೆ ಸಿಕ್ಕಿಹಾಕಿಕೊಳ್ಳುವುದಕ್ಕೆ ಹೋಗಬೇಡಿ. ಯೋಚನೆ ಮಾಡಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಯೋಚನೆ ಮಾಡಿಯೇ ಹೇಳಿದ್ದು. ನೀವೂ ಯೋಚನೆ ಮಾಡಿ. ಏಕೆಂದರೆ ನಿಮ್ಮದು ಕಾಸ್ಟಲಿ ಇದೆ.

SRI R. L. JALAPPA.—It is far from truth.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೇಳುವುದು ಸತ್ಯಕ್ಕೆ ದೂರವಾಗಿದ್ದರೆ ಅದನ್ನು ನೋಡೋಣ, ಆದ್ದರಿಂದ ....

ಶ್ರೀ ಎಂ. ಎಸ್. ಕೃಷ್ಣನ್.—ಇಬ್ಬರೂ ರಾಜೀನಾಮೆ ಕೊಟ್ಟುಬಿಡಿ. ನಾವೆಲ್ಲ ಯೋಚನೆ ಮಾಡಿ ಹೇಳುತ್ತೇವೆ ನೀವು ಸರಿಯೋ ಅವರು ಸರಿಯೋ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸದನದ ಮುಂದೆ ಫೈಲನ್ನು ಇಡುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ನೋಡಿ ಯಾರು ರಾಜೀನಾಮೆ ಕೊಡಬೇಕೆಂದು ನಾವು ಹೇಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಅವರೇ ನೋಡಲಿ. ನೀವು ನೋಡಬೇಕಾಗಿಲ್ಲ. ಅವರೇ ತೀರ್ಮಾನ ತೆಗೆದುಕೊಳ್ಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳಬೇಕಾಗುತ್ತದೆ. ಏಕೆಂದರೆ ಸದನದಲ್ಲಿ ವಿಷಯವನ್ನು ರೈಸ್ ಮಾಡಿದ್ದಾರೆ.........

ಶ್ರೀ ಆರ್. ವೆಂಕಟರಾಮಯ್ಯ.—ಇದು ದೊಡ್ಡ ವ್ಯವಹಾರ. ಪೇಪರ್‌ನಲ್ಲಿ ಎಲ್ಲಾ ಸರಿ ಇರುತ್ತದೆ. ಆದರೆ ಅಂಡರ್‌ಹ್ಯಾಂಡ್ ಡೀಲಿಂಗ್ ಏನಾಗಿದೆ ಅದೇ ಈಗ ಅನುಮಾನ ಬರುವುದು.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ ನಾನೂ ಕೂಡ ಏನು ಬೇಕಾದರೂ ಹೇಳಿ ಬಿಡಬಹುದು. ಆದರೆ ಜವಾಬ್ದಾರಿ ಇಟ್ಟುಕೊಂಡು ಸದನದಲ್ಲಿ ಮಾತನಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಹಾಗೆ ಎರಡು ಎರಡು ಸಾರಿ ಟೆಂಡರ್ ಕರೆದಿದ್ದೇವೆ. ಗೌರಿಬಿದನೂರಿನದ್ದು ಮೂರು ಸಾರಿ ಟೆಂಡರ್ ಕರೆದಿದ್ದೇವೆ. ಈ ವಿಷಯ ಮೇಲ್ಮನೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಒಬ್ಬರು ಮಾನ್ಯ ಸದಸ್ಯರು ಟೆಂಡರ್ ಕರೆದಿರವುದರಲ್ಲಿ ಗೋಲ್‌ಮಾಲ್ ನಡೆದಿದೆ ಎಂದು ಹೇಳಿದರು. ಆಗ ನಾನು ಸಹಕಾರ ಮಂತ್ರಿಯಾಗಿದ್ದೆ. ನಾನು ತಕ್ಷಣ ಕರೆದಿರುವ ಟೆಂಡರನ್ನು ಕ್ಯಾನ್ಸಲ್ ಮಾಡುತ್ತೇನೆ ಮತ್ತು ಪುನಃ ಟೆಂಡರ್ ಕರೆಯುತ್ತೇವೆ ಎಂದು ಹೇಳಿದೆ. ತಾವು ದಯವಿಟ್ಟು ಯಾರ ಕೈಲಾದರೂ ಟೆಂಡರ್ ಹಾಕಿಸಿ ಎಂದು ಕೂಡ ಅವರಿಗೆ ಹೇಳಿದೆ. ತಿರುಗಿ ಟೆಂಡರ್ ಕರೆದಾಗ ಆರ್ಡರ್ ಮತ್ತು ಟೆಂಡರ್‌ಕಾಪಿ ಮತ್ತು ನೋಟಿಫಿಕೇಶನ್ ಕಾಪಿಯನ್ನು ಕೂಡ ಅವರಿಗೆ ಕಳಿಸಿದ್ದೇನೆ. ಬಹುಶಃ ಅದು ಫೈನಲೈಸ್ ಆಯಿತೋ ಇಲ್ಲವೋ ಗೊತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಕಸ್ಮಾತ್ ನೀವು ಹೇಳಿದಂತೆ ಅದು ವ್ಯವಸ್ಥಿತವಾಗಿ ನಡೆದಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದೇಒಂದು ಮುಖ್ಯವಾದ ಅಂಶ ಏನೆಂದರೆ, ಇಷ್ಟೊಂದು ಎಲ್ಲಾ ಕೋಆಪರೇಟಿವ್ ಶುಗರ್ ಫ್ಯಾಕ್ಟರಿಗಳನ್ನೆಲ್ಲಾ ಕೊಂಡುಕೊಳ್ಳುವುದಕ್ಕೆ ಖೋಡೆಯಂಥವರು ಮುಂದೆ ಬರುತ್ತಿದ್ದರೆ ಮುಂದಿನ ಕಾರ್ಯಕ್ರಮ ಏನೂ ಅಂತ ಈಗಾಗಲೇ ಅವರಿಗೆ ಗೊತ್ತಾಗಿದೆಯೆ ? ಇದು ನಮಗೆ ಅನುಮಾನಕ್ಕೆ ಕಾರಣವಾಗಿದೆ. ಸರ್ಕಾರ ಪ್ರೈವೆಟ್ ಡಿಸ್ಟಿಲರೀಸ್ ಇದ್ದವರಿಗೇ ಕೊಡಬೇಕೆಂದು ಪ್ಲಾನ್ ಇದ್ದರೆ ಹೊರಗಡೆಯವರ ಕೈಗೆ ಹೋಗದಂತೆ ನಮ್ಮ ಸರ್ಕಾರಿ ಕೋಪರೇಟೀವ್ ಸೆಕ್ಟಾರ್‌ನಲ್ಲಿಯೇ ಉಳಿಸಿಕೊಂಡು ಅಲ್ಲಿ ಡಿಸ್ಟಿಲರಿಗಳನ್ನು ಪ್ರಾರಂಭ ಮಾಡಿಸಿ ಸರ್ಕಾರದ ಅಮೆಂಡ್‌ಮೆಂಟ್‌ಗಳು ಬಂದಾಗ ಆಗ ಅದರ ಸಂಪೂರ್ಣ ಲಾಭವನ್ನು ನಾವು ಮಾಡಿಕೊಳ್ಳಬಹುದಿತ್ತು. ಈಗ

ಪತ್ರಿಕೆಗಳಲ್ಲಿ ಬರುತ್ತಿದೆ. ಸಾಕಷ್ಟು ಇದರ ಬಗ್ಗೆ ಚರ್ಚೆ ಆಗುತ್ತಿದೆ. ಹಿಂದೆ ಎಂದೂ ಆಗದಿರುವಂಥ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸೆಕೆಂಡ್ಸ್‌ನಲ್ಲಿ ಕೋಟಿಗಟ್ಟಲೆ ಪ್ರತಿನಿತ್ಯ ತಯಾರಾಗುತ್ತಿದೆ. ಇದನ್ನು ನಾನು ಹೇಳುತ್ತಿಲ್ಲ. ಜನತಾಪಕ್ಷದ ಶಾಸಕರೇ ಬಹಿರಂಗವಾಗಿ ಹೇಳಿದ್ದಾರೆ. ಮಹಾತ್ಮಗಾಂಧಿ ವಿಗ್ರಹಕ್ಕೆ ಹೂಹಾರ ಹಾಕಿ ವರದೇಗೌಡರು ಮತ್ತು ಬೈರೇಗೌಡರು ನೇರವಾಗಿ ಹೋಗಿ ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆ. ಬಹುಶಃ ಆ ಮನವಿಯಲ್ಲಿ ಏನೇನು ಅಂಶಗಳು ಇದ್ದವು ಎಂದು ಬಹಿರಂಗ ವಾದರೆ ಅನೇಕ ವಿಷಯಗಳು ಹೊರಬಹುದು. ಇಂತಹ ಒಂದು ಸಂದರ್ಭದಲ್ಲಿ ನಿಮ್ಮ ಪಕ್ಷದ ಶಾಸಕರೇ ಅನ್ಯಾಯವಾಗಿದೆ ಎಂದು ಆರೋಪ ಮಾಡತಕ್ಕಂಥ ಕಾಲದಲ್ಲಿ ಈ ಅಮೆಂಡಮೆಂಟ್ ತಂದು ಪ್ರೈವೇಟ್‌ನವರಿಗೆ ಕೊಟ್ಟು, ಮುಂದೆ ಕೆಟ್ಟ ಹೆಸರು ತಂದುಕೊಳ್ಳುವ ಪ್ರಯತ್ನ ಮಾಡದೆ ಮುಂದೆ ಬರುವ ದಿವಸಗಳಲ್ಲಿ ಕೇವಲ ಸರ್ಕಾರದ ಸ್ವಾಮ್ಯಕ್ಕೆ ಸೇರಿದ ಕೋಆಪರೇಟೀವ್ ಶುಗರ್ ಫ್ಯಾಕ್ಟರಿಗಳು ಮತ್ತು ಡಿಸ್ಟಲರಿಗಳು ಸರ್ಕಾರದ್ದು ಏನಿದೆ, ಅವುಗಳಿಗೆ ಮಾತ್ರ ಕೊಡತಕ್ಕಂಥ ಪ್ರಯತ್ನ ಮಾಡಬೇಕು. ಪ್ರಾರಂಭದಲ್ಲಿ ನಾನು ಹೇಳಿದೆ, ಏನೆಂದರೆ ಶ್ರೀ ಗುಂಡೂರಾಯರ, ಕಾಲದಲ್ಲಿ ಗೌರಿಬಿದನೂರು, ಹಿರಿಯೂರು ಕೋಆಪರೇಟೀವ್ ಶುಗರ್ ಫ್ಯಾಕ್ಟರಿಗಳಿಗೆ ಸೇರಿದಂಥ ಡಿಸ್ಟಲರಿಗಳನ್ನು ಲೀಸ್‌ಗೆ ಕೊಟ್ಟಿದ್ದರು. ಅವರಿಗೆ ಬದುಕಿರುವವರೆಗೆ ಅಂತ ಲೀಸ್ ಕೊಟ್ಟಿದ್ದರೇನು ? ಅದನ್ನು ವಾಪಸು ತೆಗೆದುಕೊಂಡು ಕೋಪರೇಟೀವ್‌ನಲ್ಲೇ ಉಳಿಸಿಕೊಂಡು ಅಲ್ಲಿ ಏನಾದರೂ ಮಾಡುವುದಕ್ಕೆ ಸಾಧ್ಯ ಇದೆಯೋ ಎಂದು ತಮ್ಮ ಕಾಲದಲ್ಲೇ ಇದನ್ನು ಪರಿಶೀಲನೆ ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷಣಿಯವರೇ, ಇದರ ಬಗ್ಗೆ ನನಗೆ ಅಲ್ಪಸ್ವಲ್ಪ ಮಾಹಿತಿ ಗೊತ್ತಿದೆ. ಇದನ್ನು ೧೦ ವರ್ಷಗಳ ಲೀಸ್‌ಗೆ ಹಿಂದಿನ ಸರ್ಕಾರದವರು ಕೊಟ್ಟಿದ್ದರು. ಇದಾದ ಮೇಲೆ ಪುನಃ ಗುಂಡೂರಾಯರ ಕಾಲದಲ್ಲಿ ಇದನ್ನು ರಿವೋಕ್ ಮಾಡಬೇಕೆಂದು ಹೇಳಿ, ಈ ಫ್ಯಾಕ್ಟರಿಯನ್ನು ಸರ್ಕಾರ ಟೇಕ್‌ಓವರ್ ಮಾಡಿದರು. ಸಿಕ್ ಇಂಡಸ್ಟ್ರಿ ಎಂದು ಹೇಳಿ ಇದರ ಜೊತೆಯಲ್ಲಿ ಡಿಸ್ಟಲರಿ ಕೂಡ ಟೇಕ್ ಓವರ್ ಮಾಡಿದರು. ಇದಾದ ಮೇಲೆ ಹೈಕೋರ್ಟ್‌ಗೆ ಹೋದರು. ಹೈಕೋರ್ಟ್‌ನಲ್ಲಿ ಲೀಸ್ ಹಣ ಕಡಿಮೆ ಇದೆಯೆಂದು ಹೇಳಿ ಇದನ್ನು ಎನ್‌ಹ್ಯಾನ್ಸ್ ಮಾಡಬೇಕೆಂದು ಎನ್‌ಹ್ಯಾನ್ಸ್ ಮಾಡಿದರು. ಎನ್‌ಹ್ಯಾನ್ಸ್‌ಮೆಂಟ್ ಮಾಡಿದ ನಂತರ ಸುಪ್ರೀಂ ಕೋರ್ಟಿಗೆ ಹೋದರು. ಸುಪ್ರೀಂ ಕೋರ್ಟ್‌ನಲ್ಲಿ ಎನ್‌ಹ್ಯಾನ್ಸ್ ಮಾಡಿದ್ದನ್ನು ಸ್ಟ್ರೈಕ್‌ಡೌನ್ ಮಾಡಿ ಆಮೇಲೆ ಪುನಃ ನೀವೇ ಡಿಸೈಡ್ ಮಾಡಿ ಎಂದು ವಾಪಸ್ ಕಳುಹಿಸಿದರು. ಹೈಕೋರ್ಟ್‌ನಲ್ಲಿ ಪುನಃ ಲೀಸ್‌ಗೆ ಪರ್ಮಿಷನ್ ಕೊಟ್ಟಿದೆ. ಮೊದಲೇ ಏನು ಲೀಸ್ ಹಣ ಇದೆ ಅದನ್ನೇ ಮುಂದುವರಿಸಿಕೊಂಡು ಹೋಗಿ ಎಂದು ಹೇಳಿ ತೀರ್ಮಾನ ಕೊಟ್ಟರು, ಇದಾದ ಮೇಲೆ ಒಂದು ವರ್ಷ ಸತತ ಪ್ರಯತ್ನ ಪಟ್ಟೆವು. ಲಾ ಡಿಪಾರ್ಟ್‌ಮೆಂಟ್‌ನವರನ್ನು ಕರೆಸಿದೆವು ಏನೂ ಆಗುವುದಿಲ್ಲ. ಗವರ್ನಮೆಂಟ್ ಟೇಕ್ ಓವರ್ ಮಾಡುವುದಾಗಲಿ, ಲಿಕ್ವಿಡೇಟ್ ಮಾಡುವುದೇ ಆಗಲಿ, "his lease period will continue" ಎಂದು ಏನೂ ಮಾಡುವುದಕ್ಕಾಗಲಿಲ್ಲ. ಇದು ಒಂದೂವರೆ ವರ್ಷ ಅಥವಾ ಎರಡು ವರ್ಷದಿಂದ ಇರಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಇದರ ಬಗ್ಗೆ ನಾನೂ ನೋಡಿದ್ದೇನೆ. ತಾವು ಅಪೀಲು ಹಾಕದೇ ಇರುವುದೇ ಅನ್ಯಾಯ. ಅಪೀಲುಹಾಕಿದ್ದರೆ ೧೦ ಲಕ್ಷ ಕೊಡುವುದಕ್ಕೆ ಬಂದಿದ್ದರು. ನೀವು ಅಪೀಲು ಹಾಕಿಸಿದ್ದರೆ, ನಿಜವಾಗಿಯೂ ಅವರು ಕೊಡುತ್ತಿದ್ದರು.

ಶ್ರೀ ಆರ್. ಎಲ್. ಜಾಲಪ್ಪ.—ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿ ವಾಪಸ್ ಬಂದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಲೀಸ್ ಪೀರಿಯಡ್ ಮುಗಿದಮೇಲೆ ಸರ್ಕಾರ ತೆಗೆದು ಕೊಳ್ಳುವಂಥ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗ ನೀವು ಒಬ್ಬರೇ ಇದ್ದಿರಿ, ಕೇಳ ಬಹುದಿತ್ತು. ಈಗ ಕೋ-ಆಪರೇಟೀವ್‌ನಲ್ಲಿ ಮೂವರು ಇದ್ದಾರೆ, ಯಾರನ್ನು ಕೇಳುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ಇದರ ಬಗ್ಗೆ ಯಾರಿಗೂ ಕೋಪ ಬರುವುದಿಲ್ಲ. ಆದರೆ ಈಗಲೂ ಕೂಡ ಮಾನ್ಯ ವೆಂಕಟರಾಮಯ್ಯನವರು ತಂದಿರುವಂಥ ಅಮೆಂಡ್‌ಮೆಂಟ್ ಏನಿದೆ ಅದರ ಪ್ರಕಾರ ಕೇವಲ ಸರ್ಕಾರಿ ಡಿಸ್ಟಲರಿಗಳಿಗೆ, ಸರ್ಕಾರಿ ಕೋ-ಆಪರೇಟಿವ್ ಸೊಸೈಟಿಗಳಿಗೆ ಮಾತ್ರ ಇದನ್ನು ಉಪಯೋಗ ಮಾಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಇಲ್ಲದೇ ಹೋದರೆ ಏನಾಗುವುದು ಎಂದರೆ, ನಮಗೆ ಭಯ ಇರುವುದು, ಮಾನ್ಯ ಶ್ರೀನಿವಾಸ್‌ರವರು ಹೇಳಿದಂತೆ, ಸೆಕ್ಷನ್ ೧೬ (ಎ) ಮತ್ತು (೨) ಏನಿದೆ ಎಂದರೆ,

'The Excise Commissioner may, subject to sub section (1) and to such rules as may be prescribed and with the Prior approval of the State Government, grant licence for any specified area or areas to any person,''

ನಾನು ಕೂಡ ಮಂಡ್ಯದ ಸಕ್ಕರೆ ಕಾರ್ಖಾನೆ ನೋಡಿದ್ದೇನೆ. ಅಲ್ಲಿ ಡಿಸ್ಟಿಲರಿಗೆ ಬೇಕಾದ ಅನುಕೂಲ ಇದ್ದರೂ ಸಹ ಅದರ ಸಂಪೂರ್ಣ ಉಪಯೋಗ ಆಗುತ್ತಾ ಇಲ್ಲ.

(ಮಾನ್ಯ ಅಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇದರ ಪ್ರಕಾರ ಏನಾಗುತ್ತದೆ. ಸರ್ಕಾರ ಮನಸ್ಸು ಮಾಡಿದಂಥ ಡಿಸ್ಟಿಲರಿಗೆ, ಯಾವ ಏರಿಯಾಕ್ಕೆ ಎಷ್ಟು ಬೇಕಾದರೂ ಕೊಡುವಂಥ ಅಧಿಕಾರ ತೆಗೆದುಕೊಳ್ಳುತ್ತದೆ. ಆಗಲೂ ಸಹ ಕೋ-ಅಪರೇಟಿವ್ ಸೊಸೈಟಿಗಳಿಗೆ ಸಂಬಂಧಪಟ್ಟ ಡಿಸ್ಟಿಲರಿಗಳಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟ ಡಿಸ್ಟಿಲರಿಗಳಿಗೆ ಸಿಗದೆ ಈ ಏರಿಯ ಬಾರದೇ ಪೂರ್ತಿ ಹೊರಗಡೆಯವರಿಗೆ. ಪ್ರೈವೇಟ್‌ನವರಿಗೆ ಅವಕಾಶ ಮಾಡಿಕೊಡುತ್ತಾರೆ. ಈಗ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ಅವ್ಯವಹಾರ ನಡೆಯುತ್ತಿದೆ. ನಾಳೆ ಇದು ಎರಡು ಕೋಟಿ ರೂಪಾಯಿ ಆಗಬಹುದು. ಅದಕ್ಕೋಸ್ಕರ ಈ ವ್ಯವಸ್ಥೆ ಕೇವಲ ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ಡಿಸ್ಟಿಲರಿಗಳಿಗೆ ಮಾತ್ರ ಅನ್ವಯವಾಗಬೇಕೆನ್ನುವ ತಿದ್ದುಪಡಿ ತಂದರೆ ಅನುಕೂಲವಾಗುತ್ತದೆ, ಇದರ ಉಪಯೋಗವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಸೆಕೆಂಡ್ಸ್ ಎಂದರೆ ಯಾವುದು ?

ಒಬ್ಬ ಸದಸ್ಯರು.—ಸೆಕೆಂಡ್ಸ್ ಎಂದರೆ ಡ್ಯೂಟಿ ಇಲ್ಲದೆ ವ್ಯವಹಾರ ಮಾಡುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ತಯಾರು ಮಾಡಿದಂಥ ಬಾಟಲುಗಳಲ್ಲಿ ಹೆಂಡ, ಸಾರಾಯಿ ಮತ್ತು ಕುಡಿಯುವಂಥ ವಸ್ತುಗಳು ಏನೇನಿವೆ ಅವುಗಳನ್ನು ಮಾರ್ಕೆಟ್ಟಿಗೆ ತರದೇ, ಒಳಗಡೆಯೇ ಅವ್ಯವಹಾರ ಮಾಡಿ, ದುಡ್ಡನ್ನು ತಿನ್ನುವುದು ಎಂದು ನಾನು ತಿಳಿದುಕೊಂಡಿದ್ದೇನೆ. ತೆರಿಗೆಯನ್ನು ಹೊರುವಂಥ ವ್ಯವಸ್ಥೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಈ ಸೆಕೆಂಡ್ಸ್ ಲಿಕ್ಕರನಲ್ಲೇ ಅಲ್ಲ, ಸಿಗರೇಟ್‌ನಲ್ಲಿ ಇದೆ, ಸೀರೆಯಲ್ಲೂ ಇದೆ, ಸೆಕೆಂಡ್ಸ್ ಬಟ್ಟೆಯಲ್ಲೂ ಇದೆ. Seconds means rejected goods.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಪಟೇಲರು ಹೇಳಿದಂತೆ, ಸೆಕೆಂಡ್ಸ್ ಎಂದರೆ ಯಾವುದೂ ಸರಿಯಾಗಿ ಇಲ್ಲದೆ, ಉಪಯೋಗಕ್ಕೆ ಬಾರದೆ, ಕಡಿಮೆ ಸ್ಟಾಂಡರ್ಡ್ ಇರುವುದಕ್ಕೆ ಸೆಕೆಂಡ್ಸ್ ಎಂದು ಹೇಳುತ್ತೇವೆ. ನಿಜ. Seconds means rejected goods ಆದರೆ ಇಲ್ಲಿ ಸೆಕೆಂಡ್ಸ್ ವ್ಯವಸ್ಥೆ ಏನು ಎಂದರೆ ಸೀಲ್ ಹಾಕದೆ ತೆರಿಗೆತಪ್ಪಿಸಿ, ಮಾರಾಟ ಮಾಡುವ ಬಾಟಲುಗಳಿಗೆ ಸೆಕೆಂಡ್ಸ್ ಎಂದು ಹೇಳುತ್ತೇವೆ. ಬಹಿರಂಗವಾಗಿ ಟ್ಯಾಕ್ಸ್ ಕೊಟ್ಟು ವ್ಯವಹಾರ ಮಾಡತಕ್ಕದ್ದು ಒಂದು. ಇದು ಮಾದಲನೆಯದು. ಟ್ಯಾಕ್ಸ್ ಕೊಡದೇ, ಅದಕ್ಕೆ ಸರಕಾರದ ಸೀಲ್ ಹಾಕಿಸದೇ, ತೆರಿಗೆಯನ್ನು ಕೊಡದೇ, ಹಿಂದಿನ ಬಾಗಿಲ ಮೂಲಕ ಮಾಡತಕ್ಕದ್ದು ಸೆಕೆಂಡ್ಸ್ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ನಿಲ್ಲಿಸಬೇಕು ಎಂದು ಹೇಳುತ್ತಾ, ಎರಡು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ವೀರಪ್ಪ ಮೊಯಿಲಿಯವರು.

೩-೩೦ ಪಿ. ಎಂ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಸಭಾಧ್ಯಕ್ಷರೇ, ಈಗ ನಾನು ಈ ಬಿಲ್ ಬಗ್ಗೆ ಏನು ನೆನೆಸಿದೆ ಎಂದರೆ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಈ ವಿಚಾರದಲ್ಲಿ ನೀಡಿರುವ ಕೆಲವು ನಿರ್ಣಯಗಳೆಲ್ಲಾ ಬಂದ ಮೇಲೆ, ಸರಕಾರ ಈ ನಿರ್ಣಯಗಳ ಪಾಠವನ್ನು ತಿಳಿದು, ಈ ವ್ಯವಹಾರಗಳಲ್ಲಿ ಸರಿಯಾದಂಥ ಹಾಗೂ ಒಂದು ಪ್ರಗತಿದಾಯಕವಾದಂಥ ಮಸೂದೆಯನ್ನು ತರುತ್ತದೆ. ತನ್ಮೂಲಕವಾಗಿ, ಕಾನೂನುಬದ್ಧವಾಗಿ ಈ ವ್ಯವಸ್ಥೆಯನ್ನು ಮಾಡಿ, ಆದಾಯವನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೆಚ್ಚಿಸತಕ್ಕಂಥ ಮತ್ತು ಸಂಪೂರ್ಣವಾಗಿ ನಿಯಂತ್ರಣವನ್ನು ಈ ವ್ಯವಹಾರದಲ್ಲಿ ತರತಕ್ಕಂಥ ಒಂದು ಮಸೂದೆ ಬರುತ್ತದೆ ಎಂದು ಹೇಳಿ ನಾವೆಲ್ಲಾ ನಿರೀಕ್ಷೆ ಮಾಡಿಕೊಂಡಿದ್ದೆವು ಆದರೆ ಆ ನಿರೀಕ್ಷೆ ಹುಸಿಯಾಯಿತು. ನಮಗೆಲ್ಲಾ ನಿರಾಶೆಯಾಗಿದೆ. ನಾನು ಈ ಬಿಲ್ಲನ್ನು ನೋಡಲಿಕ್ಕೆ ಹೋಗಲಿಲ್ಲ. ಮಾನ್ಯ ಬಂಗಾರಪ್ಪನವರು ಮಾತನಾಡುತ್ತಲೇ ಇದ್ದರು. ಅವರು ಮಾತನಾಡುತ್ತಿರುವಾಗ ನನಗೆ ಇದರ ಗಂಭೀರತೆಯು ಪರಿಚಯ ಆಯಿತು. ಬಾಟಲ್ ಒಳಗೆ ಏನಿದೆಯೋ ಹೊರಗೆ ಏನಿದೆಯೋ ನನಗೆ ಅಷ್ಟು ಪರಿಚಯ ಇಲ್ಲ. ಆದರೆ ಬಾಟಲ್ ಕ್ಯಾಪ್ ಒಡೆದ ಮೇಲೆ ಸ್ವಲ್ಪ ವಾಸನೆ ಬರುವುದಕ್ಕೆ ಪ್ರಾರಂಭವಾಯಿತು. ಇದೇನೋ ಇದೆ ಎಂದು ಅನಿಸಿತು.

ಒಬ್ಬ ಮಾನ್ಯ ಸದಸ್ಯರು.—ಹೆಗಡೆಯವರಿಗೆ ಪರಿಚಯ ಇದೆ.

ಶ್ರೀ ವೇದಾಂತ ಹೆಮ್ಮಿಗೆ.—ಮೊಯಿಲಿಯವರೇ, ಬಂಗಾರಪ್ಪನವರು ಬಾಟಲ್ ಒಡೆದರು, ನೀವು ವಾಸನೆ ನೋಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನಗಂತೂ ಈ ಒಂದು ಸರಕಾರದ ನೀತಿಯಲ್ಲಿ ಈ ವಿಚಾರದಲ್ಲಿ ಏನಿದೆ ಎಂಬುದೇ ಇವತ್ತಿನ ತನಕ ಒಂದು ನಿಗೂಢವಾದ ಪ್ರಶ್ನೆಯಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಗೂಢ ಏನೂ ಇಲ್ಲ, ಡ್ರ್ಯಾಪ್ ಮಾಡುವುದು ಅಷ್ಟೇ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವುದೇ ಒಂದು ವಿಚಾರ ಇರಲಿ, ಕೈಗಾರಿಕಾ ನೀತಿ ಇರಲಿ, ಅಬಕಾರಿ ಸಂಬಂಧದ ನೀತಿ ಇರಲಿ, ವಿದ್ಯೆಯ ವಿಚಾರ ಇರಲಿ, ಅಧಿಕಾರಕ್ಕೆ ಬಂದ ಪಕ್ಷದ ಸರಕಾರ ಒಂದು ನಿರ್ದಿಷ್ಟವಾದ ನೀತಿಯನ್ನು ಹೊಂದಿರುತ್ತದೆ. ಒಂದು ನೀತಿ ಇರುತ್ತದೆ, ಆ ನೀತಿಯ ಹಿಂದೆ ಒಂದು ಸಿದ್ಧಾಂತ ಇರುತ್ತದೆ. ಏತಕ್ಕೆಂದರೆ ಇದು ಯಾರದ್ದೇ ಒಂದು ವೈಯಕ್ತಿಕ ವ್ಯವಹಾರ ಅಲ್ಲ, ಒಂದು ಮನೆಯ ವ್ಯವಹಾರ ಅಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಒಂದು ಗಂಭೀರವಾದ ಪ್ರಶ್ನೆ, ಹೀಗಿರತಕ್ಕಂಥ ಸಂದರ್ಭದಲ್ಲಿ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ಗಳಲ್ಲಿ ಈ ಬಾಟ್ಲಿಂಗ್ ಬಗ್ಗೆ ಒಂದು ನಿರ್ಣಯ ಬಂದ ಮೇಲೆ ಈ ನಿರ್ಣಯ ಬರುವುದಕ್ಕೆ ಮೊದಲು ಯಾವ ನೀತಿ ಇತ್ತು, ಯಾವ ರೂಲ್ ಇತ್ತು ಎಂದರೆ, ಬಾಟ್ಲಿಂಗ್ ಪ್ಲಾಂಟ್‌ಗೆ, ಡಿಸ್ಟಿಲರ್ಸ್‌ಗೆ ಲೈಸೆನ್ಸ್ ಕೊಡಬಾರದು ಎಂದು ಇತ್ತು. ಇದು ಒಂದು ನಿರ್ದಿಷ್ಟವಾದ ನಿರ್ಣಯ. ಡಿಸ್ಟಿಲರ್‌ಗಳಿಗೆ, ಬಾಟ್ಲಿಂಗ್ ಪ್ಲಾಂಟ್‌ಗಳನ್ನು ಕೊಡಬಾರದು ಎಂಬುದು ಒಂದು ನೀತಿ. ಈ ನೀತಿ ಸರಿಯೋ ತಪ್ಪೋ ಅದು ಬೇರೆ ವಿಚಾರ. ಆ ಪ್ರಶ್ನೆ ಪ್ರತ್ಯೇಕ. ಅದನ್ನು ಏತಕ್ಕೆ ಮಾಡಿದರು ಎಂದು ಹೇಳಿದರೆ ಡಿಸ್ಟಿಲರ್ಸ್‌ಗೆ ಕೊಟ್ಟರೆ, ಅದರಿಂದ ಮೊಲಾಸಿಸ್ ಬಗ್ಗೆ ಕಂಟ್ರೋಲ್ ತಪ್ಪುತ್ತದೆ, ಈಗಲೇ ಮೊಲಾಸಿಸ್ ಬಗ್ಗೆ ಸರಕಾರಕ್ಕೆ ಕಂಟ್ರೋಲ್ ಇಲ್ಲ, ಇದರಿಂದ ತೊಂದರೆಯಾಗಬಹುದು ಎಂದು ಕೊಡಬಾರದು ಎಂದು ಮಾಡಿದ್ದರು. ಏತಕ್ಕೆಂದರೆ ಶುಗರ್ ಫ್ಯಾಕ್ಟರೀಸ್‌ಗೆ ಮತ್ತು ಡಿಸ್ಟಿಲರೀಸ್‌ಗೆ ಒಂದಕ್ಕೊಂದಕ್ಕೆ ಸಂಬಂಧ ಇರುತ್ತದೆ. ಇವರಿಗೆ ಕೊಟ್ಟರೆ ಇದಕ್ಕೆ ನಿಯಂತ್ರಣ ಹಾಕುವುದಕ್ಕೆ ಆಗುವುದಿಲ್ಲ. ಮೊಲಾಸಿಸ್ ಬಗ್ಗೆ ಈಗಲೇ ೮೦ ಪರ್ಸೆಂಟ್ ಕಂಟ್ರೋಲ್ ಇಲ್ಲ ಸರಕಾರಕ್ಕೆ, ಈಗಲೇ ಇಲ್ಲ. ಸೆಂಟ್ರಲ್ ಬೋರ್ಡ್ ಕಂಟ್ರೋಲ್ ಅದು ಬೇರೆ ಆಯಿತು. ಸರಕಾರಕ್ಕೆ ಇದರ ಬಗ್ಗೆ ಬರತಕ್ಕ ಎಲ್ಲಾ ಆದಾಯ ತಪ್ಪಿ ಹೋಗುತ್ತದೆ, ಆದಾಯ ಎಲ್ಲಾ ಸೋರಿಹೋಗುತ್ತದೆ, ಇದರ ಬಗ್ಗೆ ನಿಯಂತ್ರಣ ಹಾಕುವುದಕ್ಕೆ. ರಾಜ್ಯ ಸರಕಾರ ಸಾಧ್ಯತೆ ಇದೆ. ಇವತ್ತಿಗೂ ಕೂಡಾ ನಿಯಂತ್ರಣವನ್ನು ಹಾಕಬಹುದು. ಈ ನಿಯಂತ್ರಣವನ್ನು ಹಾಕಿದರೆ ನನಗನ್ನಿಸುತ್ತದೆ, ಸುಮಾರು ೩೦೦–೩೫೦ ಕೋಟಿ ರೂಪಾಯಿ ಆದಾಯ ಸರಕಾರಕ್ಕೆ ಮೊಲಾಸಿಸ್‌ನಿಂದಲೇ ಬರುವುದಕ್ಕೆ ಸಾಧ್ಯ ಇದೆ. ಅದಕ್ಕಿಂತಲೂ ಹೆಚ್ಚು ಇರಬಹುದು. ನೀವು ಅಬಕಾರಿ ಒಂದು ಖಾತೆಯಲ್ಲಿ ಎಷ್ಟು ಆದಾಯ ತೆಗೆದುಕೊಳ್ಳುತ್ತೀರೋ ಅದಕ್ಕಿಂತ ದ್ವಿಗುಣ, ತ್ರಿಗುಣ ಪಾಲು ಆದಾಯ ಇದರಿಂದ ಪಡೆಯುವುದಕ್ಕೆ ಸಾಧ್ಯ ಇದೆ. ಇಂತಹದನ್ನು ರಾಜ್ಯ ಸರಕಾರ ನಿಯಂತ್ರಿಸದೇ, ಈ ಮಸೂದೆಯನ್ನು ತರುವಾಗ ಈ ಬಗ್ಗೆ ನಿಯಂತ್ರಣ ಮಾಡಬೇಕಾಗಿತ್ತು. ಶುಗರ್ ಫ್ಯಾಕ್ಟರಿಗಳನ್ನು ಡಿಸ್ಟಿಲರಿಗಳನ್ನು ನಿಯಂತ್ರಣ ಮಾಡಿಕೊಂಡು ಆದಾಯವನ್ನು ಹೆಚ್ಚಿಸಬಹುದಾಗಿತ್ತು, ಪ್ರತಿವರ್ಷ ಕುಡಿಯುವವರ ಮೇಲೆ ಅಥವಾ ಪ್ರತಿವರ್ಷ ಈ ಬಾಬತ್ತಿನ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿ, ಹೆಚ್ಚು ಅಕ್ರಮಗಳು ಆಗುವುದನ್ನು ತಪ್ಪಿಸಬಹುದಾಗಿತ್ತು. ಹೆಚ್ಚು ಆದಾಯವನ್ನು ಎಲ್ಲೂ ಯಾರಿಗೂ ನೋವಾಗದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯ ಇತ್ತು

ಇದರ ಬಗ್ಗೆ ಆಗುವ ಅಕ್ರಮಗಳನ್ನು ತಡೆದು ಹೆಚ್ಚು ಆದಾಯವನ್ನು ಯಾರಿಗೂ ನೋವಾಗದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯತೆ ಇದೆ. ಹೆಚ್ಚು ಅಕ್ರಮ ಸಂಪಾದನೆ ಅಥವಾ ಅಕ್ರಮ ಸಂಪತ್ತನ್ನು ಸಂಪಾದನೆ ಮಾಡತಕ್ಕಂಥ ಒಂದು ಕ್ಷೇತ್ರವನ್ನು ನಿಲ್ಲಿಸತಕ್ಕಂಥ ಪ್ರಯತ್ನವನ್ನು ಈ ಮಸೂದೆ ಮುಖೇನ ಮಾಡಲಿಕ್ಕೆ ತಮಗೆ ಅವಕಾಶ ಇತ್ತು. ಅದನ್ನು ತಾವು ಕಳೆದುಕೊಂಡಿದ್ದೀರಿ.

ಆದರೆ ನೀವು ನೀತಿಗೆ ತದ್ವಿರುದ್ಧವಾಗಿ ಇದನ್ನು ಮಾಡಿದ್ದೀರಿ. ಈ ಬಿಲ್ಲನ್ನು ಎಕ್ಸ್‌ಪ್ಲೇನ್ ಮಾಡುವ ಪ್ರಯತ್ನವನ್ನೂ ಕೂಡ ತಾವು ಮಾಡಿಲ್ಲ. ಅಧ್ಯಕ್ಷರೇ, ಇವರ ಉದ್ದೇಶ ನೋಡಿದರೆ ಇದು ಒಂದು ರೀತಿ objectionable. ತಾವು ಇದನ್ನು ಹೇಗೆ ಸ್ವೀಕಾರ ಮಾಡಿದಿರಿ ? ತಾವು ಇದನ್ನು ಸ್ವೀಕಾರ ಮಾಡಬಾರದಾಗಿತ್ತು. What is the philosophy ? ಸರ್ಕಾರ ತನ್ನ ಮೇಲೆಯೇ ತಾನು ಅಂಕುಶ ಹಾಕಿಕೊಳ್ಳುತಕ್ಕಂಥ ಪ್ರಯತ್ನ ಮಾಡಿದರೆ ಹೇಗೆ ? ಅದು ಅಂಕುಶವೇ ಅಲ್ಲ. ಅವರ ಮೇಲೆ ಅವರೇ ಅಂಕುಶವನ್ನು ಯಾರಾದರೂ ಹಾಕಿಕೊಳ್ಳುತ್ತಾರಾ ? It should be an outside thing. ಇವತ್ತು ಆದಾಯವನ್ನು ಹೆಚ್ಚು ಮಾಡುವುದಕ್ಕೆ ಡಿಸ್ಟಿಲರಿಗಳ ಮೇಲೆ ಮತ್ತು ಬಾಟ್ಲಿಂಗ್ ಪ್ಲಾಂಟ್‌ಗಳ ಮೇಲೆ ನಿಯಂತ್ರಣ ಮಾಡುವುದು ಇದರಲ್ಲಿ ಯಾವ ನೀತಿಯೂ ಇಲ್ಲ, ಉದ್ದೇಶವೂ ಇಲ್ಲ. ಇದು ಉದ್ದೇಶ ಸಾಧನೆಯ ಮಸೂದೆಯಲ್ಲದಿದ್ದರೆ ಇದನ್ನು ತಂದು ಏಕೆ ಸದನವನ್ನು ದುರುಪಯೋಗ ಮಾಡಿಕೊಳ್ಳಬೇಕು ? I will rather say this is a licence for the licensious behaviour of any Government. ನಮ್ಮ ಗವರ್ನ್‌ಮೆಂಟ್ ಇರಬಹುದು ಅಥವಾ ಮುಂದೆ ಬರತಕ್ಕ ಗವರ್ನ್‌ಮೆಂಟ್ ಇರಬಹುದು Misutilising the floor of this House, this legislature to grant some licences for licentious behaviour of the Government. ನಿಮ್ಮ ಸರ್ಕಾರ ಇರಬಹುದು ಅಥವಾ ಮುಂದೆ ಬರತಕ್ಕ ಸರ್ಕಾರ ಇರಬಹುದು. ಸನ್ಮಾನ್ಯ ಬಂಗಾರಪ್ಪ ನವರು ಹೇಳಿದ ಪ್ರಕಾರ ಇದು ಅತ್ಯಂತ ಉಗ್ರ ರೂಪದಂಥ ಮತ್ತು ಗಂಭೀರ ರೂಪದಂಥ ಅನೇಕ ಸ್ಕ್ಯಾಂಡಲ್‌ಗಳು ಸರ್ಕಾರದ ಮೇಲೆ ಬರುವುದಕ್ಕೆ ಆಹ್ವಾನ ಮಾಡುತ್ತಿದ್ದೇವೆ. ಈ ಮಸೂದೆಗೆ ಒಪ್ಪಿಗೆ ಕೊಡುವುದಕ್ಕೆ ಸಿದ್ಧರಿಲ್ಲವೆಂದು ಹೇಳುವುದಕ್ಕೆ ನಾನು ನಿಂತಿದ್ದೇನೆ. ತಾವು ಇದನ್ನು ದಯಮಾಡಿ ಹಿಂದೆ ತೆಗೆದುಕೊಳ್ಳಿ. ಇವತ್ತು ಸುಮಾರು ೫೦ ಕೋಟಿ ರೂಪಾಯಿಗಳ ವ್ಯವಹಾರಕ್ಕೆ ಅವಕಾಶ ಕೊಡತಕ್ಕಂಥ ಮಸೂದೆ ಇದು. ವಾರ್ಷಿಕ ವ್ಯವಹಾರ ೫೦ ಕೋಟಿ ರೂಪಾಯಿ ಆಗುವ ಬಾಟ್ಲಿಂಗ್ ವ್ಯವಹಾರವನ್ನು ಒಬ್ಬರಿಗೆ ಕೊಡುತ್ತೀರಿ. ಆದರಿಂದ ಹೆಚ್ಚು ಲಾಭ ಬರುತ್ತದೆ. ಅಂಥ ವ್ಯವಹಾರವನ್ನು ಒಂದು ಅಥವಾ ಎರಡು ಕ್ಲಾಸ್‌ನಲ್ಲಿ ಡಿಸ್ಟಿಲರಿಗಳಿಗೆ ಅಥವಾ ಬಾಟ್ಲಿಂಗ್ ಪ್ಲಾಂಟ್‌ಗೆ ಯಾವುದೇ ನಿಯಂತ್ರಣ ಹಾಕದೆ ಕೊಡುವುದು ಸರಿಯಲ್ಲ. ಡಿಸ್ಟಿಲರಿಗಳ ಮೇಲೆ ಅಥವಾ ಬಾಟ್ಲಿಂಗ್ ಪ್ಲಾಂಟ್‌ಗಳ ಮೇಲೆ ನಿಯಂತ್ರಣ ಹಾಕತಕ್ಕಂಥ ಕಾನೂನು ಇದರಲ್ಲಿ ಇಲ್ಲ. ಇದು ಕಾನೂನು ಎಂದು ಭಾವನೆ ಮಾಡಿದರೆ, it is not to regulate, It is not to control any distillery. It is only to control the Government, ಅದರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳುವುದು ಸರ್ಕಾರದ ಕರ್ತವ್ಯ. ನಿಯಂತ್ರಣ ಹಾಕಲೇಬೇಕು. ಎಕ್ಸೈಸ್ ಕಮಿಷನರ್ ಆಫೀಸರನ್ನು ಯಾರೇ ಆಕ್ಯುಪೈ ಮಾಡಿಕೊಂಡಿರಲಿ, ಎಕ್ಸೈಸ್ ಕಮಿಷನರ್ ಆಫೀಸ್ it should be a statutory office. ಇವತ್ತು ನಾವು ಏನು ಮಾಡುತ್ತಿದ್ದೇವೆ, ಮಾನ್ಯ ಜೆ. ಹೆಚ್. ಪಟೇಲರು ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕು. ನಾವು ಕಾನೂನು ಗಳನ್ನು ಡೈಲ್ಯೂಟ್ ಮಾಡುತ್ತಾ ಬಂದಿದ್ದೇವೆ. You are diluting the statutory authority of office. It is a kind of corruption that we are incorporating in the legislative body or the legislative politics, if I can put it very precisely. It is corrupting the legislative process by using this particular legislative policy. I am putting it very crudely. But, with all sincerety at my command I am speaking on this subject. Are we not diluting the Excise Commissioner's authority ? Keeping the revision power which you want with the Government, have a check. But, allow him to exercise the statutory authority. We are converting all the statutory authority into the administrative expedient body. ಇದಕ್ಕೆ ನಾವು ಇಲ್ಲಿರುವುದು, ಇದಕ್ಕೆ ನಾವು ಈ ಶಾಸನವನ್ನು ಮಾಡುವುದು. Are we not corrupting the statutory authorities of the administrative bodies and hoodwinking the whole piece of legislation rather than circumventing the whole process of constitution It has not been seriously bought of. We are the law framers. We are the law interpreters. We have got to frame the law, not to stamp

the law. It will be a cover or an umbrella for forwarding the list of favourite persons from the corridors of Vidhana Soudha to the Excise Commissioner. But, the Excise Commissioner will have no option but to issue under his own name and seal. Is it not a mockery that we are making on the law itself ? It is just like forwarding licence from the corridors of the Vidhana Soudha to the Excise Commissioner and he has to automatically issue. What is the discretion under the law which the Excise Commissioner can exercise ? Is there any wording ? ಒಂದೇ ಒಂದು ಶಬ್ದವಾದರೂ ಇದರಲ್ಲಿದೆಯೇ ? ಯಾವ ರೀತಿ ಶಬ್ದವನ್ನು ಉಪಯೋಗ ಮಾಡಬೇಕು ? ಕಾನೂನು ಬದ್ಧವಾಗಿ ಈ ವಿಚಾರವನ್ನು ವ್ಯವಹರಿಸಬೇಕೆಂಬ ನೀತಿ ಇದರಲ್ಲಿದೆಯೇ ? No one persons, distilleries will have to be granted with this. ಇದಕ್ಕೆ ನಮ್ಮನ್ನು ಉಪಯೋಗ ಮಾಡಬೇಕೆಂದು ಮಾಡಿದ್ದೀರಾ ? Excise Commissioner will be a despatching clerk. You have reduced him to a despatching clerk and substituted the statutory authority into a despatching clerk. That ultimately is a landship. Perhaps Hon. Speaker should exercise his discretion to send it back. He cannot introduce such bills. ಅಬ್ಜೆಕ್ಟ್ಸ್ ಅಂಡ್ ರೀಸನ್‌ನ್ನು ಕ್ಲಿಯರ್ ಆಗಿ ಹಾಕಿ. ಇಂಥವರಿಗೆ ಬಾಟ್ಲಿಂಗ್ ಲೈಸನ್ಸ್‌ನ್ನು ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಅದನ್ನು ಅನುಷ್ಠಾನ ಮಾಡಲಿಕ್ಕೆ ನಾವು ಈ ಕಾನೂನನ್ನು ನಮೂದಿಸಿದ್ದೇವೆಂದು ಪ್ರಾಮಾಣಿಕವಾಗಿ ಹೇಳಿ. ನಿಮ್ಮ ಪ್ರಾಮಾಣಿಕತೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇಷ್ಟು glorious ಆಗಿ ನಾಚಿಕೆ ಇಲ್ಲದ ಕೆಲಸವನ್ನು ಮಾಡಬೇಡಿ. ಬಹುಶಃ ನಾಚಿಕೆ ಇಲ್ಲದ ಕೆಲಸ ಎಂದು ಹೇಳುವುದು ಸರಿಯಲ್ಲ ವೆಂದು ನನಗನಿಸುತ್ತದೆ. ಏಕೆಂದರೆ ಇಲ್ಲಿ ಎಲ್ಲರಿಗೂ ನಾಚಿಕೆ ಎಂಬುದು ಇದೆ. ಆದ್ದರಿಂದ ನಾಚಿಕೆ ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಸ್ವಲ್ಪಮಟ್ಟಿಗಾದರೂ ನಾಚಿಕೆ, ಪ್ರಾಮಾಣಿಕತೆ ಇದೆ. ನಾನಾದರೂ ಹೇಳುವುದೇನೆಂದರೆ ಈ ವಿಚಾರವನ್ನು ತಾವು ಮತ್ತೊಮ್ಮೆ ಪರಿಶೀಲಿಸಿ. ಇಲ್ಲಿ ಇದನ್ನು ಚರ್ಚೆ ಮಾಡುವುದು ಬೇಡವೆಂದು ಹೇಳುವುದಾದರೆ ದಯಮಾಡಿ ಜಾಯಿಂಟ್ ಸೆಲೆಕ್ಟ್ ಕಮಿಟಿಗಾದರೂ ಇದನ್ನು ಒಪ್ಪಿಸಿ. Of course none of us want to be a party to this if this is the intension. Of course, that should not be the intension. That is our concern. ತಮ್ಮಲ್ಲಿ ಸ್ವಲ್ಪ ಮಟ್ಟಿಗೆ ಪ್ರಾಮಾಣಿಕತೆ ಎಂಬುದು ಇದೆ. ಇದೊಂದಾದರೂ ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಮನಸ್ಸು ನಿಮಗೆ ಇದ್ದರೆ ಇದನ್ನು ಮಾಡಿ. Atleast do that. ನೀವು ಸಾರಾಸಗಟಾಗಿ ಇದು ಪಾಸ್ ಆಗಿ ಹೋಗುವುದು ಸರಿಯಲ್ಲ. ಕರ್ನಾಟಕ ಸರ್ಕಾರದ ಇತಿಹಾಸದಲ್ಲಿ ತಾವು ಇಂಥ ಒಂದು ಕಾನೂನನ್ನು ಮಾಡಿ ಕರ್ನಾಟಕ ರಾಜ್ಯದ ಜನರಿಗೆ ವಂಚನೆಯನ್ನು ಮಾಡತಕ್ಕ ಒಂದು ಜಾಲವನ್ನು ಹರಡುವುದಕ್ಕೆ ಹೋಗಬಾರದೆಂದು ತಮಗೆ ಹೇಳಬಯಸುತ್ತೇನೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಈ ರೀತಿ ಸರ್ಕಾರದ ನೀತಿ ಗೋಸುಂಬೆ ನೀತಿ ಆಗಬಾರದು. ಡಿಸ್ಟಿಲರಿಗೆ ಕೊಡಬಾರದೆಂದು ಇದೇ ಸರ್ಕಾರ ನಿರ್ಣಯಮಾಡಿ ಮತ್ತೆ ಡಿಸ್ಟಿಲರಿಗೆ ಕೊಡಬೇಕೆಂದು ಈ ನಿರ್ಧಾರ ಮಾಡುತ್ತಿದೆ. How do you reconcile ? You are absolutely not apologetic. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗೆ ತಾವು ತಲೆಬಾಗಿದ್ದೀರಿ ಎಂದು ಹೇಳ ತಕ್ಕದನ್ನು ತಾವು ಇಲ್ಲಿ ತಿಳಿಸಿಲ್ಲ ಇದು ದ್ವಿಮುಖ ನೀತಿ. ಅದರಲ್ಲೂ ಸರ್ಕಾರಕ್ಕೆ ಬರತಕ್ಕಂಥ ಸಂಪನ್ಮೂಲಗಳ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ. ಅಸಾಧಾರಣವಾದಂಥ ತಮ್ಮ ಬುದ್ಧಿವಂತಿಕೆ ಯನ್ನು ತಾವು ತೋರಿಸಿರಬಹುದು, ಇದೊಂದು ಸಿಂಪಲ್ ಮಸೂದೆ, ಇದನ್ನು ಹೇಗೋ ಪಾಸು ಮಾಡಿಸಿಕೊಂಡು ಹೋಗುತ್ತೇವೆಂದು ನೀವು ತಂದಿದ್ದರೆ ಅವನ್ನು ಮಾಡಬೇಡಿ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾನು ಹೇಳುತ್ತೇನೆ, ಅಧ್ಯಕ್ಷರೆ, ಇಷ್ಟೇ ಇದ್ದರೆ ಈ ಕಾನೂನಿನ ಅಗತ್ಯವಾದರೂ ಏನಿದೆ ? ಹೈಕೋರ್ಟಿನ ಜಡ್ಜ್‌ಮೆಂಟಿನಲ್ಲಿ, ಮೈಸೂರು ಷುಗರ್ ಫ್ಯಾಕ್ಟರಿಗೆ ಶೇಕಡ ೮೦ ರಷ್ಟು ಕೊಡಿ, ಉಳಿದಿದ್ದು ಬೇರೆಲ್ಲಿ ಸಿಗುತ್ತೊ ಅಲ್ಲಿಗೆ ಕೊಡಿ ಎಂದು. ಇದರಿಂದ ಮೈಸೂರು ಷುಗರ್ ಕಂಪನಿ ಪ್ರಾಫಿಟ್ ಮಾಡುತ್ತದೆ. ಅದು ರಾಜ್ಯಕ್ಕೇ ಉಳಿಯುತ್ತದೆ. ಆ ಕೆಲಸವನ್ನು ತಾವು ಮಾಡ ಬೇಕು. ಇವರ ಉದ್ದೇಶ ಏನಿರಬಹುದು ಎಂದರೆ ಬಾಕಿಯವರಿಗೆ ಹೌದು ಎಂದು ಹೇಳುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕ ಏನು ಸದನದ ಮುಂದೆ ಇದೆ ಇದರಲ್ಲಿ ಇವರು "ಇಲ್ಲದಿರುವ ಭೂತ ಪಿಶಾಚಿಗಳನ್ನು ಕಂಡುಕೊಂಡರೆ" ನಾನು ಔಷದ ಕೊಡಲು ಆಗುವುದಿಲ್ಲ. It also depends upon the person who sels ghoosts where there is none ಏನಾಯಿತು ಎಂದರೆ, ಇವರ ಕಾಲದಲ್ಲಿ ಎಕ್ಸ್‌ಲೈಜಿನ ಒಂದು ದೊಡ್ಡ ದುರಂತವು ನಡೆಯಿತು. ಆದರಿಂದ ಸಾವಿರಾರು ಜನ ಸತ್ತು ಗಂಡಾಂತರಕ್ಕೀಡಾದರು. ಆದರ ಅನುಭವದ ಮೇಲೆ ಇದನ್ನು ಮಾಡಬೇಕಾಯಿತು. ನಾವೇನೂ ತ್ರಿಕಾಲ ಜ್ಞಾನಿಗಳಲ್ಲ. ಅವರ ಅನುಭವದಲ್ಲಿ ಇದನ್ನು ಹೇಗೆ ಪ್ರಿವೆಂಟ್ ಮಾಡಬೇಕೆಂದಿದೆಯೋ ಗೊತ್ತಿಲ್ಲ. ನಾವು ಏನು ಆಗ ಮಾಡಿದೆವು ಎಂದರೆ ನಮ್ಮ ರಾಜ್ಯಗಳ ಮತ್ತು ದೇಶದ ಅನುಭವದ ಆಧಾರದ ಮೇಲೆ ಬಾಟ್ಲಿಂಗ್ ಮಾಡಿಕೊಡಬೇಕೆಂದು ಇವರು ಹೇಳುವ ನೀತಿ ಈ ಸಾಧನವನ್ನು ಉಪಯೋಗ ಮಾಡಿಕೊಂಡು ಜನತೆಗೆ ದ್ರೋಹ ಮಾಡುವುದಾಗಲೀ, ಅಥವಾ ಯಾರಿಗಾದರೂ ಫೇವರ್ ಮಾಡುವುದಾಗಲೀ ಇಲ್ಲ. ಅಪರಷ್ಟೇ ಸಿನ್ಸಿಯರಾಗಿ ನಾನು ಹೇಳಲಿಕ್ಕೆ ಬಯಸುತ್ತೇನೆ. ನಾವು ಬಾಟ್ಲಿಂಗ್ ತೀರ್ಮಾನ ಮಾಡಿದ್ದು ಹಳೆಯ ದುರಂತದ ಅನುಭವರಿಂದ ಮೊಟ್ಟಮೊದಲಿಗೆ ಬಾಟ್ಲಿಂಗ್ ಕೊಡುವಾಗ ಯಾರಿಗೆ ಕೊಡಬೇಕು ? ಯಾರಿಗಾದರೂ ಕೊಡಲೇಬೇಕಲ್ಲ. ಆಗ ಕೆಲವು ಕಾನೂನಿನ ತೊಡಕುಗಳು ಬಂದು ರೂಲ್ಸ್ ಬದಲಾವಣೆ ಮಾಡಿ ಕೊಟ್ಟಿದ್ದರೆ ಕೋರ್ಟಿನಲ್ಲಿ ಏನು ಮಾಡುವುದಕ್ಕೂ ಆಗುತ್ತಿರಲಿಲ್ಲ, ಬಂಗಾರಪ್ಪನವರೂ ಪ್ರಚಾರ ಮಾಡುವುದಕ್ಕೆ ಆಗುತ್ತಿರಲಿಲ್ಲ. ಹೈಕೋರ್ಟಿನವರು ಮ್ಯಾಲಫೈಡೀಸ್ ಎಂದು ಏನು ಹೇಳಿದರು. ಅಂದರೆ ಇಂಥವರಿಗೇ ಎಂದು ಕೊಟ್ಟುಕೊಂಡು ಆಮೇಲೆ ರೂಲ್ ಬದಲಾವಣೆ ಮಾಡಿದ್ದಾರೆ ಎಂದು. ಆದರೆ ದುರಂತದ ಬಗ್ಗೆ ನೇಮಿಸಿದ್ದ ಆಯೋಗವು ಜನರಿಗೆ ಆರೋಗ್ಯಕರವಾಗಿ ಸಾರಾಯಿ ಜನರಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿರುತ್ತದೆ ಎಂದಿತ್ತು. ಕಂಟ್ರಾಕ್ಟರ್ಸ್ ನಿಮ್ಮ ಕಾಲದಲ್ಲಿ ಇದ್ದರು ನಮ್ಮ ಕಾಲದಲ್ಲಿಯೂ ಇದ್ದಾರೆ. ಕಂಟ್ರಾಕ್ಟರ್ಸನ್ನು ಸಬ್ಸಿಟಿಟ್ಯೂಟ್ ಮಾಡತಕ್ಕ ಮೆಷನರಿಯನ್ನು ನಾವು ಇನ್‌ವಾಲ್ವ್ ಮಾಡದೇ ಇದ್ದಾಗ, ಅದು ಒಂದು ಸಾಮಾಜಿಕ ನೃತ್ಯ. ಅದು ಅಮೃತವೋ ವಿಷವೋ, ನಮ್ಮ ಕನ್‌ಸರ್ನ್ ಆದಾಗಿರಲಿಲ್ಲ. ಇದನ್ನು ಚಾಲೆಂಜಾಗಿ ನಮ್ಮ ಸರ್ಕಾರ ತೆಗೆದುಕೊಂಡು ಆಲ್ಟರ್‌ನೇಟೀವ್ ಮೆಷರ್ಸ್ ಬಗ್ಗೆ ಯೋಜಿಸಿತು. ಕೊನೆಗೆ ಸರ್ಕಾರದ ಕ್ರಮ ಕೋರ್ಟ್ ಮೆಟ್ಟಲು ಹತ್ತಿ ಕೋರ್ಟ್ ಕೆಲವರಿಗೆ ಫೇವರ್ ಮಾಡಿದೆ ಎಂದಾಗ ನಮ್ಮ ಸರ್ಕಾರ ಇಲ್ಲ. ಪ್ರೊಸೀಜರಲ್ ಲ್ಯಾಪ್ಸಾಗಿದೆ, ಅದನ್ನು ತಿದ್ದಿಕೊಳ್ಳಲಾಗುವುದು. ಎಂದಿತು. ಸಾರ್ವಜನಿಕ ಜೀವನದಲ್ಲಿ ತಾನೂ ಗಾಜಿನ ಮನೆಯಲ್ಲಿರುವಾಗ ಇನ್ನೊಬ್ಬರ ಗಾಜಿನ ಮನೆಯ ಮೇಲೆ ಕಲ್ಲನ್ನು ಒಗೆಯಬಾರದು. ಇದನ್ನು ಏಕೆ ತಂದಿದ್ದೇವೆ ಎಂದರೆ ಕೋರ್ಟಿನ ಆದೇಶದಂತೆ ಮಾಡುವಾಗ ಪ್ರೈವೇಟ್ ಡಿಸ್ಟಿಲರಿ ಆಗಬಹುದು, ಜಾಯಿಂಟ್ ಸೆಕ್ಟಾರ್ ಡಿಸ್ಟಿಲರಿ ಆಗಬಹುದು. ಜಾಯಿಂಟ್ ಸೆಕ್ಟಾರ್ ಡಿಸ್ಟಿಲರೀಸ್ ಇದ್ದು, ಅವನಿಗೆ ಬಾಟ್ಲಿಂಗ್ ಕೊಟ್ಟರೆ ಏನಾದರೂ ಅಪಾಯವಾದೀತು ಎಂಬ ಮಾನವೀಯತೆಯ ದೃಷ್ಟಿಯಿಂದ ಯಾರು ರೆಕ್ಟಿಫೈಡ್ ಸ್ಪಿರಿಟ್ ಅನ್ನು ತಯಾರು ಮಾಡುತ್ತಾನೆ ಅವನಿಗೆ ನೀರು ಸೇರಿಸಿ ಸಾರಾಯಿ ಮಾಡಿ ಕೊಡುವುದಾಗಿದ್ದರೆ ಕೌಂಟರ್ ಚೆಕ್ ಇರಲಿ ಎಂದು ಬೇರೆಯವರಿಗೆ ಕೊಟ್ಟೆವು. ಮಾನ್ಯ ಮೊಯಿಲಿಯವರು ಎಲ್ಲಾ ಕಡೆಗೂ ಸಂದೇಹದಿಂದ ನೋಡಿದರೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಕಾನೂನನ್ನು ಸರಿಪಡಿಸುವುದಕ್ಕೆ ಹೈಕೋರ್ಟಿನ ಆಜ್ಞೆಯಂತೆ ನಡೆದುಕೊಳ್ಳುವುದಕ್ಕೆ ತಂದಿದ್ದೇವೆ. ಎಲ್ಲಿಯವರೆಗೆ ನಮ್ಮ ಪೂರೈಕೆಯನ್ನು ಕೋ-ಆಪರೇಟೀವ್ ಡಿಸ್ಟಿಲರೀಸ್ ಸರಕಾರೀ ಡಿಸ್ಟಿಲರೀಸ್ ಪೂರೈಸುತ್ತೇವೆ ಅಲ್ಲಿಯವರೆಗೆ ಬೇರೆಯವರ ಹತ್ತಿರ ಹೋಗುವುದಿಲ್ಲ. ನಮ್ಮ ರಿಕ್ವೈರ್‌ಮೆಂಟ್‌ಗೆ ಬರೀ ಸರಕಾರೀ, ಕೋ-ಆಪರೇಟೀವ್ ಡಿಸ್ಟಿಲರೀಸ್‌ಗಳಿಂದ ಆಗುವುದಿಲ್ಲ ಎಲ್ಲಿಂದಲಾದರೂ ತರಬೇಕು. ತಮಿಳುನಾಡಿನಿಂದ, ಕೇರಳದಿಂದ ತಂದರೇ ಎಂದು ಕೇಳುತ್ತೀರಿ. This is a very simple amendment brought before this House not to mislead anybody, not deceive ourselves, not deceive the people. ಇದನ್ನು ಪಾಸ್ ಮಾಡಿಕೊಳ್ಳುತ್ತೇವೆಂಬ ಶಕ್ತಿ ಇದೆಯೆಂದು ನಾನು ಹೇಳಿಕೊಳ್ಳುತ್ತೇನೆಂದು ಅಲ್ಲ. ಯಾವುದೇ ರೀತಿಯ ಬ್ಯಾಡ್ ಇಂಟೆನ್‌ಷನ್ ಇಲ್ಲ ಇತ್ತೀಚೆಗೆ ಏಕೆ ಈ ರೀತಿಯಾಗಿದ್ದೀರೋ ನನಗಂತೂ ಗೊತ್ತಿಲ್ಲ. ಭೋಫಾರ್ಸ್‌ನಿಂದ ಏನೋ ನನಗಂತೂ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದಿರಿ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಬೇರೆಯವರ ಹತ್ತಿರ ಹೋಗತಕ್ಕಂತಹ ಪ್ರಶ್ನೆ ಇಲ್ಲ ಎಂದು. ಮೈಸೂರು ಷುಗರ್ ಫ್ಯಾಕ್ಟರಿಗೆ. ಮಂಡ್ಯ ಸಕ್ಕರೆ ಕಾರ್ಖಾನೆಗೆ ಫುಲ್ ಕೆಪ್ಯಾಸಿಟಿ ಬಂದರೆ ಅದಕ್ಕೇ ವಹಿಸಿಕೊಡಬಹುದು. ಅದನ್ನು ನಾನು ಒಪ್ಪುತ್ತೇನೆ ನೀವೂ ಒಪ್ಪುತ್ತೀರಿ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಇದ್ದರೆ ಬಹಳ ಸಂತೋಷ. ಅದು

ಇಲ್ಲವೆಂದು ಪ್ರೈವೇಟ್ ಸೆಕ್ಟರ್‌ಗಳಿಗೆ ಕೊಡತಕ್ಕಂತಹ ವಿಚಾರ ಇದೆ. Why should you again put all this taluka and district arrack auction ? ಏಕೆ ಇಡಬೇಕು ಸೆಲ್ಲಿಂಗ್ ರೈಟ್ಸ್ ಅನ್ನು ಬೇರೆಯವರಿಗೆ ಕೊಟ್ಟಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲವೆಂಬ ದೃಷ್ಟಿಯಿಂದ ಕೊಟ್ಟಿದ್ದೀರಿ. Since you are finding difficult to enter into Co-operative sector, since you have no infrastructural facilities in Co-operative sector or the Government owned factories ಅದಕ್ಕೆ ಪ್ರೈವೇಟ್‌ಗೆ ಮಾಡಿದ್ದೀರಿ. ಕೋ-ಆಪರೇಟೀವ್ ಸೆಕ್ಟರ್, ಅಥವಾ ಗವರ್ನ್‌ಮೆಂಟ್‌ಗೆ ಕೊಟ್ಟರೆ ಬಹಳ ಸಂತೋಷ ಆದರೆ ಅದು ಆಗುವುದಿಲ್ಲ. ಪ್ರೈವೇಟ್‌ನವರಿಗೆ ಹೋಗಬೇಕೆಂದರೆ ನೀವು ಸೀಲ್ಡ್ ಟೆಂಡರ್ ಅನ್ನು ಕರೆಯಬೇಕು. ಪ್ರೊಸೀಜರಲ್ ಮ್ಯಾಟರ್ಸ್ ಏನಿದೆ ಅದರಲ್ಲಿ ಯಾವುದೇ ಅನುಮಾನ ಬರದ ಹಾಗೆ ನೋಡಿಕೊಳ್ಳಿ ಎಂದು ಹೇಳಿದ್ದೇವೆ. ನಾವು ಟೆಂಡರ್ ಕರೆಯುವುದಿಲ್ಲ ಅಪ್ಲಿಕೇಷನ್ಸ್ ಕರೆಯುತ್ತೇವೆಂದರೆ ತೊಂದರೆಯಾಗುತ್ತದೆ. ಹೈಕೋರ್ಟ್, ಸುಪ್ರೀಂ ಕೋರ್ಟ್‌ನಿಂದ ಆಗಬಾರದಷ್ಟು ಆಗಿದೆ, ಅನಾಹುತವಾಗಿದೆ ಎಂದು ಅವರೇ ಬರೆದಿದ್ದಾರೆ ನೀವೂ ಓದಿದ್ದೀರಿ. ನೀವು ಏನು ಹೇಳಿದಿರಿ ಅದನ್ನು ಕೋರ್ಟಿನವರು ಹೇಳಿದ್ದಾರೆ ಅದರಿಂದಾಗಿ ಅದನ್ನು ಸರಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ ಕೋರ್ಟಿನವರು ಏನು ಹೇಳಿದ್ದಾರೆ ಅದನ್ನು ಮಾಡುತ್ತಿಲ್ಲ ಇದರಲ್ಲಿ ಏನು ಬರೆದಿದ್ದೀರಿ ಟೆಂಡರ್ ಮುಖಾಂತರ ತೀರ್ಮಾನ ಮಾಡಬೇಕೆಂದು ಬರೆದಿದ್ದೀರಿ ? ಈ ಬಿಲ್ಲನ್ನು ನೋಡಿದ್ದೀರಾ ? You call for tenders in a sealed cover. That was the subject matter before the High Court and Supreme court. I went in detail aspect of the matter. ನಾವು ಟೆಂಡರ್ಸ್ ಕರೆಯುತ್ತೇವೆಂದು ಹೇಳಿ. We don't come in your way. ಜನರಿಗೆ ಆರೋಗ್ಯವನ್ನು ನೀಡುತ್ತೇವೆಂದು ಕಲಬೆರಕೆಯಾಗುತ್ತದೆಂದು ಹೇಳುತ್ತೀರಿ ಇದು ಒಂದು ಕಾರಣ. ಎನ್‌ಕ್ವೈರಿ ಕಮಿಷನ್ ರಿಪೋರ್ಟ್ ಕೂಡ ಇತ್ತು. that is why we took this action and accepted the policy of introducing sale of arrack in sealed bottle. ಸೀಲ್ಡ್ ಟೆಂಡರ್ ಕರೆಯತಕ್ಕಂಥಾದನ್ನು ಮಾಡಿ. ನೀವು ಕೂಡಾ ಲಾ ಗ್ರ್ಯಾಜುಯೇಟ್ ಆಗಿರುವವರು, ಮಿನಿಸ್ಟರ್ ಆಗಿದ್ದವರು, ಎಕ್ಸೈಜನ್ನು ಹ್ಯಾಂಡಲ್ ಮಾಡಿದ್ದೀರಿ. ಇವತ್ತು ಇಲ್ಲಿ ಏನು ಇದೆ ಎಂದರೆ. Infrastructural facilities and financial background of the Company or individual who is having distillery licence. ಅದಕ್ಕೆ ಏನಾದರೂ ಪಾಯಿಂಟ್ ಇದೆಯೇ ? infrastructural facilities and financial background these are two main points on which objections have been raised by the Home Commissioner and the Finance Department. I would recall your memory that these two points which were the subject matter before the Karnataka High Court and Supreme Court. ಅಂಡರ್ ಸೆಕ್ಷನ್ ೧೬ ಇತ್ತು. ಇವತ್ತು ಬಾಟ್ಲಿಂಗ್‌ಗೆ ಒಂದು, ಮ್ಯಾನ್ಯುಫ್ಯಾಕ್ಚರಿಂಗ್‌ಗೆ ಒಂದು ಈ ರೀತಿ ಮಾಡಿ ಮೂರು ವರ್ಕನ್ನು ಯಾರಿಗಾದರೂ ವಹಿಸಬಹುದು. ಬಾಟ್ಲಿಂಗ್ ಒಬ್ಬರಿಗೆ ಕೊಡಬಹುದು, ಮ್ಯಾನ್ಯುಫ್ಯಾಕ್ಚರಿಂಗ್ ಒಬ್ಬರಿಗೆ ಕೊಡಬಹುದು, ಮ್ಯಾನ್ಯುಫ್ಯಾಕ್ಚರ್ ಅಂಡ್ ಬಾಟ್ಲಿಂಗ್ ಒಬ್ಬರಿಗೆ ಕೊಡಬಹುದು.

ಶ್ರೀ ಜೆ. ಹೆಚ್. ಪಟೇಲ್.—ಡಿಸ್ಟಿಲರಿ ಲೈಸೆನ್ಸ್ ಯಾರಿಗೆ ಇದೆಯೋ ಅವರಿಗೆ ಮಾತ್ರ ಕೊಡಬೇಕೆಂದು ಇರುವುದು.

ಶ್ರೀ ಎಸ್. ಬಂಗಾರಪ್ಪ.—ಅದನ್ನೇ ಕೊಡುತ್ತೀರಿ. ಕೊಟ್ಟಾಗ ಅವನ ಕೆಪಾಸಿಟಿ ಏನು ? ಇದರ ಬಗ್ಗೆ ಸಬ್ಜೆಕ್ಟ್ ಮ್ಯಾಟರ್ ಬರೆದಿಲ್ಲ ಎಂದು ಹೇಳುವುದು ಒಂದು. ಪ್ರೊಸೀಜರಲ್ ಮ್ಯಾಟರ್ಸ್ ಎಂಟ್ರಸ್ಟ್ ಮಾಡುತ್ತೀರಿ. ಯಾರೋ ಒಬ್ಬ ಇರಬಹುದು. ಅದು ನಿಮಗೆ ಸಂಬಂಧಪಟ್ಟಿರತಕ್ಕಂಥದ್ದು. ಕರಿಯಪ್ಪನೋ ಮರಿಯಪ್ಪನೋ ಇರಬಹುದು, ಅದರ ಬಗ್ಗೆ ನಾವು ಬರುವುದಿಲ್ಲ. ಆದರೆ ಪ್ರೊಸೀಜರ್ ಏನು ? ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನವರು ಏನು ಹೇಳಿದ್ದಾರೆ ಟೆಂಡರನ್ನು ಕರೆಯದೆ ಮಾಡಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಆ ರೀತಿ ಹೇಳಿದ ಮೇಲೆ ನೀವು ಇವೆಲ್ಲವನ್ನೂ ಅಳವಡಿಸುವುದು ಬೇಡವೇ ?

ಶ್ರೀ ಜೆ. ಹೆಚ್. ಪಟೇಲ್ —ಒಂದು ಆ್ಯಕ್ಟ್‌ನಲ್ಲಿ ಇವೆಲ್ಲವನ್ನೂ ತರುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ.—ನಾವು ರೂಲ್ಸ್ ಪ್ರಕಾರ ಮಾಡುತ್ತೇವೆ ಎಂದು ಬರೆದಿದ್ದೀರಿ ಮತ್ತೊಂದು ಏನು ಮಾಡಿದ್ದೀರಿ ಗೊತ್ತಿದೆಯೇ? ಕ್ಲಾಸ್-೨ ಓದಿ. ಎಕ್ಸೈಜ್ ಕಮಿಷನರ್ ನಾಮಿನೇಟ್ ಮಾಡಿ ಅಲ್ಲಿ ಕೂಡಿಸಿದ್ದೀರಿ. ಪ್ರತಿಯೊಂದು ಕೂಡ ಸರ್ಕಾರದಿಂದ ಪ್ರಿಯರ್ ಅಪ್ರೂವಲ್ ಪಡೆದೇ ಆಗಬೇಕು. ನೀವು ಏತಕ್ಕೆ ಆ ಕೆಲಸ ಮಾಡುತ್ತೀರಿ ? ಮ್ಯಾನುಫ್ಯಾಕ್ಚರಿಂಗ್, ಬಾಟ್ಲಿಂಗ್ ಮ್ಯಾನ್ಯುಫ್ಯಾಕ್ಚರಿಂಗ್ ಏತಕ್ಕೆ ಇಟ್ಟುಕೊಳ್ಳುತ್ತೀರಿ ? ಅವನಿಗೆ ಏತಕ್ಕೆ ಕೊಟ್ಟಿಲ್ಲ ? ಅದನ್ನೇ ವೀರಪ್ಪಮೊಯಿಲಿಯವರು ಹೇಳಿದ್ದುದು.

SRI J. H. PATEL,—If that is your suggestion I do accept. ಆ್ಯಕ್ಟ್‌ನಲ್ಲಿ ಬರೆಯುವುದಕ್ಕೆ ಆಗುತ್ತದೆಯೇ ? ರೂಲ್ಸ್‌ನಲ್ಲಿ ಮಿಸ್‌ಯೂಸ್ ಆಗದ ಹಾಗೆ ತಾವು ಹೇಳಿದ ರೀತಿಯಲ್ಲಿ ನಾವು ಗ್ಯಾರಂಟಿಯನ್ನು ರೂಲ್ಸ್‌ನಲ್ಲಿ ಕವರ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಇನ್‌ಫ್ರಾಕ್ಚರ್.ಹಣಕಾಸಿಗೆ ಸಂಬಂಧಪಟ್ಟ ಹಾಗೆ ಈ ವಿಚಾರ ಏನು ಇದೆ. ಅದೆಲ್ಲವೂ ಈ ಸೆಕ್ಷನ್‌ನಲ್ಲಿ ಬಂದುಬಿಟ್ಟಿದೆ.

SRI D. B. INAMDAR.—Sir, there are 13 distilleries working in our State. Now, the intention of the Government is and what has been already given in the judgement that every Company like Mysore Sugar why the should not also be considered. The High Court and the Supreme Court have also said the same thing and on the basis of that the Government has taken a policy decision to give this bottling and maunfacturing of bottling and arrack to distilleries. The draft rules have already been published 1st of August and if approved in the Gazette also and in the draft rules we have made it very clear that first preference will be given to Government Companies and the Co-operative Sector to the extent possible. The requirement of rectified spirit or arrack is about 35 lakhs litre per month or 14 lakh litre rectified spirit per month The Government owned companies are not in a position for the present laid in Co-operative sector there is Hiranya Sugar factory or other Factories comingup other we have said first preference will be given to Government companies and in ease need be the Co-operative sector will be consider and any another else

೪-೦೦ ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ಇನ್ನೂ ಒಂದು ಪಾಯಿಂಟ್ ಇದೆ. ಈ ಗುತ್ತಿಗೆ ಪ್ರಕರಣ ವ್ಯವಹಾರದಲ್ಲಿ ಕರ್ನಾಟಕ ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ಏನು ಬಂತು, ಬರುವುದಕ್ಕಿಂತ ಮುಂಚೆ ನಾವು ಹಲವಾರು ಬಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕರ್ನಾಟಕ ಸರ್ಕಾರಕ್ಕೂ ಹಾಗೂ ಕಂಟ್ರಾಕ್ಟ್‌ದಾರರಿಗೂ ಮಧ್ಯೆ ವ್ಯವಹಾರ ನಡೆದಿತ್ತು ಈ ವ್ಯವಹಾರ ಸಂಬಂಧವನ್ನು ಮುಚ್ಚಿ ಹಾಕಿಕೊಳ್ಳುವುದಕ್ಕೆ ಸಾಧ್ಯ ಇದೆ ಅದಕ್ಕೆ ಈ ತರಹ ಬಿಲ್ ತಂದಿರತಕ್ಕದ್ದು ಎಂದು ನಾನು ಹೇಳುತ್ತೇನೆ. ಅದೇನೋ ತಾವು ಹೇಳಿದಿರಿ ಹಾಗೆ ನಾನು ಹೇಳುವುದು ಅಷ್ಟೆ. ಭೂತಾಕಾರವಾಗಿ ಮತ್ತೆ ಎಚ್ಚರಿಕೆ ವಹಿಸಬೇಕು. ನೀವೇ ಕ್ರಿಯೇಟ್ ಮಾಡಿಕೊಂಡಿರತಕ್ಕ ಭೂತದ ಬಗ್ಗೆ ಎಚ್ಚರಿಕೆ ವಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಪಟೇಲ್‌ರವರು ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದ್ದಾರೆ. ಅವರು ಪ್ರಶ್ನೆಗೆ ನೇರವಾದ ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಆದ್ದರಿಂದ ಅದಕ್ಕೆ ಬಹುಶಃ ನಮ್ಮ ಮಿತ್ರರಾದ ಬಂಗಾರಪ್ಪನವರು ಹೇಳಿದ್ದು ಭೂತದ ಪ್ರಶ್ನೆ ಎಂದು. ಆದರೆ ಮನುಷ್ಯ ರಾಕ್ಷಸನಾದಾಗ ಎಲ್ಲವೂ ಕಾಣುತ್ತದೆ. ಇಂತಹ ಪರಿಸ್ಥಿತಿಗೆ ಹೋಗಬೇಡಿ. ಏಕೆಂದರೆ power always corrupts a man. ಅದಕ್ಕಾಗಿ ನಾವು ಕಾನೂನು ಮಾಡುವುದು. ಡಿಸ್ಕ್ರಿಮಿನೇಷನ್ ಉಪಯೋಗ ಮಾಡುವಾಗ ಸರ್ಕಾರ ಹಲವು ಕಡೆ ಚೆಕ್ಸ್ ಅಂಡ್ ಬ್ಯಾಲೆನ್ಸ್ ಮಾಡಬೇಕು, ನಾವು ಮಾಡತಕ್ಕ ಕಾನೂನು ಸಹಕಾರಿ ಆಗದಿದ್ದರೆ ಅದು ನಮ್ಮನ್ನು ಕಬಳಿಸಿಬಿಡುತ್ತದೆ. ಬಾಟ್ಲಿಂಗ್

ಪ್ರಕರಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕಾದ ಪ್ರಸಂಗ ಬಂತು. ಇಂತಹ ಪರಿಸ್ಥಿತಿ ಉಲ್ಬಣವಾದಾಗ ಅದು ಕಂಡು ಬಂದರೂ ಅದನ್ನು ತಾವು ಗಮನಿಸದಿದ್ದರೆ ಆ ಕಾನೂನೇ ಭಸ್ಮಾಸುರ ಆಗಬಹುದು. ಅಥವಾ ಬೇರೆ ಆಗಬಹುದು. ಆದ್ದರಿಂದ ಇದರ ಬಗ್ಗೆ ಎಚ್ಚರಿಕೆ ಇರಲಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—' ಸುರ ' ಇದೆ, ಅದರ ಹಿಂದೆ ' ಅ ' ಸೇರಿದರೆ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದ್ದರಿಂದ ಅದನ್ನು ಚೆನ್ನಾಗಿ ಉಪಯೋಗ ಮಾಡಬೇಕು. ಅದಕ್ಕೆ ಎಲ್ಲಾ ತರಹ ಲೈಸೆನ್ಸ್ ಕೊಟ್ಟಿದ್ದೀರಿ. Even in clause 16A it is said (a) to manufacture or (b) to bottle or (c) to manufacture and bottle. ಇದರಲ್ಲಿ ಅರ್ಯಾಕ್ ಮಾಡುವುದಕ್ಕೆ ಮಾತ್ರ ಅವಕಾಶ ಇದೆ.

ಶ್ರೀ ಎಸ್. ಬಂಗಾರಪ್ಪ.—ಇದು ನಮ್ಮಲ್ಲಿ ಇದೆ. ಎಷ್ಟೋ ಬಾಟ್ಲಿಂಗ್ ಕೋಆಪರೇಟೀವ್ ಸೆಕ್ಟರ್ ನಮ್ಮಲ್ಲಿದೆ. ಮೈಸೂರು ಶುಗರ್ ಫ್ಯಾಕ್ಟರಿ, ಕೋಆಪರೇಟೀವ್ ಶುಗರ್ ಫ್ಯಾಕ್ಟರೀಸ್ ಇತ್ಯಾದಿಗಳು ನಮ್ಮಲ್ಲಿವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಗವರ್ನಮೆಂಟ್ ಸೆಕ್ಟರ್‌ನಲ್ಲಿದೆಯೋ ? ಹತ್ತು ಪರ್ಸೆಂಟ್, ೧೫ ಪರ್ಸೆಂಟ್ ಇದೆಯೋ... it is alright, if it is not there you can raise the capcity.

ಶ್ರೀ ಜೆ. ಹೆಚ್. ಪಟೇಲ್.—ರಾಂಗ್ ಮೋಷನ್.........

SRI M. VEERAPPA MOILY.—No wrong motion.

SRI J. H. PATEL.—Rectified spirit is taken from the distillery That will be kept in the bonded house under supervision and they converted into arrack.

SRI M. VEERAPPA MOILY.—I know that. When they manufacture arrack they can also bottle it. Bottling does not require sephisticated machinery. ಅಲ್ಲಿ ಮಿಸ್ ಯೂಸ್ ಆಗುವುದನ್ನು ತಪ್ಪಿಸಬೇಕು. From bounded house to distillery and from distillery to the bottles-where is the check ? ಇಲ್ಲಿ ಕಾನೂನು ಸರಿಯಾಗಿದೆ ಎಂದು ತಾವು ಹೇಳಬಹುದು, ಆದರೆ ರೂಲ್ಸ್‌ನ್ನು ಯಾವ ರೀತಿ ಮಾಡುತ್ತೀರಿ ? ರೂಲ್ಸ್ ಬಗ್ಗೆ ನೀವು ಪ್ರತಿಬಂಧಕ ಮಾಡುವುದಕ್ಕೆ ಬರುವುದಿಲ್ಲ. Indulgence in power will have be exercised by discretion ಇಲ್ಲಿ ನೀವು ಹೋಲ್‌ಸೇಲ್ ಆಗಿ ಇಲ್ಲವೇ ರಾಜಕೀಯವಾಗಿ administrative interference ಮಾಡುವ ಸಲುವಾಗಿ ಇಂತಹ ಒಂದು ಕಾನೂನನ್ನು ತಂದರೆ ನಾವು ಅದನ್ನು ಅಂಗೀಕಾರ ಮಾಡಬೇಕೆ ? ಮುಂದಿನ ಸಮಸ್ಯೆಗಳ ಬಗ್ಗೆ ಯಾರೂ ಆಲೋಚನೆ ಮಾಡಬಾರದು ಎಂಬುದು ತಮ್ಮ ಇಚ್ಛೆ ಏನಾದರೂ ಇದೆಯೇ ? ಈ ಅಬಕಾರಿ ಇಲಾಖೆಯ ಬಗ್ಗೆ ಯಾರೂ ಆಲೋಚನೆ ಮಾಡಬಾರದು ಎಂಬುದು ತಮ್ಮ ಅಭಿಪ್ರಾಯವೇ ? Is it the philosophy behind this legislation ?

ಶ್ರೀ ಎಸ್. ಬಂಗಾರಪ್ಪ.—ಆ ರೀತಿಯಾದರೆ ಕುದುರೆ ಹೋಗುತ್ತದೆ, ಬಾಲ ಮಾತ್ರ ಉಳಿಯುತ್ತದೆ.

SRI J. H. PATEL.—You are saying there is potential in danger It also depends how we exercise. That way you have rightly said power corrupts a man. But how are you going to control everything by enactment or inserting few words in the law. ತಾವು ಕೊಟ್ಟಿರುವ ಸಲಹೆಗಳ ಬಗ್ಗೆ ನಾವು ಹುಷಾರಾಗಿರುತ್ತೇವೆ. ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಆದರೆ ಒಂದೊಂದು ಸಲ ಏನಾಗುತ್ತದೆಂದರೆ, ನಮ್ಮ ರಾಜ್ಯಾಂಗವನ್ನು ಸರಿಯಾಗಿ ರಚನೆ ಮಾಡಿದ್ದರೂ ಸಹ ತುರ್ತು ಪರಿಸ್ಥಿತಿ ಜಾರಿಗೆ ಬಂತು, ಏನು ಮಾಡುವುದು ?

SRI M. VEERAPPA MOILY.—It should be supported by a substantive law. rule is not a substantive law. It has got to be protected by a substantive law. Rule cannot be a substantive law.

SRI J. H. PATEL.—I take the hint from the hon. Member.

ಶ್ರೀ ಎಸ್. ಬಂಗಾರಪ್ಪ.—ಇವರು ಕಾನೂನು ಸರಿಯಾಗಿದೆ ಎಂದು ಹೇಳುತ್ತಾರೆ. ಆದರೆ ಬೇರೆ ಬೇರೆ ರಾಜ್ಯಗಳವರು ಇಲ್ಲಿಗೆ ಬಂದು ಕಂಟ್ರಾಕ್ಟ್ ಪಡೆದುಕೊಂಡು ಸಾಕಷ್ಟು ಹಣ ಮಾಡಿಕೊಂಡರು. ಬರಗಾಲದ ಸಮಯದಲ್ಲಿ ಕಂಟ್ರಾಕ್ಟರ್‌ಗಳು ಯಾವರೀತಿ ಹಣ ಮಾಡಿಕೊಳ್ಳುತ್ತಾರೋ ಅದೇ ರೀತಿ ಇಲ್ಲಿಯೂ ಸಹ ಇವರಿಗೆ ಬೇಕಾದವರು ಕಂಟ್ರಾಕ್ಟ್ ಪಡೆದುಕೊಂಡು ಹಣ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ.

ಅಧ್ಯಕ್ಷರು.—ತಾವು ಜಾಗ್ರುತೆ ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಹೆಚ್ಚು ಮಾತನಾಡುವುದಿಲ್ಲ, ಮುಗಿಸಿಬಿಡುತ್ತೇನೆ.

ಇಲ್ಲಿ ೧೬ (ಎ)ನಲ್ಲಿ

(a) to manufacture: or

(b) to bottle; or

(c) to manufacture and bottle,

ಎಂದು ಹೇಳಿರುವುದು ಸರಿಯಲ್ಲ. ಈ ರೀತಿಯ ವ್ಯವಹಾರವನ್ನು ನೀವು ಇಟ್ಟುಕೊಂಡರೆ ನೀವು ಸಂಪೂರ್ಣವಾಗಿ ಅಧಿಕಾರದ ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ತಾವು ಹೈಕೋರ್ಟ್‌ನ ತೀರ್ಮಾನದ ಪ್ರಕಾರ ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಮಾನದ ಪ್ರಕಾರ ಈ ಮಸೂದೆ ತರಲಾಗಿದೆ ಎಂದು ಹೇಳಬಹುದು. ಆದರೆ ಇರತಕ್ಕಂಥ ಕಾನೂನನ್ನು ಮುರಿದು ತಮ್ಮ ಇಚ್ಛಾನುಸಾರವಾಗಿ ವರ್ತನೆ ಮಾಡಲು ಹೊರಟಿದ್ದೀರಿ. ಈಗಿನ ಕಾನೂನಿಗೆ ಇರತಕ್ಕಂಥ ಲಗಾಮನ್ನೇ ಕಿತ್ತುಹಾಕಲು ನೀವು ಪ್ರಯತ್ನ ಮಾಡಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ದಯಮಾಡಿ ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಿ. ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಿ ನೋಡಿ. ಈ ಅಬಕಾರಿ ಕಾನೂನಿನ ಬಗ್ಗೆ ಆಲೋಚನೆಯನ್ನೇ ಮಾಡದೆ ತಿದ್ದುಪಡಿಗಳನ್ನು ತರುವುದು ಸರಿಯಲ್ಲ. ಬಾಟಲ್ ಮೇಲಿನ ಕ್ಯಾಪ್‌ನ್ನು ಓಪನ್ ಮಾಡುವುದಕ್ಕೆ ಮೊದಲೇ ಆಲೋಚನೆ ಮಾಡಬೇಕೇ ಹೊರತು ಅದನ್ನು ಓಪನ್ ಮಾಡಿದ ಮೇಲೆ ಆಲೋಚನೆ ಮಾಡುವುದು ಸರಿಯಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಬಾಟಲ್‌ನ ಕ್ಯಾಪ್ ಓಪನ್ ಮಾಡಿ ಅದರಲ್ಲಿರುವುದನ್ನು ಅರ್ಧದಷ್ಟು ಖರ್ಚು ಮಾಡಿದ ಮೇಲೆ ಆಲೋಚನೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಏನಿದ್ದರೂ ಮೊದಲೇ ಆಲೋಚನೆ ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್.—ಬೇಸಿಕ್ ಆಗಿ ಆಲೋಚನೆ ಮಾಡುವವರಿಗೆ ಬಾಟಲ್ ಓಪನ್ ಮಾಡಿದ ನಂತರವೇ ಒಳ್ಳೆಯ ಆಲೋಚನೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ಬಾಟಲ್‌ನಲ್ಲಿರುವುದರ ಬಗ್ಗೆಯೇ ತಲ್ಲೀನರಾದರೆ ಏನೂ ಆಲೋಚನೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಪಟೇಲ್ ಅವರಿಗೆ ಇದರ ಬಗ್ಗೆ ಯಾರೂ ಬುದ್ಧಿ ಹೇಳುವ ಅಗತ್ಯವಿಲ್ಲ. ಇದರ ಬಗ್ಗೆ ಅವರಿಗೆ ಒಳ್ಳೆಯ ಬುದ್ಧಿ ಇದೆ.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ಮೇಲು ನೋಟಕ್ಕೆ ಬಹಳ ಸರಳ ಮತ್ತು ಮುಗ್ಧ ಎಂದು ಕಾಣುತ್ತಾ ಇರತಕ್ಕಂಥ ಈ ವಿಧೇಯಕ ಅಷ್ಟೊಂದು ಸರಳವಾದ ಉದ್ದೇಶವನ್ನು ಹೊಂದಿಲ್ಲ ಎಂದು ನಾನು ಪ್ರಪ್ರಥಮವಾಗಿ ಸ್ಪಷ್ಟಪಡಿಸಲಿಕ್ಕೆ ಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಮುಂದೆ ಏನೋ ಮಾಡುವುದಕ್ಕಾಗಿ ಮಾಡಿದ್ದಲ್ಲ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದು. ಈಗಾಗಲೇ ಮಾಡಿದ್ದನ್ನು ಮಾಡಿದ್ದೇ ಸರಿ ಎನ್ನುವ ರೀತಿಯಲ್ಲಿ ಮಾಡುವುದಕ್ಕೋಸ್ಕರ ಮಾಡಿರತಕ್ಕಂಥ ಕಾನೂನು ಇದು. ಮಾನ್ಯ ಪಟೇಲರು ಹೇಳಿರುವ ಒಂದು ಮಾತಿನಲ್ಲಿ ಸಂಪೂರ್ಣವಾದಂಥ ಸತ್ಯ ಅಡಗಿದೆ. ಇದು ಕಾನೂನನ್ನು ಸರಿಪಡಿಸುವುದಕ್ಕೋಸ್ಕರ ಮಾಡಿರುವ ಕೆಲಸ. ಈ ಕೆಲಸ ವಿಷಯವನ್ನು ಸರಿಪಡಿಸುವುದಕ್ಕೋಸ್ಕರ ಮಾಡಿರತಕ್ಕಂಥಾದ್ದು. ಇದು ಕಾನೂನನ್ನು ಸರಿಪಡಿಸಲು ಮಾಡಿರುವ ಕೆಲಸ. ಇದು ಸರ್ಕಾರದ ತಪ್ಪಲ್ಲ. ಸರ್ಕಾರದ ಇನ್ನೊಂದು ಜವಾಬ್ದಾರಿ ಇದೆ. ಏನೆಂದರೆ, ಅದರ ಕಡೆಗೆ ಲಕ್ಷ್ಯ ಕೊಟ್ಟಿದ್ದರೆ ಈ ರೀತಿಯಲ್ಲಿ ಕಾನೂನನ್ನು ದುರಸ್ತಿಪಡಿಸಿಕೊಳ್ಳಬೇಕಾದ ಪ್ರಸಂಗ ಇರುತ್ತಿರಲಿಲ್ಲ, ದುರಸ್ತಿಪಡಿಸಿಕೊಳ್ಳುವುದರಿಂದ ಯಾವುದೇ ಲಾಭ ಇಲ್ಲ. ಲಾಭ ಅಂದರೆ ಜನಗಳಿಗೆ ಇಲ್ಲ, ಇದರಲ್ಲಿ ಬೇರೆ ಬೇರೆಯವರಿಗೆ ಲಾಭ ಇರಬಹುದು. ಅವರಿಗೆ ಎಷ್ಟು ಶಕ್ತಿ ಇದೆಯೋ ಅಷ್ಟು ಅವರು ಲಾಭ ಪಡೆದುಕೊಳ್ಳಬಹುದು. ಆದರೆ ಪ್ರಶ್ನೆ ಏನೆಂದರೆ, ಹಿಂದೆ ಬಾಟ್ಲಿಂಗ್ ಹಗರಣ ಏನಿತ್ತು ಅದು ಈಗಾಗಲೇ ಖ್ಯಾತಿಯನ್ನು ಪಡೆದಂಥ ಹಗರಣ. ಇದರ ತಾತ್ಪರ್ಯವೇನೆಂದರೆ, ನಿಮಗೆ ಬೇಕಾಗಿರತಕ್ಕಂಥ ಜನಗಳನ್ನು ನೀವು ನಿಮ್ಮ ಇಚ್ಛಾನುಸಾರ ಆಯ್ಕೆ ಮಾಡಿ ಅವರಿಗೆ ೫೦ ಕೋಟಿ ರೂಪಾಯಿ ವ್ಯವಹಾರವನ್ನು ಅನುಗ್ರಹಿಸಿದ್ದೀರಿ ಎಂದು ಕೋರ್ಟಿನವರು ಹೇಳಿದರು. ಅಂದರೆ ನೀವು ಅವರಿಗೆ ಅನುಗ್ರಹ ಮಾಡಿದ್ದೀರಿ. ಯಾರು ಬೇಕೋ ಅವರನ್ನು ಆಯ್ಕೆಮಾಡಿ ಎಲ್ಲಾ ರೂಲ್ಸ್ ರೆಗ್ಯುಲೇಷನ್‌ಗಳನ್ನು ಬದಿಗೊತ್ತಿ ಮಾಡಿದರು. ಅನಂತರ ಅವರು ಸ್ವಲ್ಪ ದಿವಸ ವ್ಯವಹಾರ ಮಾಡುವಷ್ಟು ಹೊತ್ತಿಗೆ ಆ ವ್ಯವಹಾರಕ್ಕೆ ಧಕ್ಕೆ ಬಂದುದರಿಂದ ಮುಂದೆ ಏನು ಮಾಡಬೇಕು ಎನ್ನತಕ್ಕಂಥ ಸಂದಿಗ್ಧ ಪ್ರಾಪ್ತವಾಗಿದೆ. ಇದಕ್ಕೆ ಅರ್ಜೆನ್ಸಿ ಏನಿತ್ತು ಎಂದು ಹೇಳಿದರೆ ಬಹಳ ಒಳ್ಳೆಯದು. ಈಗ ಇರುವ ಪರಿಸ್ಥಿತಿಯನ್ನು ನಿಭಾಯಿಸಿಕೊಳ್ಳಬೇಕಾದ ಪರಿಸ್ಥಿತಿ ಇತ್ತು.

SRI D.B. INAMDAR,—After the judgement by the Supreme Court the Government started selling arrack in loose form. On another public interest litigation was filed before the High Court, the High Court directed the Government to sell arrack only in bottle form, therein, the interim arrangements were made, interim arrangements was there till 30-6-1987. However, we have asked the High Court for another 3 months extension wherein the permanent arrangement would be made. With a view to make permanent arrangement before september 87 we have brought this Legislation.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ಆ ವಿವರಣೆಯನ್ನು ನಾನು ಬಲ್ಲೆ. ಅದು ಅಷ್ಟೇ ಸತ್ಯ ಅಲ್ಲ, ಆ ವಿವರಣೆ ಸತ್ಯಕ್ಕೆ ಹೊದಿಸತಕ್ಕಂಥ ಹೊದಿಕೆ ಅಷ್ಟೆ. ಅದು ಸತ್ಯ ಇಲ್ಲ. ಯಾರು ಬಾಟ್ಲಿಂಗ್ ಕಾಂಟ್ರಾಕ್ಟ್ ತೆಗೆದುಕೊಂಡಿದ್ದಾರೋ ಅದೇ ವ್ಯಕ್ತಿಗಳು ಇವತ್ತೂ ಬಾಟ್ಲಿಂಗ್ ಕೆಲಸ ಮಾಡುತ್ತಾ ಇದ್ದಾರೆ, ಬಹುಪಾಲು ಅವರೇ ಮಾಡುತ್ತಾ ಇದ್ದಾರೆ. ಯಾರು ಸರಂಡರ್ ಆಗಿದ್ದಾರೋ ಅವರಿಗೆ ಅನುಗ್ರಹ ಮಾಡಿದ್ದೀರಿ. ಒಟ್ಟಿನಲ್ಲಿ ಯಾವ ಜನಗಳಿಗೆ ಮೂಲಭೂತವಾಗಿ ನೀವು ಅನುಗ್ರಹ ಮಾಡಿದ್ದೀರೋ ಆ ಅನುಗ್ರಹ ಸಾಕಷ್ಟು ಕಾಲ ನಡೆದುಕೊಂಡು ಹೋಗಬೇಕು ಎಂದು ಮಾಡಿರತಕ್ಕಂಥ ಕೃತಿಯೇ ಹೊರತು ಅದನ್ನು ಬದಲಾವಣೆ ಮಾಡಿ ಹೊಸ ಪದ್ಧತಿಯನ್ನು ಸೃಷ್ಟಿ ಮಾಡುವುದಕ್ಕೆ ತಂದಿರತಕ್ಕ ಕಾನೂನು ಅಲ್ಲ.

SRI D.B. INAMDAR.—Mysugar company is doing it. I have already told that craft rules have already been published and in that we have said to the extent possible the consideration will be first Government companies, then Co-operatives and finally we will give it to others. If the Government distilleries and Co_operative distilleries are capable them it will not be given to others.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಕವಚ ಸ್ವರೂಪವಾಗಿ ಈ ಕಾನೂನನ್ನು ಸೃಷ್ಟಿಮಾಡಿದ್ದಾರೆ. ನಿಮ್ಮ ಆತ್ಮಸಾಕ್ಷಿಗೆ ಇದು ಸೃಷ್ಟಿಯಾಗಿದ್ದರೆ ಬಹಳಸಂತೋಷ. ಇಲ್ಲಿ ಮ್ಯಾನುಫ್ಯಾಕ್ಚರ್ ಎಂಬ ಒಂದು ಶಬ್ದ ಪ್ರಯೋಗ ಮಾಡಿದ್ದಾರೆ, ಅದು ಈ

ಬಿಲ್ಲಿಗೆ ಸಂಬಂಧವಿಲ್ಲ. ಇದು ಮುಖ್ಯವಾಗಿ ಬಾಟ್ಲಿಂಗ್‌ಗೆ ಇರತಕ್ಕ ಬಿಲ್ ಬಾಕಿ ಏನೂ ಇಲ್ಲ, ಅಲಂಕಾರಕ್ಕೆ ಇರತಕ್ಕದ್ದು ಎಂದು ಸ್ಪಷ್ಟವಾಗಿ ಹೇಳಬಹುದು ಬಾಟ್ಲಿಂಗ್‌ಗೆ ಏತಕ್ಕೆ ತಂದಿದ್ದೇವೆಂದು ಮಾನ್ಯ ಜೆ. ಎಚ್. ಪಟೇಲ್‌ರವರು ಹೇಳುತ್ತಿದ್ದರು. ಹಿಂದೆ ಸಹ ಹೇಳಿದ್ದಾರೆ ಏನೆಂದರೆ ಕಳ್ಳಬಟ್ಟಿಯನ್ನು ತಪ್ಪಿಸುವುದಕ್ಕೆ ಕಲಬೆರಕೆ ತಪ್ಪಿಸುವುದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಿದ್ದೇವೆಂದು ಹೇಳಿದ್ದಾರೆ. ಅವರಷ್ಟೇ ಯೋಚನೆ ಮಾಡಲಿಲ್ಲ, ಹಿಂದೆ ಒಂದು ಕಮಿಷನ್ ನೇಮಕ ಮಾಡಿದ್ದರು, ನ್ಯಾಯಮೂರ್ತಿ ದೇಸಾಯಿಯವರ ಕಮಿಷನ್ ವರದಿ ನನ್ನ ಹತ್ತಿರವಿದೆ. ಆ ವರದಿಯಲ್ಲಿರತಕ್ಕ ಶಿಫಾರಸ್ಸುಗಳಲ್ಲಿ ಇದ್ದೋದು. ಆದರೆ ಈ ವರದಿಯ ತಾತ್ಪರ್ಯವನ್ನು ತಿಳಿದುಕೊಳ್ಳದೆ ಬರೀ ಒಂದು ಶಿಫಾರಸ್ಸನ್ನು ನಿಮಗೆ ಹೇಗೆ ಅನುಕೂಲವಾಗಬೇಕೋ ಆ ರೀತಿಯಲ್ಲಿ ಬದಲಾಯಿಸಿಕೊಂಡು ಈ ಕೆಲಸವನ್ನು ಮಾಡಿದ್ದೀರಿ. ನ್ಯಾಯಮೂರ್ತಿ ದೇಸಾಯಿಯವರ ವರದಿಯಲ್ಲಿ ಅವರು ಹೇಳಿರತಕ್ಕ ತಾತ್ಪರ್ಯದ ಪ್ರಕಾರ ಕಳ್ಳಬಟ್ಟಿ ಮಾಲಿಗೆ ಜನ ಏತಕ್ಕೆ ಬಲಿಯಾಗುತ್ತಾರೆಂದರೆ ನ್ಯಾಯವಾದ ಮಾಲಿಗೆ ವಿಪರೀತವಾದ ದುಬಾರಿ ಬೆಲೆ ಇರುವುದರಿಂದ, ಅದಕ್ಕೆ ಸೋಡಿ ದರದಲ್ಲಿ ಕೊಡುವುದು ನ್ಯಾಯವಾದುದೆಂದು, ನೀವು ಕೊಡುವುದಾದರೆ ನ್ಯಾಯವಾದ ಮಾಲನ್ನು ಕಡಿಮೆ ದರದಲ್ಲಿ ಕೊಡಿ. ಇಲ್ಲದಿದ್ದರೆ ಜನರು ಕಳ್ಳಬಟ್ಟಿಗೆ ಶರಣಾಗುತ್ತಾರೆಂದೂ, ಆ ಕಳಬಟ್ಟಿಗೆ ಇನ್ನಷ್ಟು ಕಲಬೆರಕೆಯಾದಾಗ ಜನ ಪ್ರಾಣಬಿಡುತ್ತಾರೆಂದು ಅವರು ಹೇಳಿದ್ದಾರೆ. ನಿಜವಾಗಿಯೂ ಸರ್ಕಾರಕ್ಕೆ ಜನರಿಗೆ ಅನುಕೂಲ ಮಾಡಬೇಕೆಂದು ಅಪೇಕ್ಷೆಯಿದ್ದರೆ ಸರ್ಕಾರ ಸಾರಾಯಿಯ ಬೆಲೆಯನ್ನು ಸರ್ವಸಾಮಾನ್ಯರಿಗೆ ಎಟಕುವ ಹಾಗೆ ಏನು ಬೇಕೊ ಅದನ್ನು ಮಾಡಿಯೆಂದು ಆ ಶಿಫಾರಸ್ಸು. ಅದಕ್ಕೆ ಇವರು ಏನು ಹೇಳಿದರು ಅಂದರೆ ಈಗಿರತಕ್ಕ ಕಂಟ್ರಾಕ್ಟರುಗಳ ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಸರ್ಕಾರದ ನೀತಿಯೇನು ಎಂದು ಕೇಳುತ್ತಿದ್ದರು, ಇವರ ನೀತಿಯೇನೂ ಇಲ್ಲ. ಇವತ್ತಿನವರೆಗೆ ಎಷ್ಟು ಹಣ ಬರುತ್ತದೆ ಅದು ವರ್ಷೇ ವರ್ಷೇ ಅದು ಜಾಸ್ತಿಯಾಗಿ ಬರಬೇಕು. ಆದಾಯ ವರ್ಷೇ ವರ್ಷೇ ಏರುತ್ತಿರಬೇಕು. ಜನರ ಆರೋಗ್ಯ ಆರ್ಥಿಕ ಸ್ಥಿತಿ ಕೆಡಬೇಕು. ಇವರಿಗೆ ನೀತಿಯಿಲ್ಲ, ಅದೊಂದೆ ನೀತಿ. ಜನರಿಗೆ ಹೆಚ್ಚು ಹೆಚ್ಚು ಕುಡಿಸುವುದು, ಇವರು ಹೆಚ್ಚು ಹೆಚ್ಚು ಹಣ ಸಂಪಾದನೆ ಮಾಡಬೇಕು ಅದು ಬಿಟ್ಟರೆ ಬೇರೆ ನೀತಿಯಿಲ್ಲ. ೧೩ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸುಮಾರು ೨೫೦ಕೋಟಿ ರೂಪಾಯಿಗಳ ಲಾಭ ಬರುತ್ತಿರಬೇಕು, ಯಾವ ಉದ್ಯಮದಲ್ಲಿ ಇಷ್ಟು ಲಾಭವಿದೆ? ಯಾವ ಉದ್ಯಮದಲ್ಲೂ ಇಷ್ಟು ಪರ್ಸೆಂಟ್ ಲಾಭ ಸಿಗುವುದಿಲ್ಲ. ಮಾನ್ಯ ಪಟೇಲರ ಖಾತೆಯಲ್ಲಿ ಇಷ್ಟು ಲಾಭ ಬರುತ್ತದೆಯೆ ? ನಾಲ್ಕು ಸಾವಿರ ಪರ್ಸೆಂಟ್ ಲಾಭ. ಇವರು ಮಾಡುವುದಾದರೂ ಏನೂ, ಬರೀ ಮೊಲಾಸಿಸ್ ಸ್ಪಿರಿಟ್ ಸೇರಿಸಿ ಅದಕ್ಕೆ ನೀರು ಸೇರಿಸಿ ಮೂರು ದಿವಸಗಳ ಕಾಲ ಹಾಗೆಯಿಟ್ಟು ಅದಕ್ಕೆ ಮತ್ತೊಂದಿಷ್ಟು ಒಂದೆರಡು ವಿಷಗಳನ್ನು ಸೇರಿಸುತ್ತಾರೆ. ಆ ರೀತಿ ಮಾಡಿ ಲಾಭ ಮಾಡುತ್ತಿದ್ದಾರೆ. ನಾಲ್ಕು ಸಾವಿರ ಪರ್ಸೆಂಟ್ ಲಾಭ. ಇದು ಜನಗಳ ರಕ್ತವನ್ನು ಹೀರ ತಕ್ಕದ್ದು. ಈ ರೀತಿ ಮಾಡತಕ್ಕದ್ದು ಖಂಡಿತವಾಗ ತಪ್ಪೆಂದು ದೇಸಾಯಿಯವರು ಹೇಳಿದ್ದಾರೆ. ಇವತ್ತಿನ ದಿವಸ ಇರುವ ಕಂಟ್ರಾಕ್ಟ್ ಪದ್ಧತಿಯನ್ನು ತಪ್ಪಿಸಬೇಕೆಂದು ಮಾಡಿದ್ದೇವೆಂದು ಹೇಳಿದ್ದಾರೆ. ಈಗ ಒಬ್ಬೊಬ್ಬರಿಗೆ ಪೈಪೋಟಿ ಹೆಚ್ಚುತ್ತಾರೆ. ಅವರು ಇವರ ಜೊತೆಯಲ್ಲಿಯೇ ಇರುತ್ತಾರೆ. ಇವರ ಜೊತೆಯಲ್ಲಿಯೇ ಓಡಾಡುತ್ತಾರೆ. ಅವರನ್ನು ಅಲ್ಲಿಯಿಂದ ಕರೆಯಿಸಿ ಮಾತನಾಡುತ್ತೀರಿ ಏನು ಬೇಕೋ ವ್ಯವಹಾರಗಳನ್ನು ಮಾಡುತ್ತೀರಿ. ವರ್ಷೇ ವರ್ಷೇ ಲಾಭ ಏರುತ್ತಾ ಹೋಗಬೇಕು. ಪ್ರತಿ ವರ್ಷ ಇನ್‌ಕಂ ಇರಬೇಕು. ಎರಡು ರೀತಿಯಲ್ಲಿ ಅಂದರೆ ಜಾಸ್ತಿ ಜನ ಬರಬೇಕು ಜಾಸ್ತಿ ಜಾಸ್ತಿ ಕುಡಿಯಬೇಕು. ಕುಡಿಯುತ್ತಿರುವ ಜನರು ನೀರು ಮತ್ತು ವಿಷ ಇವೆರಡನ್ನು ಸುರಿದುಕೊಂಡು ಹೋಗಬೇಕು. ಹಣ ಆಕಾಶದಿಂದ ಉದುರಿ ಬೀಳುತ್ತದೆಯೇ ? ಇದು ಒಂದೇ ಕ್ರಮದಿಂದ ಏರುತ್ತಿದೆ, ಜನರ ಪರಿಸ್ಥಿತಿ ಏನಾಗುತ್ತಿದೆ ಎಂದರೆ ಎಲ್ಲಾ ಕಡೆ ಇದೇ ಅವರ ಜೀವನ ಕೇಂದ್ರ ಬಿಂದುವಾಗಿದೆ. ಸೋಷಿಯಲ್ ವೆಲ್‌ಫೇರ್‌ನಲ್ಲಿ ಏನು ಖರ್ಚು ಮಾಡುತ್ತೀರಿ ಅದು ತೂತು ಮಡಕೆಗೆ ಹುಯ್‌ದಂತಾಗುತ್ತದೆ. ದೇಸಾಯಿ ಅವರು ಈ ಕಾಂಟ್ರಾಕ್ಟ್ ಪದ್ಧತಿಯನ್ನು ತಪ್ಪಿಸಿ ಇದರ ವೆಚ್ಚವನ್ನು ಕಡಿಮೆ ಮಾಡಿ ಎಂದು ಹೇಳಿದರು. ಇನ್ನೊಂದು ಸೆಟ್ ಆಫ್ ಕಾಂಟ್ರಾಕ್ಟರ್ಸ್ ಸೃಷ್ಟಿ ಮಾಡಬೇಕೆಂದು ಹೇಳಿದರೇನು ? perferably in Government distilleries at Government loss ಎಂದು ಹೇಳಿದ್ದಾರೆ. He has not said that the Government should go on giving it to private contractors. ಮತ್ತೊಂದು ಹೊಸ ಕಂಟ್ರಾಕ್ಟರ್ಸ್ ನಿಮಗೋಸ್ಕರ ಸೃಷ್ಟಿಮಾಡಿಕೊಳ್ಳಲಿಕ್ಕೆ ಎಂದೂ ಅವರು ಹೇಳಲಿಲ್ಲ. You have made a perfect ass of the recommendations of the Desai Commission. It is one of the most beautiful reports on this whole system. ತಾವು ಸರಿಯಾಗಿ ಓದಿ ಅನುಷ್ಠಾನಕ್ಕೆ ತಂದರೆ ತಮಗೆ ನಾನು ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಯಾವ ಕಾರಣ

ಕ್ಕೋಸ್ಕರ ಇದು ದುಬಾರಿಯಾಗಿ ಕಳ್ಳಬಟ್ಟಿ ಸಾರಾಯಿಗೆ ಸರ್ವೇಸಾಮಾನ್ಯ ಜನರು ಶರಣರಾಗಿ ಅವರು ಪ್ರಾಣವನ್ನು ತರತಕ್ಕದ್ದು ಸಂದರ್ಭಗಳ ಪುನರಾವರ್ತನೆಯಾಗುತ್ತಿದೆ ಎಂದು ಹೇಳಿದರು. ಅದರ ಜೊತೆಗೆ ಇನ್ನೊಂದುಬಾಟ್ಲಿಂಗ್ ಸೇರಿಸಿದರು. ಅರೇಕ್ ಬೆಲೆ ಏನಾಯಿತು. ? ಇವೊತ್ತು ೭೫೦ ಮಿಲಿ ಲೀಟರ್ಸ್ ಬಾಟಲ್ಸ್ ಬರುತ್ತಿದೆ, ಬಾಟ್ಲಿಂಗ್ ಚಾರ್ಜ್‌ಸ್ ಮೂರು ರೂಪಾಯಿ ಬಿ ಳುತ್ತಿದೆ. ಮಾನ್ಯ ಜೆ. ಹೆಚ್. ಪಟೇಲರು ಯಾವಾಗ ಅಧಿಕಾರಕ್ಕೆ ಬಂದರೊ ಆಗಲೇ ೭೫೦ ಎಂ. ಎಲ್.ಗೆ ಬಂತು

ಶ್ರೀ ಜೆ. ಹೆಚ್. ಪಟೇಲ್.—ಅದು ಆಯಾಯ ಸರ್ಕಾರದ ಸೈಜ್ ಮೇಲೆ ಹೋಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರ ಭಾಷೆಯಲ್ಲಿ ಹೇಳುವುದಾದರೆ, ಮೊದಲು ಇದ್ದಂತಹ ೧೫೦ ಎಂ. ಎಲ್. ೩೫೦ ಎಂ. ಎಲ್. ಇವೆಲ್ಲಾ ನಗೆದುಬಿದ್ದುಹೋಗಿ ಈಗ ೭೫೦ ಎಂ. ಎಲ್. ಗೆ, ಬಂದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಿಂದೆ ಇದ್ದಾಗ ಕಡಿಮೆ ಕುಡಿದರೆ ಕಿಕ್ ಬರುತಿತ್ತು, ಈಗ ಜಾಸ್ತಿ ಕುಡಿದರೆ ಕಿಕ್ ಬರುತ್ತದೆ ಎಂದು ಮಾನ್ಯ ಪಟೇಲ್‌ರವರು ಹೇಳಬಹುದಾಗಿತ್ತು.

ಶ್ರೀ ಕೆ. ಹೆಚ್. ಶ್ರೀನಿವಾಸ್,—ಕಿಕ್ಕಿಂಗ್ ದಿ ಬಕೆಟ್ ರೀತಿಯಲ್ಲಿ ಆಗಿದೆ. ಅದಕ್ಕೆ ಒಂದು ಕಮಿಟಿ ನೇಮಿಸಿ ಸಿದ್ಧಾಂತದ ಪ್ರಕಾರ ಮಾಡಿದ್ದೇವೆಂದ ುಹೇಳಿದ್ದಾರೆ. ಕಮಿಟಿ ಶಿಫಾರಸ್ಸಿನ ಪ್ರಕಾರ ಹೊಸ ಬಾಟಲ್ ಎಂದರೆ ಇವರುಹೊಸ ಬಾಟಲ್ ಉಪಯೋಗಿಸುತ್ತಾ ಇಲ್ಲ. ಸೆಕೆಂಡ್ ಹ್ಯಾಂಡ್ ಬಾಟಲ್, ಗುಜರಿಯಲ್ಲಿ ಖರೀದಿ ಮಾಡಿಕೊಂಡು ಬಂದು, ದುಡ್ಡು ಹೊಡೆಯುತ್ತಿದ್ದಾರೆ. ಆ ಬಾಟಲುಗಳನ್ನು ತೊಳೆಯುವುದಿಲ್ಲ, ಏನು ಇಲ್ಲ. ಆ ಬಾಟಲ್‌ನ ಕೆಳಗೆ ವಿಷ ಉಳಿದಿರುತ್ತದೆ. ಅದರ ಜೊತೆಗೆ ಇನಷ್ಟು ಇವರು ಸೇರಿಸುತ್ತಾರೆ. ಮಾನ್ಯ ಅಧ್ಯಕ್ಷರೆ. ಆ ಕಮಿಟಿಯಲ್ಲಿ ಹೊಸ ಬಾಟಲ್ ಇನ್‌ವೆಸ್ಟ್ ಮಾಡಿದಾಗ ಎಷ್ಟು ದುಡ್ಡು ಆಗಿದೆ ಅಂದರೆ, ಅದನ್ನು ಬಾಟಲ್ ಚಾರ್ಜಸ್ ಎಂದು ಇಂಟರ್‌ಪ್ರಿಟ್ ಮಾಡಿ, ಹಳೆಯ ಬಾಟಲ್‌ನಲ್ಲಿ ರೀ ಸೈಕಲಿಂಗ್ ಮಾಡಿ ಮ್ಯಾಕ್ಸಿಮಮ್ ಪ್ರೈಸ್ ತೆಗೆದುಕೊಳ್ಳುತ್ತಾರೆ. ಈಗ ಇವರು ಇರತಕ್ಕ ಅರೇಕನ್ನು ತೆಗೆದು ಹೊಸ ಬಾಟಲಿಗೆ ತುಂಬುವುದಕೋಸ್ಕರ ಮೂರು ರೂಪಾಯಿ ಎಕ್ಸ್‌ಟ್ರಾ ಬೇರೆ ಕೊಡಬೇಕು. ಇವೊತ್ತು ಕೈ ಬೊಗಸೆಯಲ್ಲಿ, ಕರಟದಲ್ಲಿ ಕುಡಿಯಲಿಕ್ಕೆ ಸಿದ್ಧ ಇರತಕ್ಕ ವ್ಯಕ್ತಿಗಳು ಇರುತ್ತಾರೆ. ಬಾಟ್ಲಿಂಗ್‌ನಿಂದ ಸರ್ವೇಸಾಮಾನ್ಯ ಜನರಿಗೆ ಏನು ಮಾಡಿದ್ದೀರಿ, ಒಂದೆರಡು ಟ್ರಾಜಿಡಿ ಇದ್ದು ಅದನ್ನು ತಪ್ಪಿಸಬೇಕೆಂದು ಷರತ್ತು ಇದ್ದರೆ ಅದಕ್ಕೆ ಬಾಟ್ಲಿಂಗ್ ಮಾಡಿ. ತಾವು ಈ ರೀತಿ ಬಾಟ್ಲಿಗೆ ಮೂರು ರೂಪಾಯಿ ಏರಿಸಿದರೆ ಅದರಿಂದ ಅವನು ಖಂಡಿತ ಉದ್ಧಾರ ಆಗಲಿಕ್ಕೆ ಸಾಧ್ಯವಿಲ್ಲ. ಶ್ರೀಸಾಮಾನ್ಯನು ಏನು ಕುಡಿಯುತ್ತಿದ್ದಾನೆ ಅವನಿಗೆ ಇದರಿಂದ ಯಾವ ಉಪಕಾರವು ಆಗಿಲ್ಲ, ಮತ್ತೊಂದು ಭಾರವನ್ನು ಅನಾವಶ್ಯಕವಾಗಿ ಹೇರಿದ್ದೀರಿ ಅಷ್ಟೆ. ಇವೊತ್ತು ಬಾಟ್ಲಿಂಗ್ ಮಾಡಲಿಕ್ಕೆ ದುಡ್ಡು, ಬಾಟ್ಲಿಂಗ್ ಮಾಡತಕ್ಕ ಕಂಟ್ರಾಕ್ಟರಿಗೆ ದುಡ್ಡು, ಸೆಕೆಂಡ್ ಹಾಂಡ್ ಬಾಟಲ್ ಸಪ್ಲೈ ಮಾಡತಕ್ಕವರಿಗೆ ದುಡ್ಡು, ನೀವು ಏನು ಮಾಡಿದ್ದೀರಿ, ಡಿಸ್ಟಿಲರೀಸ್. ಬಾಟ್ಲಿಂಗ್ ಮಾಡತಕ್ಕವರು ಯಾರು ಇದ್ದಾರೆ ಅವರು, ಅವರವರೇ ಒಂದು ಅಂಡರ್‌ಸ್ಟ್ಯಾಂಡಿಗ್‌ಂಗೆ ಬಂದಿರುತ್ತಾರೆ. ನೀವೇ ಸರಿಮಾಡಿಕೊಟ್ಟು ನೀವೆ ಈ ರೀತಿ ನಡೆಸಲಿ ಎಂದು ಮಾಡಿದ್ದೀರಿ ಎಂದು ಗೊತ್ತಿದೆ. ನಿಮ್ಮ ಎಲ್ಲಾ ಆಟಗಳನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಶಕ್ತಿ ಇಲ್ಲ ಆದರೂ ಸಹ ಅಲ್ಪಸ್ವಲ್ಪ ಗೊತ್ತಾಗುತ್ತದೆ. ತಾವು ಏನು ಮಾಡಿದರೂ ನಮಗೆ ಗೊತ್ತಾಗದೇ ಹೋಗುವುದಿಲ್ಲ ನಮಗೆ ಸ್ವಲ್ಪ ಗೊತ್ತಾದರೂ ಸಹ, ಇಷ್ಟು ಸಂಕಟ ಆಗುವಷ್ಟು ಗೊತ್ತಾಗುತ್ತದೆ. ಆದ್ದರಿಂದ ನಾನು ಹೇಳುತ್ತೇನೆ, ತಾವು ದಯಮಾಡಿ ಈರೀತಿ ಅರ್ಧಬರ್ಧ ಮನಸ್ಸಿನಿಂದ ಅಥವಾ ಯಾವುದೋ ಒಂದು ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಮೂರನೆಯವರಿಗೆ ಲಾಭ ಮಾಡಿಕೊಡುವುದಕ್ಕೆ ಹೋಗಬೇಡಿ.

ಶ್ರೀ ಜೆ. ಹೆಚ್ ಪಟೇಲ್.— ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸುದೀರ್ಘವಾಗಿ ಚರ್ಚೆಮಾಡುವುದಕ್ಕೆ ನಾನು ತಯಾರಿದ್ದೇನೆ. ಇದು ಮಾನ್ಯಸದಸ್ಯರಿಗೂ ಗೊತ್ತಿದೆ. ಈ ಅಬ್ಕಾರಿ ಹಿಸ್ಟರಿ ಏನು ಎಂಬುದನ್ನು ವಿವರವಾಗಿ ಹೇಳಬಲ್ಲೆ. ಈಗ ನಾವು ಸದನದ ಮುಂದೆ ತಂದಿರತಕ್ಕ ಕಾನೂನಿನಲ್ಲಿ ಬಾಟ್ಲಿಂಗ್‌ನ್ನು ಯಾರಿಗೆ ಕೊಡಬೇಕೆಂಬ ಬಗ್ಗೆ ಹಿಂದೆ ಚರ್ಚೆಯಾಗಿ ಅದು ಕೋರ್ಟಿಗೂ ಕೂಡ ಹೋಗಿದೆ. ಇದರ ಹಿನ್ನೆಲೆಯನ್ನು ಹೇಳುವುದಾದರೆ ನಾವು ಹೇಳಬಹುದು. ಆದರೆ ಅದು ಇಲ್ಲಿ ಬಗೆಹರಿಯುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗಲಾದರೂ ತಾವು ನ್ಯಾಯಮೂರ್ತಿ ದೇಸಾಯಿಯವರ ರಿಪೋರ್ಟಿಗೆ ಮನ್ನಣೆಯನ್ನು ಕೊಟ್ಟು ಸರ್ಕಾರದ ಖರ್ಚಿನಲ್ಲಿ, ಸರ್ಕಾರೀ ಡಿಸ್ಟಿಲರಿಗಳಲ್ಲಿ ಬಾಟ್ಲಿಂಗ್ ಮಾಡಿಸಿ. ಅದು ಸಾಧ್ಯವಾಗದಿದ್ದರೆ ಒಂದು ವರ್ಷಕಾಲ ಬಾಟ್ಲಿಂಗ್ ಮಾಡದ್ದಿರೂ ಪರವಾಗಿಲ್ಲ.

ಹಾಗೆಯೇ ಕೊಡಿ ಅಥವಾ ಪ್ಲಾಸ್ಟಿಕ್ ಕವರ್‌ನಲ್ಲಾದರೂ ಹಾಕಿ ಕೊಡಿ. ರಾಜ್ಯಕ್ಕೆ ಇದರಿಂದ ಬರತಕ್ಕ ೨೫೦ ಕೋಟಿ ರೂಪಾಯಿ ಆದಾಯದಲ್ಲಿ ೨೫ ಕೋಟಿ ರೂಪಾಯಿಗಳನ್ನಾದರೂ ಇದಕ್ಕಾಗಿ ಖರ್ಚು ಮಾಡಿ. ಜನರ ಆರೋಗ್ಯದ ಹಿತದೃಷ್ಟಿಯಿಂದಲಾದರೂ ನೀವು ಕೆಲಸ ಮಾಡಿ. ೨೫ ಕೋಟಿ ರೂಪಾಯಿಗಳಲ್ಲಿ ಮಂಡ್ಯ ಸಕ್ಕರೆ ಕಾರ್ಖಾನೆಗೂ ಸ್ವಲ್ಪಮಟ್ಟಿಗೆ ಇನ್‌ವೆಸ್ಟ್ ಮಾಡಿ. ನೀವು ಮಾಡುವುದಾದರೆ ಮಾಡಿ, ಪ್ರೈವೇಟ್ ಡಿಸ್ಟಿಲರೀಸ್‌ಗೆ ಬಾಟ್ಲಿಂಗ್ ಮಾಡಲು ಅವಕಾಶವನ್ನು ಕೊಟ್ಟರೆ ಅಲ್ಲಿ ದುರುಪಯೋಗವಾಗುವುದಕ್ಕೆ ಅವಕಾಶ ಇದೆಯೆಂದೂ ಕಲಬೆರಕೆ ಆಗತಕ್ಕ ಸಂದರ್ಭಗಳಿವೆಯೆಂದೂ ಮತ್ತು ಸರ್ಕಾರದ ಉದ್ದೇಶ ಏನಿದೆ ಅದು ಸಫಲವಾಗುವುದಿಲ್ಲವೆಂದೂ ನೀವು ಹೇಳಿದ್ದೀರಿ. ನಿಮ್ಮ ಮಾತನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಲೀ ಎನ್ನುವಂತೆ ಮಾಡುವುದಕ್ಕೆ ಹೊರಟಿದ್ದೀರಿ. ದಯೆಯಿಟ್ಟು ಹಾಗೆ ಮಾಡಬೇಡಿ. ಮಾನ್ಯ ದೇಸಾಯಿಯವರು ತಮ್ಮ ರಿಪೋರ್ಟಿನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಆರೀತಿ ನೀವು ಮಾಡದೆ ಬೇರೆ ಏನೊ ನೋ ರೀತಿಯಲ್ಲಿ ಮಾಡುವುದಕ್ಕೆ ಹೊರಟಿದ್ದೀರಿ. ಸರ್ಕಾರಕ್ಕೆ ಒಂದು ಧೃಢ ಮನಸ್ಸಿದ್ದರೆ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆ ? ಇದನ್ನು ಸರಿಪಡಿಸಬೇಕೆಂದಿದ್ದರೆ you make a beginning. This shall be the beginng to start bottling in Government distilleries at Government's cost and not to transfer it on to the poor consumers, ಇದನ್ನು ಮಾಡಬೇಕು ಎಂದು ಹೇಳಿ ಈ ವಿಧೇಯಕವನ್ನು ನಾನು ವಿರೋಧಿಸುತ್ತೇನೆ.

೪-೩೦ ಪಿ. ಎಂ.

ಶ್ರೀ ಡಿ. ಬಿ. ಇನಾಂದಾರ್ (ಅಬ್ಕಾರಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಈ ದಿವಸ ಅಮೆಂಡ್‌ಮೆಂಟ್ ತಂದಿರತಕ್ಕಂಥದ್ದಕ್ಕೆ ಮುಖ್ಯವಾದ ಕಾರಣವೇನೆಂದರೆ ಸಾರಾಯಿಯನ್ನು ಬಾಟ್ಲಿಂಗ್ ಮಾಡಬೇಕು ಎನ್ನುವುದು ಸರ್ಕಾರದ ನೀತಿ, ಇದರಲ್ಲಿ ನಾವು ಬದಲಾಗಿದ್ದೇವೆ. The intention of the Government originally was to keep distelleirs and contractors out of the bottling.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಂಗ್ಲೀಷ್‌ನಲ್ಲಿ ಹೇಳುತ್ತಿದ್ದಾರೆ. ದಯವಿಟ್ಟು ಕನ್ನಡದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್,—ಕನ್ನಡದಲ್ಲಿ ಹೇಳಿದರೆ ತಮಗೆ ಅರ್ಥವಾಗುತ್ತದೆಯೋ ?

ಶ್ರೀ ಗೋಪಾಲ ಮುಕುಂದ ಕಾನಡೆ.—ತಮಗೆ ಸಾಯಂಕಾಲ ೬ ಗಂಟೆಯ ಮೇಲೆ ಹೇಳಿದರೆ ಅರ್ಥವಾಗುವುದು. ಅಷ್ಟರೊಳಗೆ ಹೇಳಿದರೆ ಅರ್ಥವಾಗುವುದಿಲ್ಲ.

SRI D. B. INAMDAR.—After the decisions of the High Court and the Supreme Court and in confirming with the judgement that was given, Government thought of first selling arrack in bettles was stopped. Subsequently, another public interest litigation was filed in the High Court and High Court gave a judgement asking the Government to sell arrack only in sealed bottles and not in loose form. On the basis of this an interim arrangement was made. As you might be all aware, that eight people were entrusted with the work of bottling and when the High court asked the government to continue selling arrack only in bottles, six companies were entrusted with the work and an interim arrangement was made. This interim arrangement was still 30-6-87 However, since we could not finalise the final bottling orders before 30th June, 1987 we asked the High Court for three more months time to continue the interim arrangemets. So, on the basis of this, this amendment has been moved. All the members have expressed various fears that with this the

original arrngement will continue, but that is not the case. These units that have been entrusted with the interim arrangement are (1) Mysore Sugar Company (2) Karnataka Breweries and Distelleries, (3) Ravidra Distillery (4) Jemini Distelleries (5) Sapthagtri Distilleries and (6) Distilleries, Shimoga. These are the six distelleries that have already been entrusted ಈಗ ಇಲ್ಲಿ ರೂಲ್ಸ್ ಮಾಡಿದ್ದೇವೆ. ಇದರಲ್ಲಿ ಒಂದೆರಡು ಮೂರು ಉದಾಹರಣೆ ಕೊಟ್ಟು ವಿಷಯಗಳನ್ನು ಹೇಳುವುದಾದರೆ, Under the Act we have not provided for any specific purpose saying that the Government or any co-operative sector under taking will be given. But, However in the Rules we have given preference, First priority will be given to Government Sugar Company and next to the co-operatives Over and above this if at all we require any arrack bottling it will be given to the private sector. ಇದು ಇಲ್ಲಿಯವರೆಗೆ ಇರಲಿಲ್ಲ. Why we have used the word the words" to manufacture, or bottle or to manufacture and bottle of arrack" ಇದರಲ್ಲಿ ಈಗಿರತಕ್ಕಂಥ ಪ್ರೊಸೀಜರ್ ಇದೆ, Today all the distilleries ar not manufacturing arrack. There are certain inividuals or bonded werehouses where Rectified Spirit is drawn from the disilleries and it is blended into arrack and it is used to be despatched in drums, That was the original procedure how arrack was being distributed to the people. But the intention of the Government now isto, only entrust manufacturing and bottling of arrack only to distelleries and not to anybody else. The old arrangement will continue till June 1988. After June, 1988. only those people who own distileries granted to them under Section 16 of the Karnataka Excise Act will be allowed to bottle, and in those first preference will be given to Government companies and then to Co-operative Societies and then if need to be others. With these few words, I request the House to pass this Bill. Thank you.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

"೧೯೮೭ನೇ ಇಸವಿಯ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ–೨

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ತಿದ್ದುಪಡಿಯನ್ನು ಮಂಡಿಸುವುದು.

SRI R. VENKATARAMAIAH.—My amendment is like this. I move that—

"To manufacture and Bottle of Arrack, Licence shall be givan to distelleries owned by Sugar Mills owned by Government or Co-operative Sugar Mills that are there in Karnataka State only." ಎಂಬ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ

ಶ್ರೀ ಆರ್. ವೆಂಕಟರಾಮಯ್ಯ.—ನಾನು ಏನು ತಿದ್ದುಪಡಿ ಕೊಟ್ಟಿದ್ದೇನೆ ಅದು ನ್ಯಾಯವಾಗಿದೆ, ಮತ್ತು ತತ್ವಕ್ಕೆ ಬದ್ಧವಾಗಿದೆ ಎಂದು ಹೇಳುತ್ತೇನೆ. ಅದನ್ನು ಅವರೂ ಒಪ್ಪಿಕೊಳ್ಳುತ್ತಿದ್ದಾರೆ. ನಾವು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಇದನ್ನು ಖಾಸಗಿಯವರಿಗೆ ಕೊಟ್ಟರೆ ಪುನಃ ಸೆಕಂಡ್ಸ್ ವ್ಯಾಪಾರ ಶುರುವಾಗುತ್ತದೆ. ಮತ್ತು ಸರ್ಕಾರಕ್ಕೆ ನೂರಿನ್ನೂರು ಕೋಟಿ ರೂಪಾಯಿಗಳು ನಷ್ಟವಾಗುತ್ತದೆ. ಆದಕೋಸ್ಕರ ದಯವಿಟ್ಟು ಇದನ್ನು ಮಂಡ್ಯ ಷುಗರ್ ಫ್ಯಾಕ್ಟರಿಗೆ ಕೊಡಲಿ ಮತ್ತು ಗವರ್ನಮೆಂಟ್ ಓನ್ಡ್ ಷುಗರ್ ಫ್ಯಾಕ್ಟರಿಗಳಿಗೆ ಕೊಡಲಿ ಎಂದು ಹೇಳಿ ಇದನ್ನು ಅವರು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ತಿದ್ದುಪಡಿಯನ್ನು ಒಪ್ಪುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.—ಇಲ್ಲ, ಒಪ್ಪುವುದಿಲ್ಲ.

ಅಧ್ಯಕ್ಷರು.—ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ :

"To manufacture and Bottle of Arrack, Licence shall be given to distelleris owned by Sugar Mills owned by Government or Co-operative Sugar Mills that are there in Karnataka State only."

ತಿದ್ದುಪಡಿ ಬಿದ್ದುಹೋಯಿತು

ಶ್ರೀ ಆರ್. ವೆಂಕಟರಾಮಯ್ಯ.—ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕಬೇಕು ಸ್ವಾಮಿ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ಈಗ ಪ್ರಸ್ತಾವ ಏನೆಂದರೆ, ''೨ನೇ ಖಂಡ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-೩

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, 'ಖಂಡ ೩ ವಿಧೇಯಕ'ದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೩ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, 'ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.'

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ. ಬಿ. ಇನಾಂದಾರ್.—''೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿ ಹತ್ತಿಗಿರಣಿ ಕಾರ್ಖಾನೆ ಮತ್ತು ಮಂಗಳೂರು ರಸಗೊಬ್ಬರ ಕಾರ್ಖಾನೆ ಮುಚ್ಚಿರುವುದರಿಂದ ಕಾರ್ಮಿಕರಿಗೆ ತೊಂದರೆಯಾಗಿರುವುದು

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಈ ಕೈಗಾರಿಕೆಯಲ್ಲಿರುವಂಥ ಮುಗ್ಗಟ್ಟು ಅದರಲ್ಲೂ ಹತ್ತಿ ಗಿರಣಿ ಕಾರ್ಖಾನೆ ಮುಗ್ಗಟ್ಟಿನ ಬಗ್ಗೆ ಮತ್ತು ಬೇರೆ ಕಾರ್ಖಾನೆ ಮುಗ್ಗಟ್ಟಿನ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ತಂದಿದ್ದೆವು. ಅದರ ಮುಖ್ಯತ್ವ ಇದೆ ಎಂಬುದನ್ನು ತಾವು ಒಪ್ಪಿಕೊಂಡಿರಿ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿಕೊಂಡರು. ಅದರ ಆಧಾರದ ಮೇಲೆ ನಿನ್ನೆ ದಿವಸ ಚರ್ಚೆ ಆಗಬೇಕಾಗಿತ್ತು. ನಂತರ.....

(ಮಾನ್ಯ ಬಸವಲಿಂಗಪ್ಪನವರ ಕಡೆ ನೋಡಿಕೊಂಡು ಮಾತು ನಿಲ್ಲಿಸಿದರು)

ಅಧ್ಯಕ್ಷರು.—ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮನ್ನು ಮಂತ್ರಿಯಾಗಲಿ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ಸ್ವಲ್ಪ ಹೊರಗೆ ಹೋಗಿ ಬನ್ನಿ. ಸ್ವಲ್ಪ ರೆಸ್ಟ್ ತೆಗೆದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ತಾವು ಮಂತ್ರಿಯಾಗಬೇಕು ಎಂಬುದು ಅವರ ಆಸೆ.

ಅಧ್ಯಕ್ಷರು.—ನಾನು ಮಂತ್ರಿಯಾಗಿ ಸ್ಪೀಕರ್ ಆಗಿದ್ದೇನೆ. ಸ್ಪೀಕರ್ ಆದಮೇಲೆ ಮಂತ್ರಿ ಆಗಬಾರದು. ಮೆಂಬರ್ ಆಗಿ ಕೂರಬೇಕು.

ಶ್ರೀ ಎಂ. ಎಸ್. ಕೃಷ್ಣನ್ ಅಧ್ಯಕ್ಷರೆ,—ಈ ವಿಷಯದಲ್ಲಿ ಬಹಳ ಮುಖ್ಯತ್ವ ಇದೆ ಎಂಬುದನ್ನು ಮೊನ್ನೆ ತಾವೂ ಕೂಡ ಹೇಳಿದಿರಿ, ಮುಖ್ಯಮಂತ್ರಿಗಳೂ ಕೂಡ ಅದನ್ನೇ ಮಾತನಾಡಿದರು. ಈಗ ನನಗೆ ಏನು ಕಂಡುಬರುತ್ತದೆ ಎಂದರೆ ಅದರ ಮುಖ್ಯತ್ವವನ್ನು ಕಡಿಮೆ ಮಾಡುವ ರೀತಿಯಲ್ಲಿ ಯೋಜನೆ ನಡೆಯುತ್ತಿದ್ದೆಯೋ ಏನೋ ಎಂದು ಅನುಮಾನ. ತಾವು ಎಷ್ಟು ಹೊತ್ತಿನವರೆಗೆ ಕೂರುತ್ತೀರೋ ನನಗೆ ಗೊತ್ತಿಲ್ಲ. ಈಗಾಗಲೇ ನಾಲ್ಕುಮುಕ್ಕಾಲಾಯಿತು. ಇದು ಮುಖ್ಯವಾದ ವಿಷಯ. ಅನೇಕ ವಿಷಯಗಳನ್ನು ಮಾತನಾಡಬೇಕಾಗಿದೆ. ಆದ್ದರಿಂದ ತಾವು ಎಷ್ಟು ಹೊತ್ತು ಕೂರುತ್ತೀರಿ ಎಂಬುದು ಕ್ಲಿಯರ್ ಆಗಿಬಿಟ್ಟರೆ ಒಳ್ಳೆಯದು. ನಾನೇನೋ ಅರ್ಧ ಗಂಟೆ ಅಲ್ಲ ಒಂದು ಗಂಟೆ ಬೇಕಾದರೂ ಮಾತನಾಡುತ್ತೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಇವತ್ತು ಮುಗಿಸೋಣ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ತಯಾರಾಗಿದ್ದಾರೆ. ಉತ್ತರ ಹೇಳುತ್ತಾರೆ. ನಿಮ್ಮದು ಮುಗಿದಮೇಲೆ ವೀರಪ್ಪನವರದ್ದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಭೂಪತಿಯವರು ಇದ್ದಾರೆ, ವೀರಪ್ಪಮೊಯಿಲಿ ಅವರಿದ್ದಾರೆ, ವೆಂಕಟರಾಮಯ್ಯನವರಿದ್ದಾರೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ಎಲ್ಲದಕ್ಕೂ ಇರುತ್ತಾರೆ. ನೀವು ಶುರು ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ನೀವಿದ್ದೀರಲ್ಲ ಗೂಟ ಹೊಡ್ಕೊಂಡು. ಇಂಥ ಚುಚ್ಚು ಮಾತುಗಳನ್ನು ಬಿಟ್ಟರೆ ಒಳ್ಳೆಯದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಭೆ ೧೧ ಗಂಟೆಯಿಂದ ೫ ಗಂಟೆಯವರೆಗೆ ನಡೆಯಬೇಕೇ ವಿನಹ ೮ ಗಂಟೆಯವರೆಗೆ ನಡೆಸಿದರೆ ನೀವು ಕೂತ್ಕೊಂಡು ಮಾಡಿಕೊಳ್ಳಿ, ನಾವು ಹೋಗುತ್ತೇವೆ. ಯಾವುದಕ್ಕೂ ಒಂದು ಟೈಮ್ ಇರಬೇಕು. ಏನಿದು ?